Swabhimani Sahakari

Pages : 34 / 20₹

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

Volume - 21
Issue - 12
December - 2024

2025 ಅಂತರರಾಷ್ಟ್ರೀಯ ಸಹಕಾರ ವರ್ಷ
ಧ್ಯೇಯ: "ಸಹಕಾರ ಸಂಸ್ಥೆಗಳ ಮೂಲಕ ಉತ್ತಮ ಜಗತ್ತನ್ನು ನಿರ್ಮಿಸಲು ಸಾಧ್ಯ"

ಜನವರಿ 01, 2025
ಸೌಹಾರ್ದ ಸಹಕಾರಿ
ದಿನಾಚರಣೆ

ವಿಕಸಿತ ಭಾರತ ನಿರ್ಮಾಣದಲ್ಲಿ ಸಹಕಾರಿಗಳಾದ ನಮ್ಮ ಪಾತ್ರ ಬಹಳ
ಮುಖ್ಯವಾಗಿದೆ ಎಂದು ಭಾವಿಸುತ್ತಾ....2024ವರ್ಷಕ್ಕೆ ವಿಧಾಯ ಹೇಳುತ್ತಾ
ನೂತನ 2025 ವರ್ಷವನ್ನು ಸ್ವಾಗತಿಸೋಣ ಬನ್ನಿ....

ಅಧ್ಯಕ್ಷರು, ಉಪಾಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರುಗಳು ಹಾಗೂ ವ್ಯವಸ್ಥಾಪಕ ನಿರ್ದೇಶಕರು



ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ
ಡಿಸೆಂಬರ್ 9ರಿಂದ 19ರ ವರೆಗೆ
ಚಳಿಗಾಲದ ಅಧಿವೇಶನ ನಡೆಯಲಿದೆ



ಮಂಡ್ಯದಲ್ಲಿ 87ನೇ
ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ
ಡಿಸೆಂಬರ್ 20, 21, 22 ರಂದು ನಡೆಯಲಿದೆ



ಡಿಸೆಂಬರ್ 25, ಕ್ರಿಸ್ಮಸ್

ಸೌಹಾರ್ದ ಸಹಕಾರಿಗಳ ಸಂಖ್ಯೆ: 6407

ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1692



ಜಿ. ನಂಜನಗೌಡ

ಎಲ್ಲರಿಗೂ ನಮಸ್ಕಾರಗಳು ಹಾಗೂ ಕ್ರಿಸ್‌ಮಸ್ ಹಬ್ಬದ ಶುಭಾಶಯಗಳು. ಈ ಬಾರಿಯ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆಯ 7 ದಿನಗಳಲ್ಲಿ ಸಂಯುಕ್ತ ಸಹಕಾರಿಗೆ ಸಪ್ತಾಹದ ಕೊನೆಯ ದಿನದ ಸಮಾರೋಪ ಸಮಾರಂಭದ ಅವಕಾಶವನ್ನು ದಿನಾಂಕ 20.11.2024 ರಂದು ಬೆಳಗಾವಿಯಲ್ಲಿ ಆಚರಿಸಲಾಯಿತು.

# 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಯಶಸ್ವಿ ಆಚರಣೆಗೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು

**ಆತ್ಮೀಯ ಸಹಕಾರಿ ಬಂಧುಗಳೇ,**

ಎಲ್ಲರಿಗೂ ನಮಸ್ಕಾರಗಳು ಹಾಗೂ ಕ್ರಿಸ್‌ಮಸ್ ಹಬ್ಬದ ಶುಭಾಶಯಗಳು. ಈ ಬಾರಿಯ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆಯ 7 ದಿನಗಳಲ್ಲಿ ಸಂಯುಕ್ತ ಸಹಕಾರಿಗೆ ಸಪ್ತಾಹದ ಕೊನೆಯ ದಿನದ ಸಮಾರೋಪ ಸಮಾರಂಭದ ಅವಕಾಶವನ್ನು ದಿನಾಂಕ 20.11.2024 ರಂದು ಬೆಳಗಾವಿಯಲ್ಲಿ ಆಚರಿಸಲಾಯಿತು. ಮಾನ್ಯ ಸಹಕಾರ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಮತ್ತು ಮಾನ್ಯ ಸಹಕಾರ ಸಂಘಗಳ ನಿಬಂಧಕರ ಅಧ್ಯಕ್ಷತೆಯಲ್ಲಿ ನಡೆದ ಸಭೆಗಳ ತೀರ್ಮಾನದಂತೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮತ್ತು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಇವುಗಳ ನೇತೃತ್ವದಲ್ಲಿ ಹಾಗೂ ಶ್ರೀ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ, ಕರ್ನಾಟಕ ರಾಜ್ಯ ಸಹಕಾರ ಚಲನಚಿತ್ರ ಮತ್ತು ಲಲಿತಕಲಾ ಮಹಾಮಂಡಳ ನಿ., ಮತ್ತು ಬೆಳಗಾವಿ ಜಿಲ್ಲೆಯ ಎಲ್ಲಾ ಸಹಕಾರ ಸಂಸ್ಥೆಗಳ ಹಾಗೂ ಸಹಕಾರ ಇಲಾಖೆಯ ಸಹಯೋಗದೊಂದಿಗೆ ಆಚರಿಸಲು ಅವಕಾಶ ಲಭ್ಯವಾಗಿತ್ತು. ಈ ಹಿನ್ನೆಲೆಯಲ್ಲಿ ದಿನಾಂಕ 20.11.2024ರಂದು ಬೆಳಗಾವಿಯಲ್ಲಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಹಾಗೂ ಜಿಲ್ಲಾ ಹಾಲು ಉತ್ಪಾದಕರ ಒಕ್ಕೂಟ ಮತ್ತು ಉಳಿದ ಎಲ್ಲಾ ಸಹಕಾರ ಸಂಸ್ಥೆಗಳ ಸಹಕಾರದಿಂದ ಕೆ.ಎಲ್.ಇ ಸಂಸ್ಥೆಯ ಜವಾಹರಲಾಲ್ ನೆಹರು ವೈದ್ಯಕೀಯ ಸಂಸ್ಥೆಯ ಆವರಣದಲ್ಲಿರುವ ಜಿರ್ಗೆ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮವನ್ನು ಮಾನ್ಯ ಸಹಕಾರ ಸಚಿವರಾದ ಶ್ರೀ ಕೆ.ಎನ್. ರಾಜಣ್ಣರವರು ಉದ್ಘಾಟಿಸಿದ್ದು ಕಾರ್ಯಕ್ರಮಕ್ಕೆ ಮೆರುಗು ತಂದಿತು. ಅಧ್ಯಕ್ಷತೆಯನ್ನು ಮಾನ್ಯ ಶಾಸಕರಾದ ಶ್ರೀ ಆಸೀಫ್ ಸೇಠ್ ವಹಿಸಿದ್ದರು. ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಮಾನ್ಯ ಲೋಕೋಪಯೋಗಿ ಸಚಿವರಾದ ಶ್ರೀ ಸತೀಶ ಜಾರಕಿಹೊಳಿ ಯವರು ಧ್ವಜಾರೋಹಣ ನೆರವೇರಿಸಿದರು. ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರೂ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಶ್ರೀಮತಿ ಲಕ್ಷ್ಮಿ ಹೆಬ್ಬಾಳಕರರವರು ವಸ್ತು ಪ್ರದರ್ಶನ ಮಳಿಗೆಯನ್ನು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ಮಾಜಿ ಸಹಕಾರ ಸಚಿವರು ಹಾಗೂ ಮಾಜಿ ಉಪ ಮುಖ್ಯ ಮಂತ್ರಿಗಳು ಹಾಗೂ ಹಾಲಿ ಶಾಸಕರು ಆಗಿರುವ ಶ್ರೀ ಲಕ್ಷ್ಮಣ ಸವದಿ ಇವರು ಸಹಕಾರಿ ಸಂಸ್ಥೆಗಳ ಕಾರ್ಯಗಳನ್ನು ಶ್ಲಾಘಿಸಿದರು ಮತ್ತು ಅನೇಕ ವಿಷಯಗಳ ಬಗ್ಗೆ ಸಂಶೋಧನೆಯು ಈ ಚಳುವಳಿಯಲ್ಲಿ ಆಗಬೇಕೆಂದು ತಮ್ಮ ಆಶಯ ವ್ಯಕ್ತಪಡಿಸಿದರು. ಇನ್ನುಳಿದಂತೆ ಕಾರ್ಯಕ್ರಮದಲ್ಲಿ ಜಿಲ್ಲೆಯ ಹಿರಿಯ ಸಹಕಾರಿ ಹಾಗೂ ಮಾಜಿ ರಾಜ್ಯಸಭಾ ಸದಸ್ಯರಾದ ಶ್ರೀ ಪ್ರಭಾಕರ ಕೋರೆಯವರು, ಜಿಲ್ಲೆಯ ಶಾಸಕರು, ಸಂಸದರು, ಮಹಾಮಂಡಳಗಳ ಅಧ್ಯಕ್ಷರು, ನಿರ್ದೇಶಕರು, ಸಹಕಾರಿ ಇಲಾಖೆಯ ಹಿರಿಯ ಅಧಿಕಾರಿಗಳು ಸೇರಿದಂತೆ ಜಿಲ್ಲೆಯಾದ್ಯಂತ 4600ಕ್ಕೂ ಹೆಚ್ಚು ಸಹಕಾರಿಗಳು ಭಾಗವಹಿಸಿದ್ದರು. ಕಾರ್ಯಕ್ರಮ ಅತ್ಯಂತ ಪರಿಣಾಮಕಾ–ರಿಯಾಗಿ, ಸಂಭ್ರಮ ಸಡಗರದಿಂದ ಅರ್ಥಪೂರ್ಣವಾಗಿ ಆಚರಿಸಲು ಸಹಕರಿಸಿದ ಎಲ್ಲಾ ಸಹಕಾರಿಗಳಿಗೆ, ಸದಸ್ಯರಿಗೆ, ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಸಭೆಯಲ್ಲಿ ಮಾತನಾಡಿದ ಸಚಿವರುಗಳು, ಹಿರಿಯ ಸಹಕಾರಿಗಳು ಸಹಕಾರ ಕ್ಷೇತ್ರದ ಅಸ್ತಿತ್ವ, ಮಹತ್ವ ಮತ್ತು ಅದರ ಸಾಧನೆಗಳನ್ನು ವಿವರಿಸಿ ಸಹಕಾರಿ ಕ್ಷೇತ್ರದ ಅವಶ್ಯಕತೆಯ ಬಗ್ಗೆ ಮಾತನಾಡಿರುವುದು ಸಪ್ತಾಹದ ಆಚರಣೆ ಸಾರ್ಥಕವಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ಸಪ್ತಾಹದಲ್ಲಿ ಸಹಕಾರಿ ಜಾತಾ, ಸಹಕಾರಿ ವಸ್ತು ಪ್ರದರ್ಶನ, ಸಾಧನೆಗಳ ಬಗ್ಗೆ ಟ್ಯಾಬ್ಲೋಗಳ ಮೂಲಕ ಪ್ರದರ್ಶನ, ಉತ್ತಮ ಸಹಕಾರಿ ಸಂಸ್ಥೆಗಳಿಗೆ ಹಾಗೂ ಶ್ರೇಷ್ಠ ಸಹಕಾರಿಗಳಿಗೆ ಸನ್ಮಾನ, ಉತ್ತಮ ವ್ಯವಸ್ಥೆಗಳು ಎಲ್ಲವೂ ಸಹಕಾರ ಸಪ್ತಾಹದ ಆಚರಣೆ ಅತ್ಯಂತ ಪರಿಣಾಮಕಾರಿಯಾಗಿ ಜರುಗಿತು ಎಂಬುದರ ದ್ಯೋತಕವಾಗಿತ್ತು.

ಬೆಳಗಾವಿ ಜಿಲ್ಲೆ ವೀರರನಾಡು, ಸಕ್ಕರೆ ನಾಡು, ಸಹಕಾರಿ ಸಸ್ಯಕಾಶಿ, ಅನೇಕ ವೈಶಿಷ್ಟ್ಯತೆಯಿಂದ ಕೂಡಿದ ವಿಭಿನ್ನ ರೀತಿಯ ಸಹಕಾರಿ ಸಂಸ್ಥೆಗಳು ಸಕ್ಕರೆ ಕಾರ್ಖಾನೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಪಟ್ಟಣ ಸಹಕಾರ ಬ್ಯಾಂಕುಗಳು, ಕೃಷಿ ಪತ್ತಿನ ಸಹಕಾರ ಸಂಘಗಳು, ಹಾಲು ಉತ್ಪಾದಕರ ಸಹಕಾರ ಸಂಘಗಳು ಸೌಹಾರ್ದ ಸಹಕಾರಿ ಸಂಸ್ಥೆಗಳು ವಿಶೇಷವಾಗಿ ಸಹಕಾರಿ ಇಲಾಖೆಯ ಅಧಿಕಾರಿಗಳು ಅತ್ಯಂತ ಉತ್ಸಾಹದಿಂದ ಸಪ್ತಾಹದ ಆಚರಣೆಗೆ ಸಹಯೋಗ ನೀಡಿದ್ದಾರೆ. ಎಲ್ಲರಿಗೂ ಸಂಯುಕ್ತ ಸಹಕಾರಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಸ್ವಾಭಿಮಾನಿ ಸಹಕಾರಿ
ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 17 & 18ನೇ ಅಡ್ಡರಸ್ತೆ ಮಧ್ಯೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055
ದೂರವಾಣಿ/ ಫ್ಯಾಕ್ಸ್ : 080–23378375–80, 23474408,23573291
ಇ–ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

**ಒಳಪುಟಗಳಲ್ಲಿ. . .**

ಅಧ್ಯಕ್ಷರ ನುಡಿ.......... 2
ಸಂಪಾದಕೀಯ.......... 3
ಜ್ಞಾನ ಜ್ಯೋತಿ.......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .... .......... 05–22
ಸೌಹಾರ್ದ ಸಹಕಾರಿಗಳ ಸಮಾಚಾರಗಳು .... .......... 23–25
**ಲೇಖನಗಳು :**
ಸಹಕಾರ ಸಂಸ್ಥೆಗಳಲ್ಲಿ ಹೊರಗುತ್ತಿಗೆ ನೇಮಕ – ಒಂದು ವಿಮರ್ಷೆ.......... 26–27
"ಐಡೆಂಟಿಟಿ ಕ್ರೈಸಿಸ್ ಎನ್ನುವುದರ ಐಡೆಂಟಿಟಿ" ... .......... 28–29
ಭಾರತೀಯ ಸಂವಿಧಾನಕ್ಕೆ 75ರ ಸಂಭ್ರಮ ಮಹಾನ್ ವೈಭವದ ಪಯಣ .......... 30–34

# ಸಂಪಾದಕೀಯ

## ಐ.ಸಿ.ಎ ಜಾಗತಿಕ ಸಹಕಾರ ಸಮ್ಮೇಳನ – 2024 ವಿಶ್ವ ಸಂಸ್ಥೆಯ ಅಂತರರಾಷ್ಟ್ರೀಯ ಸಹಕಾರಿ ವರ್ಷ ಘೋಷಣೆ. ಸಹಕಾರಿ ಸಂಸ್ಥೆಗಳು ಅರ್ಥಪೂರ್ಣ ಕ್ರೀಯಾಯೋಜನೆ ಸಿದ್ಧಪಡಿಸುವುದು, ಅನುಷ್ಠಾನಕ್ಕೆ ಕ್ರಮಕ್ಕೆ ಆದ್ಯತೆ.

ದೆಹಲಿಯಲ್ಲಿ ಇದೇ ದಿನಾಂಕ 25–11–2024 ರಿಂದ 29–11–2024 ರವರೆಗೆ ಅಂತರ ರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯವರು ಏರ್ಪಡಿಸಿದ್ದ ಜಾಗತಿಕ ಸಹಕಾರ ಸಮ್ಮೇಳನವನ್ನು ದೇಶದ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಉದ್ಘಾಟಿಸಿರುವುದು ನಮ್ಮ ದೇಶಕ್ಕೆ ವಿಶ್ವ ಸಹಕಾರಿ ನಾಯಕತ್ವ ಲಭ್ಯವಾಗಿರುವದು ನಾವು ಸಹಕಾರಿಗಳು ಹೆಮ್ಮೆ ಪಡುವ ವಿಷಯ. ಭಾರತಕ್ಕೆ ಸಂದ ಗೌರವ. ಮಾನ್ಯಪ್ರಧಾನ ಮಂತ್ರಿಯವರು ಸಹಕಾರಿ ಸಮ್ಮೇಳನದಲ್ಲಿ ಭಾಗವಹಿಸಿದ ಸಹಕಾರಿಗಳಿಗೆ ಸ್ವಾಗತ ಮಾಡುವ ಸಂದರ್ಭದಲ್ಲಿ ಈ ದೇಶದ ರೈತರ, 8 ಲಕ್ಷ ಸಹಕಾರಿ ಸಂಸ್ಥೆಗಳು, 10 ಲಕ್ಷ ಸ್ವಸಹಾಯ ಗುಂಪುಗಳ ಪಶುಸಂಗೋಪನಕಾರರು ಹಾಗೂ ಸಮಗ್ರ ನಾಗರೀಕರ ಪರವಾಗಿ ಸ್ವಾಗತಿಸಿ ಇದು ನಮ್ಮ ಗೌರವ ಎಂದು ತಿಳಿಸಿರುವುದನ್ನು ಸಹಕಾರಿಗಳ ಕರ್ತವ್ಯ ಹಾಗೂ ಜವಾಬ್ದಾರಿ ಹೆಚ್ಚಾಗಿದೆ ಎಂದು ನಾವು ತಿಳಿಯಬೇಕು.

ವಿದೇಶಿ ಪರಂಪರೆಯಲ್ಲಿ ಸಹಕಾರ ಕ್ಷೇತ್ರ ಒಂದು ಮಾದರಿ ಎನಿಸಿದರೆ ಭಾರತೀಯ ಪರಂಪರೆಯಲ್ಲಿ ಸಹಕಾರ ಒಂದು ಜೀವನ ಪದ್ಧತಿಯಾಗಿದೆ ಎಂದು ತಿಳಿಸಿದ ಪ್ರಧಾನ ಮಂತ್ರಿಯವರು ಸಹಕಾರ ಕ್ಷೇತ್ರ ದೇಶದ ಗ್ರಾಮೀಣ ಜನರ ಜೀವನ ಚಿತ್ರಣವನ್ನೇ ಬದಲಾಯಿಸಿದೆ ಎಂದು ತಿಳಿಸಿರುವುದು ಪ್ರಧಾನ ಮಂತ್ರಿ ಯವರು ಸಹಕಾರ ಕ್ಷೇತ್ರದ ಬಗ್ಗೆ ಹೊಂದಿರುವ ಕಾಳಜಿ, ನಂಬಿಕೆ ಹಾಗೂ ವಿಶ್ವಾಸಗಳನ್ನು ಧೃಡಪಡಿಸುತ್ತದೆ.

ವಿಶ್ವ ಸಂಸ್ಥೆಯವರ ಘೋಷಣೆ ಸಹಕಾರ ಸಂಸ್ಥೆಗಳು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡಬಲ್ಲವು ಎಂಬುದನ್ನು ಧೃಡಪಡಿಸಿದ ಮೋದಿಯವರ ನಂಬಿಕೆಗೆ ಅನುಗುಣವಾಗಿ ದೇಶದ ಸಹಕಾರಿಗಳ ಕರ್ತವ್ಯ ಹಾಗೂ ಜವಾಬ್ದಾರಿಗಳನ್ನು ಹೆಚ್ಚು ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ನಿರ್ವಹಿಸುವ ಅಗತ್ಯತೆ ಇದೆ. ಸಹಕಾರಿಗಳು ಇದನ್ನು ಉತ್ತಮ ಅವಕಾಶವೆಂದು ಭಾವಿಸಿ ಕಾರ್ಯೋನ್ಮುಖರಾಗುವ ಬಗ್ಗೆ ಚಿಂತಿಸಬೇಕು.

ಇದರ ಜೊತೆಗೆ ವಿಶ್ವ ಸಂಸ್ಥೆಯವರು 2025 ವರ್ಷವನ್ನು ಅಂತರರಾಷ್ಟ್ರೀಯ ಸಹಕಾರಿ ವರ್ಷವೆಂದು ಘೋಷಣೆ ಮಾಡಿದ್ದಾರೆ, ಅಂತರ ರಾಷ್ಟ್ರೀಯ ಸಹಕಾರ ವರ್ಷವೆಂದರೆ ಸಹಕಾರಿಗಳಿಗೆ ಲಭ್ಯವಾಗಿರುವ ಉತ್ತಮ ಅವಕಾಶ. ಪೂರ್ಣ ವರ್ಷ ಸಹಕಾರ ಸಂಸ್ಥೆಗಳಲ್ಲಿ ಕಾರ್ಯಟುವಟಿಕೆಗಳು ನಡೆಯುತ್ತಲೆ ಇರಬೇಕು. ಸಹಕಾರಿಗಳಲ್ಲಿ ಜಾಗೃತಿ ಮೂಡಬೇಕು. ಸಹಕಾರ ಸಂಸ್ಥೆಗಳು ಸದಸ್ಯ ಹಾಗೂ ಸಮಾಜ ಮುಖಿಯಾಗಿ ಕಾರ್ಯನಿರ್ವಹಿಸುವಂತಹ ಯೋಜನೆಗಳನ್ನು ಹಾಕಿಕೊಂಡು ಅವುಗಳ್ನು ಹಂತ ಹಂತವಾಗಿ ಜಾರಿಗೆ ಮಾಡುವ ಬಗ್ಗೆ ಚಿಂತನೆ ಅಗತ್ಯ.

ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಸಹಕಾರಿ ಅಸ್ತಿತ್ವದ ಬಗ್ಗೆ, ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ, ಸಹಕಾರಿಯ ಸಾಧನೆಗಳ ಬಗ್ಗೆ, ಸಹಕಾರಿಯ ಮುಂಬರುವ ಯೋಜನೆಗಳ ಅನುಷ್ಠಾನದ ಬಗ್ಗೆ, ದೇಶದ ಸಹಕಾರಿ ಕ್ಷೇತ್ರದ ಪ್ರಸಕ್ತ ವಿದ್ಯಮಾನಗಳನ್ನು ಗಮನದಲ್ಲಿಟ್ಟು ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿ ಎಲ್ಲ ಸದಸ್ಯರಿಗೆ ಸ್ವೀಕಾರ ಆಗುವ ಹಾಗೆ ಸಿದ್ಧಪಡಿಸಬೇಕು. ಸದಸ್ಯರು ಸ್ಪಂದಿಸುವಂತಿರಬೇಕು. ಕ್ರಿಯಾಯೋಜನೆ ಕ್ರಮಬದ್ಧವಾಗಿ ಅನುಷ್ಠಾನವಾದರೆ ಸಹಕಾರಿ ಸಂಸ್ಥೆಗಳು ಉತ್ತಮ ಫಲಿತಾಂಶ ನೀಡಬಲ್ಲವು ಎಂಬುದನ್ನು ಸಹಕಾರಿಗಳು ಗಮನಿಸಬೇಕು.



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

ಓರ್ವ ಸಂತನು ದಿನವಿಡೀ ದುಡಿದು ಒಂದು ಸಂಜೆಯ ಹೊತ್ತು, ತನ್ನ ಗುಡಿಸಲ ಎದುರು ಕುಳಿತು ದೇವರ ನಾಮಗಳನ್ನು ಭಕ್ತಿಭಾವದಿಂದ ಹಾಡುತ್ತಿದ್ದನು. ನೆರೆ–ಹೊರೆಯವರೆಲ್ಲ ಕೇಳಿ ಸಂತಸ ಪಡುತ್ತಿದ್ದರು. ಈ ಸುದ್ದಿಯ ಆ ದೇಶದ ರಾಜನಿಗೂ ತಲುಪಿತು. ಆಯುಷ್ಯದಲ್ಲಿ ಒಮ್ಮೆಯಾದರೂ ಆ ಸಂತನ ಹಾಡುಗಳನ್ನು ಕೇಳಬೇಕೆಂದು ಎಲ್ಲರೂ ಹೇಳುತ್ತಿದ್ದರು. ರಾಜನೂ ಕೂಡಾ ಒಂದು ದಿನ ಸಂತನ ಹಾಡೂ ಕೇಳಲೆಂದು ಬಂದನು. ಭಕ್ತಿ ಭಾವ ಪರವಶನಾಗಿ ಹಾಡುತ್ತಿದ್ದ ಸಂತನ ಹಾಡನ್ನು ಕೇಳಿ ರಾಜನು ಆನಂದ ಭಾಷ್ಪವನ್ನೇ ಸುರಿಸಿದನು. ಜನರೆಲ್ಲರೂ ಹೋದ ಮೇಲೆ ರಾಜನು ಸಂತನ ಹತ್ತಿರ ಹೋಗಿ ಹೇಳಿದ – "ನೀವು ನನ್ನ ಅರಮನೆಯಲ್ಲಿ ಆರಾಮವಾಗಿದ್ದು ಹಾಡಬನ್ನಿ. ಈ ಚಿಕ್ಕ ಗುಡಿಸಲಿನಲ್ಲಿ ಏಕೆ ಕಷ್ಟಪಡುತ್ತೀರಿ"? ಸಂತ ಹೇಳಿದ – "ಮಹಾರಾಜರೆ, ಈ ಗುಡಿಸಲು ಚಿಕ್ಕದಿರಬಹುದು ಆದರೆ ನಾನು ಬಡವನಲ್ಲ. ಏಕೆಂದರೆ ಈ ಗುಡಿಸಲಿನಲ್ಲಿ ನನ್ನ ಆರಾಧ್ಯ ದೇವನೇ ವಾಸಿಸಿದ್ದಾನೆ. ಐವತ್ತು ವರುಷಗಳಿಂದ ನಾನು ಈ ಗುಡಿಸಲಿನಲ್ಲಿ ಆನಂದವಾಗಿ ಬದುಕಿದ್ದೇನೆ. ಇಂದು ನಿಮ್ಮ ಆಮಿಷಕ್ಕೆ ಒಳಗಾಗಿ ನಿಮ್ಮಿಂದ ಏನಾದರೂ ಬೇಡಿ ಪಡೆದರೆ ನಾನು ಆ ಮಹಾದೇವನಿಗೆ ಅಗೌರವ ಸಲ್ಲಿಸಿದಂತಾಗುತ್ತದೆ." ಈ ನುಡಿಗಳನ್ನು ಕೇಳುತ್ತಲೇ ರಾಜನು ಸಂತರ ವಿಶಾಲ ಭಾವ, ಸಂತೃಪ್ತ ಮನಸ್ಸು ಕಂಡು ಬೆರಗಾದನು.

ಮನಸ್ಸು ವಿಶಾಲವಾದರೆ ನಮ್ಮ ಮನೆಯ ಒಂದು ಕಟ್ಟಿಗೆಯ ಖುರ್ಚಿಯೂ ಸಂತಸಕೊಡುತ್ತದೆ. ಮನಸ್ಸು ಸಂಕುಚಿತವಾದರೆ ಬಂಗಾರದ ಖುರ್ಚಿಯೂ ನಮಗೆ ಸಂತಸ ಕೊಡಲಾರದು. ಭಾವ ಶುದ್ಧವಾದರೆ ಮನಸ್ಸು ಹಸನಾದರೆ ಮನೆಯಲ್ಲಿಯೇ ಸ್ವರ್ಗ ಇಳಿಯುತ್ತದೆ. ಈ ಮನಸ್ಸಿನಲ್ಲಿರುವ ತೃಷ್ಣೆ, ತಿರಸ್ಕಾರ, ದೌರ್ಬಲ್ಯ ಎಂಬ ಮೂರು ದೋಷಗಳನ್ನು ನೋಡಿದ್ದೇವೆ. ಈಗ ನಾಲ್ಕನೆಯ ದೋಷ 'ವ್ಯಾಮೋಹ'ವನ್ನು ನೋಡುತ್ತೇವೆ.

## "ವ್ಯಾಮೋಹ"

ಜೀವನದಲ್ಲಿ ಏನಾದರೂ ಸಾಧಿಸಬೇಕಾದರೆ ಒಂದು ಸಾಧನೆ ಅಥವಾ ಸಲಕರಣೆ ಅವಶ್ಯ. ಸಾಧನೆಯು ಒಳ್ಳೆಯದಾಗಿದ್ದರೆ ಸಾಧ್ಯವು ಸುಲಭವಾಗಿ ಕೈಗೂಡುತ್ತದೆ. ಸಾಧನೆಯು ಸರಿಯಾಗಿ ಇರದಿದ್ದರೆ ಎಷ್ಟೇ ಪ್ರಯತ್ನ ಮಾಡಿದರೂ ಕಾರ್ಯವು ಸಿದ್ಧಿಸುವುದಿಲ್ಲ. ಕಣ್ಣು ಸರಿಯಾಗಿದ್ದರೆ ರೂಪ ದರ್ಶನ. ಇಲ್ಲದಿದ್ದರೆ ವಸ್ತು ಎಷ್ಟೇ ಸುಂದರವಾಗಿದ್ದರೂ ನಾವು ಅದನ್ನು ನೋಡಲಾರೆವು.

ಪರಮ ಶಾಂತಿಯನ್ನು ಪಡೆಯುವುದಕ್ಕೆ ಮನವೇ ಸಾಧನ. ನಿಸರ್ಗವು ಕರುಣಿಸಿದ ಅದ್ಭುತ ಸಾಧನವೇ ಮನಸ್ಸು. ಇದು ಅತ್ಯಂತ ಸೂಕ್ಷ್ಮವಾಗಿದೆ. ಭೌತವಸ್ತುಗಳೆಲ್ಲ ಕೈಗೆ ಸಿಗುತ್ತವೆ. ಕಣ್ಣಿಗೆ ಕಾಣುತ್ತವೆ. ಆದರೆ ಈ ಮನಸ್ಸು ಕೈಗೆ ಸಿಗುವುದಿಲ್ಲ. ಕಣ್ಣಿಗೂ ಕಾಣುವುದಿಲ್ಲ. ಯಾವ ಕ್ಯಾಮರಾ ಕೂಡಾ ಈ ಮನಸ್ಸಿನ ಚಿತ್ರವನ್ನು ಸೆರೆ ಹಿಡಿಯಲಾರದು ಅಂತೆಯೇ ನಮ್ಮ ಮನಸ್ಸು ನಮಗೂ ಕಾಣುವುದಿಲ್ಲ. ಇನ್ನೊಬ್ಬರಿಗೂ ಕಾಣುವುದಿಲ್ಲ.

ಈ ಮನಸ್ಸು ಪರಿಶುದ್ಧವೂ, ಪ್ರಸನ್ನವೂ ಆದರೆ ನಮ್ಮ ಜೀವನದಲ್ಲಿ ಪರಮಶಾಂತಿಯು ನೆಲೆಸುತ್ತದೆ. ನೋಡಿದ ರೂಪ, ಕೇಳಿದ ಶಬ್ದ ಮಾಡಿದ ಮಾಟ ನಮಗೆ ಸಂತೋಷ ಕೊಡುತ್ತಿದ್ದರೆ ಅದೇ ಪ್ರಸನ್ನ ಮನಸ್ಸು, ಅದ–ರಿಂದ ಜೀವನದಲ್ಲಿ ಪ್ರಶಾಂತಿ ನೆಲೆಸುತ್ತದೆ. ಇದನ್ನೆ ಪ್ರಾಸಾದಿಕ ಜೀವನ ಎನ್ನುತ್ತಾರೆ. ಪ್ರಾಸಾದಿಕ ದೃಷ್ಟಿಯಿಂದ ನೋಡಿದರೆ ಜಗತ್ತು ಸತ್ಯಂ–ಶಿವಂ–ಸುಂದರಂ ಆಗಿ ಕಾಣುತ್ತದೆ. ಶಾಂತಿ–ಸಮಾಧಾನ ನೀಡುತ್ತದೆ. ಮಲಿನ ದೃಷ್ಟಿಯಿಂದ ನೋಡಿದರೆ ಇದೇ ಜಗತ್ತು ಅಸತ್ಯ–ಅಮಂಗಲ–ಅಸಹ್ಯವಾಗಿ ಕಾಣುತ್ತದೆ. ಬಂಧನವನ್ನುಂಟ ಮಾಡುತ್ತದೆ. ದುಃಖ ದುಮ್ಮಾನ ತರುತ್ತದೆ.

ಉದಾಹರಣೆಗೆ – ಕಲ್ಲು ಸಕ್ಕರೆಯನ್ನು ಹಾಗೇ ಕೊಟ್ಟರೆ ಅದರ ಬೆಲೆ ಚಿಕ್ಕದಾಗುತ್ತದೆ. ಆದರೆ ಅದನ್ನೇ ಪ್ರಸಾದವೆಂದು ಕೊಟ್ಟರೆ ಅದು ಅಮೌಲ್ಯವಾಗುತ್ತದೆ. ಒಂದು ಹೂವಿನ ಬೆಲೆ ಬಹಳವೆಂದರೆ ಒಂದು ರೂಪಾಯಿ ಅಥವಾ ಎರಡು ರೂಪಾಯಿ. ಆದರೆ ಅದೇ ಹೂವನ್ನು ಗುರು–ದೇವರಿಗೆ ಅರ್ಪಸಿ ಪ್ರಸಾದವೆಂದು ಸ್ವೀಕರಿಸಿದರೆ ಅದು ಅಮೌಲ್ಯವಾಗುತ್ತದೆ. ಆನಂದವನ್ನುಂಟುಮಾಡುತ್ತದೆ. ವಿಶಾಲಭಾವದಿಂದ, ಪ್ರಾಸಾದಿಕ ದೃಷ್ಟಿಯಿಂದ ನೋಡಿದಾಗ ಸಣ್ಣ ವಸ್ತುವೂ ದೊಡ್ಡದಾಗಿ ಕಾಣುತ್ತದೆ. ಸಂಕುಚಿತ ಭಾವದಿಂದ ನೋಡಿದಾಗ ದೊಡ್ಡ ವಸ್ತು ಸಣ್ಣದಾಗಿ ಕಾಣುತ್ತದೆ. ಆದ್ದರಿಂದ ಪ್ರಾಸಾದಿಕ ದೃಷ್ಟಿಯುಳ್ಳವರಿಗೆ ಜೀವನದಲ್ಲಿ ಕೊರತೆ ಎಂಬುದೇ ಇರುವುದಿಲ್ಲ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 8843 | 956 | 1458 | 732 | 11989 |
| 2 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 6000 | 613 | 907 | 403 | 7923 |
| 3 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 2843 | 343 | 551 | 329 | 4066 |
| ನವೆಂಬರ್2024ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 242 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 582 | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 6632 | 1144 | 1993 | 705 | 10474 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 974 | 204 | 472 | 147 | 1797 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 5658 | 940 | 1521 | 558 | 8677 |
| ನವೆಂಬರ್–2024 ತಿಂಗಳಿನಲ್ಲಿ ಒಟ್ಟು 249 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ. | | | | | | |

# ಬೆಳಗಾವಿಯಲ್ಲಿ ಸಂಭ್ರಮ ಹಾಗೂ ಸಡಗರದಿಂದ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ



**ಬೆಳಗಾವಿ :** 71 ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಕಾರ್ಯಕ್ರಮವನ್ನು ಬೆಳಗಾವಿಯ ಕೆ.ಎಲ್.ಇ ಸೊಸಾಯಿಟಿಯ ಜವಾಹರಲಾಲ್ ನೆಹರು ಮೆಡಿಕಲ್ ಕಾಲೇಜಿನ ಆವರಣದಲಿರುವ ಜಿರ್ಗೆ ಭವನದಲ್ಲಿ ಅತ್ಯಂತ ಸಂಭ್ರಮ ಹಾಗೂ ಸಡಗರದಿಂದ ನಡೆಯಿತು.

ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳಗಳ ನೇತೃತ್ವದಲ್ಲಿ ಹಾಗೂ ಕರ್ನಾಟಕ ರಾಜ್ಯ ಬಸವೇಶ್ವರ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳ ಬೆಂಗಳೂರು, ಕರ್ನಾಟಕ ಚಲನಚಿತ್ರ ಹಾಗೂ ಲಲಿತಕಲಾ ಸಹಕಾರ ಮಹಾಮಂಡಳ ಬೆಂಗಳೂರು ಇವರುಗಳ ಸಹಯೋಗದೊಂದಿಗೆ ಬೆಳಗಾವಿಯ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಬೆಳಗಾವಿ ಜಿಲ್ಲಾ ಸಹಕಾರ ಯೂನಿಯನ್, ಬೆಳಗಾವಿ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ, ಬೆಳಗಾವಿ ಜಿಲ್ಲೆಯ ಕೃಷಿ ಪತ್ತಿನ ಸಹಕಾರ ಸಂಘಗಳು, ಬೆಳಗಾವಿ ಜಿಲ್ಲೆಯ ಹಾಲು ಉತ್ಪಾದಕರ ಸಹಕಾರ ಸಂಘಗಳು, ಕ್ರೆಡಿಟ್ ಸಹಕಾರ ಸಂಘಗಳು, ಸೌಹಾರ್ದ ಸಹಕಾರಿ ಸಂಘಗಳು, ಮಹಿಳಾ ಸಹಕಾರಿ ಸಂಘಗಳು, ಸಹಕಾರಿ ಸಕ್ಕರೆ ಕಾರ್ಖಾನೆಗಳು ಉಳಿದ ಎಲ್ಲ ಸಹಕಾರಿ ಸಂಘಗಳು ಸಹಕಾರ ಇಲಾಖೆಯ ಸಹಯೋಗದೊಂದಿಗೆ ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು.



## ಸಹಕಾರಿ ಜಾತಾ

ನಗರದ ಕೃಷ್ಣದೇವರಾಯ ವೃತ್ತ (ಕೋಲ್ಹಾಪುರ ವೃತ್ತ) ದಿಂದ ಸಹಕಾರ ಜಾತಾದೊಂದಿಗೆ ಪ್ರಾರಂಭಿಸಲಾಯಿತು. ಸಹಕಾರಿ ಜಾತಾವನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಹಾಗೂ ಸಹಕಾರ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರುಗಳು ಸಹಕಾರಿ ಧ್ವಜವನ್ನು ಹಾಗೂ ಬಲೂನ್‌ಗಳನ್ನು ಹಾರಿಸುವ ಮೂಲಕ ಉದ್ಘಾಟಿಸಿದರು. ಸಾವಿರಾರು ಸಹಕಾರಿಗಳು ಸಹಕಾರ ಧ್ವಜಹಿಡಿದು ಸಹಕಾರದ ಜೈಕಾರ ಹಾಕುತ್ತ, ಸಹಕಾರ ಕ್ಷೇತ್ರದ ಸಾಧನೆಗಳನ್ನು ಬಿಂಬಿಸುವ ಸ್ತಬ್ಧ ಚಿತ್ರಗಳು (ಟ್ಯಾಬ್ಲೋಗಳು) ಮುಂಭಾಗದಲ್ಲಿ ವಾದ್ಯಮೇಳದೊಂದಿಗೆ ಜಿರ್ಗೆ ಭವನಕ್ಕೆ ಸಾಗಿ ಬಂದನಂತರ ಸಭಾಭವನದ ಎದುರಿಗೆ ಸಹಕಾರಿ ಧ್ವಜವನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಹಾಗೂ ಕರ್ನಾಟಕ ಸರಕಾರದ ಲೋಕೋಪಯೋಗಿ ಸಚಿವರಾದ ಶ್ರೀ ಸತೀಶ್ ಜಾರಕಿಹೋಳಿಯವರು ನೆರವೇರಿಸಿದರು. ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕರ್ನಾಟಕ ಸರಕಾರದ ಮಹಿಳಾ ಹಾಗೂ ಮಕ್ಕಳ ಇಲಾಖೆಯ ಸಚಿವರೂ ಆದ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರರವರು ವಸ್ತು ಪ್ರದರ್ಶನ ಹಾಗೂ ಮಾರಾಟ ಮಳಿಗೆಯನ್ನು ಉದ್ಘಾಟಿಸಿದರು.

## ಉಪನ್ಯಾಸ :



ಉದ್ಘಾಟನಾ ಕಾರ್ಯಕ್ರಮದ ಮೊದಲಿಗೆ ಡಾ.ಎಸ್.ಎ ಸಿದ್ಧಾಂತಿಯರಿಂದ ಏಳನೇ ದಿನದ ವಿಷಯವಾದ ಉತ್ತಮ ವಿಶ್ವ ನಿರ್ಮಾಣ ಹಾದಿಗಾಗಿ ಹಾಗೂ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಯಲ್ಲಿ ಸಹಕಾರ ಸಂಘಗಳ ಪಾತ್ರ ಕುರಿತು ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.



## ಪುಷ್ಪನಮನ :

ಸಹಕಾರಿ ಪಿತಾಮಹರಾದ ಶ್ರೀ ಸಿದ್ಧನಗೌಡ ಸಣ್ಣರಾಮನಗೌಡ ಪಾಟೀಲ್, ಮಹಾತ್ಮಾ ಗಾಂಧೀಜಿ, ಪಂಡಿತ ಜವಾಹರಲಾಲ ನೆಹರೂ ರವರುಗಳ ಭಾವಚಿತ್ರಕ್ಕೆ ಗಣ್ಯರಿಂದ ಪುಷ್ಪನಮನವನ್ನು ಸಲ್ಲಿಸಲಾಯಿತು.




## ಪ್ರಾಸ್ತಾವಿಕ ಭಾಷಣ :

ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಪ್ರಾಸ್ತಾವಿಕ ಭಾಷಣ ಮಾಡಿದರು.

## ಉದ್ಘಾಟನೆ :

ಕಾರ್ಯಕ್ರಮವನ್ನು ಮಾನ್ಯ ಸಹಕಾರಿ ಸಚಿವರಾದ ಶ್ರೀ ಕೆ.ಎನ್ ರಾಜಣ್ಣನವರು ಉದ್ಘಾಟಿಸಿದರು. ಅಧ್ಯಕ್ಷತೆಯನ್ನು ಬೆಳಗಾವಿ ನಗರದ ಶಾಸಕ ಶ್ರೀ ಆಸಿಫ್ ಸೇಠ್ ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು.



## ಸ್ವಾಗತ :

ಸಹಕಾರ ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಜಗದೀಶ ಕವಟಗಿಮಠರವರು ಅತಿಥಿಗಣ್ಯರನ್ನು ಸ್ವಾಗತಿಸಿದರು.

## ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆ ಹಾಗೂ ಗಣ್ಯರ ಸಂದೇಶ ವಾಚನ :

ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ರವರು ರಾಷ್ಟ್ರೀಯ ಐಕ್ಯತಾ ಪ್ರತಿಜ್ಞೆಯನ್ನು ಭೋದಿಸಿ ನಂತರ ಗಣ್ಯರ ಸಂದೇಶಗಳನ್ನು ಓದಿದರು.



## ವೇದಿಕೆಯಲ್ಲಿ ಉಪಸ್ಥಿತ ಗಣ್ಯರು.




ಪ್ರಾರಂಭದಲ್ಲಿ ಶ್ರೀಮತಿ ನಯಾನ ಗಿರಿಗೌಡ ಹಾಗೂ ತಂಡದವರಿಂದ ಪ್ರಾರ್ಥನೆಯಾದ ನಂತರ ವೇದಿಕೆಯಲ್ಲಿ ಮುಖ್ಯ ಅತಿಥಿಗಳಾಗಿ ಹಿರಿಯ ಸಹಕಾರಿ ಹಾಗೂ ಕೆ.ಎಲ್.ಇ ಸೂಸಾಯಿಟಿಯ ಅಧ್ಯಕ್ಷರಾದ ಶ್ರೀ ಪ್ರಭಾಕರ ಕೋರೆಯವರು, ಮಾಜಿ ಸಹಕಾರ ಸಚಿವರೂ ಹಾಲಿ ಶಾಸಕರೂ ಆದ ಶ್ರೀ ಲಕ್ಷ್ಮಣ ಸವದಿಯವರು, ರಾಜ್ಯಸಭಾ ಸದಸ್ಯರಾದ ಶ್ರೀ ಈರಣ್ಣ ಕಡಾಡಿರವರು, ಶ್ರೀ ಅಶೋಕ ಪಟ್ಟಣ ಮಾನ್ಯ ಶಾಸಕರು ಹಾಊ ಸರಕಾರಿ ಮುಖ್ಯ ಸಚೇತಕರು ಕರ್ನಾಟಕ ವಿಧಾನ ಸಭೆ, ಶಾಸಕರಾದ ಶ್ರೀ ದುರ್ಯೋಧನ ಐಹೋಳಿ, ಶ್ರೀ ಲಕ್ಷ್ಮಣರಾವ ಚಿಂಗಳೆರವರು, ಸುದ್ದಿ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅಪ್ಪಾಸಾಹೇಬ್ ಮಾರುತಿ ಕಲ್ಲುಡೆಯವರು, ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾದ ಶ್ರೀ ಬಿ.ಡಿ. ಪಾಟೀಲ್‌ರವರು, ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರುಗಳಾದ ಶ್ರೀ ಜಿ.ಎನ್.ಪಾಟೀಲ್, ಶ್ರೀ ರಾಮನಗೌಡ ಪಾಟೀಲ, ಶ್ರೀ ಸುಭಾಷ ಇಂಡಿ, ಶ್ರೀ ಮಲ್ಲಿಕಾರ್ಜುನ ಹೊರಕೇರಿ, ಶ್ರೀ ನಾಗರಾಜ ದೇಶಪಾಂಡೆ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಬಾಪುಗೌಡ ಪಾಟೀಲ, ಶ್ರೀ ಬಸವರಾಜ ಅರಬಗೊಂಡ ಶ್ರೀ ಜಿ.ಪಿ.ಪಾಟೀಲ್, ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರೂ ಸಹಕಾರ ಸಂಘಗಳ ಅಪರ ನಿಬಂಧಕರಾದ ಶ್ರೀ ಕೆ. ಎಸ್.ನವೀನರವರು, ಬೆಳಗಾವಿ ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ಸುರೇಶಗೌಡರವರು, ಬೆಳಗಾವಿ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರಾದ ಶ್ರೀ ರವೀಂದ್ರ ಪಾಟೀಲ್, ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶ್ರೀಕಾಂತರವರು ಉಪಸ್ಥಿತರಿದ್ದರು.



## ರೈತರ ಆರ್ಥಿಕ ಅಭಿವೃದ್ಧಿಗೆ ಸಹಕಾರ ಮಹತ್ವದ ಕೊಡುಗೆ ನೀಡಿದೆ : ಸಹಕಾರ ಸಚಿವರಾದ ಶ್ರೀ ಕೆ. ಎನ್. ರಾಜಣ್ಣ

ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದ ನಂತರ ಮಾತನಾಡಿದ ಸಹಕಾರ ಸಚಿವ ಶ್ರೀ ಕೆ.ಎನ್. ರಾಜಣ್ಣರವರು ಈ ದೇಶದ ರೈತರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರ ಮಹತ್ವದ ಪಾತ್ರವನ್ನು ನಿರ್ವಹಿಸುತ್ತ ಬಂದಿದೆ. 1904 ರಲ್ಲಿ ಸಹಕಾರ ಕಾಯ್ದೆಯ ಜಾರಿ ಮೂಲಕ ಪ್ರಾರಂಭವಾದ ಸಹಕಾರ ಚಳುವಳಿಗೆ 120 ವರ್ಷಗಳ ಇತಿಹಾಸವಿದೆ. ಗದಗಿನ ಕಣಗಿನಹಾಳದಲ್ಲಿ ಪ್ರಪ್ರಥಮ ಕೃಷಿ ಪತ್ತಿ ಸಹಕಾರ ಸಂಘ ಪ್ರಾರಂಭಿಸಿದ ಕೀರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ. ರೈತರಿಗೆ ಸಕಾಲದಲ್ಲಿ ಸಾಲ, ಬಿತ್ತನೆ ಬೀಜ ರಸಗೊಬ್ಬರ ಮುಂತಾದವುಗಳನ್ನು ಸಹಕಾರ ಸಂಘಗಳ ಮೂಲಕ ಒದಗಿಸುವುದರ ಜೊತೆಗೆ ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ಹೈನುಗಾರಿಕೆಗೆ ಪ್ರೋತ್ಸಾಹಿಸಿ ಆರ್ಥಿಕ ಅಭಿವೃದ್ಧಿಗೆ ನೆರವು ನೀಡಲಾಗುತ್ತಿದೆ. ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ ನೀಡಲಾಗುತ್ತಿದೆ ಮಹಿಳೆಯರಿಗೆ ಯುವಕರಿಗೆ ಹಿಂದುಳಿದ ವರ್ಗದವರಿಗೆ ಸಹಕಾರ ಸಂಘಗಳ ಪ್ರಯೋಜನ ಪಡೆಯುವಂತೆ ಅನೇಕ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಸಹಕಾರ ಸಪ್ತಾಹದ ಆಚರಣೆಯ ಮುಖ್ಯ ಉದ್ದೇಶವೇ ಸಹಕಾರ ಕ್ಷೇತ್ರದ ಸಾಧನೆಗಳನ್ನು ಮೆಲಕು ಹಾಕಿ ಮುಂಬರುವ ದಿನಗಳಲ್ಲಿ ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳ ಬಗ್ಗೆ ಸಮಾಲೋಚಿಸುವುದೇ ಆಗಿದೆ ಎಂದು ತಿಳಿಸಿದರು.



## ಸಹಕಾರ ವಾರ ಪತ್ರಿಕೆ, ಸ್ವಾಭಿಮಾನಿ ಸಹಕಾರಿ ಪತ್ರಿಕೆ ಹಾಗೂ ಸಹಕಾರ ಸಿಂಚನ ವಿಶೇಷ ಪತ್ರಿಕೆಗಳ ಬಿಡುಗಡೆ :

ಸಹಕಾರ ಮಹಾಮಂಡಳದ ಸಹಕಾರ ವಾರ ಪತ್ರಿಕೆಯ ವಿಶೇಷ ಸಂಚಿಕೆ, ಸಂಯುಕ್ತ ಸಹಕಾರಿಯ ಮಾಸ ಪತ್ರಿಕೆಯ ವಿಶೇಷ ಸಂಚಿಕೆ ಹಾಗೂ ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳಯ ಮಾಸಿಕ ಪತ್ರಿಕೆಗಳನ್ನು ಸಹಕಾರ ಸಚಿವ ಶ್ರೀ ಕೆ.ಎನ್. ರಾಜಣ್ಣನವರು, ಲೋಕೋಪಯೋಗಿ ಸಚಿವರಾದ ಶ್ರೀ ಸತೀಶ್ ಜಾರಕಿಹೊಳಿಯವರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರಾದ ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರರವರು ಹಾಗೂ ವೇದಿಕೆಯಲ್ಲಿ ಉಪಸ್ಥಿತರಿದ್ದ ಗಣ್ಯರೆಲ್ಲರು ಬಿಡುಗಡೆಮಾಡಿದರು.



## ಸಹಕಾರ ಕ್ಷೇತ್ರದ ಸ್ವಾಯತ್ತತೆಗೆ ಕಡಿವಾಣ ಬೇಡ : ತಪ್ಪು ಸರಿಪಡಿಸಿಕೊಳ್ಳಲು ಅವಕಾಶ ನೀಡುವುದು ಅಗತ್ಯ : ಲೋಕೋಪಯೋಗಿ ಸಚಿವರಾದ ಶ್ರೀ ಸತೀಶ ಜಾರಕಿಹೋಳಿ

ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದ ನಂತರ ಮಾತನಾಡಿದ ಸಹಕಾರ ಸಚಿವ ಶ್ರೀ ಕೆ.ಎನ್. ರಾಜಣ್ಣರವರು ಈ ದೇಶದ ರೈತರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಸಹಕಾರ ಕ್ಷೇತ್ರ ಮಹತ್ವದ ಪಾತ್ರವನ್ನು ನಿರ್ವಹಿಸುತ್ತ ಬಂದಿದೆ. 1904 ರಲ್ಲಿ ಸಹಕಾರ ಕಾಯ್ದೆಯ ಜಾರಿ ಮೂಲಕ ಪ್ರಾರಂಭವಾದ ಸಹಕಾರ ಚಳುವಳಿಗೆ 120 ವರ್ಷಗಳ ಇತಿಹಾಸವಿದೆ. ಗದಗಿನ ಕಣಗಿನಹಾಳದಲ್ಲಿ ಪ್ರಪ್ರಥಮ ಕೃಷಿ ಪತ್ತಿ ಸಹಕಾರ ಸಂಘ ಪ್ರಾರಂಭಿಸಿದ ಕೀರ್ತಿ ಕರ್ನಾಟಕಕ್ಕೆ ಸಲ್ಲುತ್ತದೆ. ರೈತರಿಗೆ ಸಕಾಲದಲ್ಲಿ ಸಾಲ, ಬಿತ್ತನೆ ಬೀಜ ರಸಗೊಬ್ಬರ ಮುಂತಾದವುಗಳನ್ನು ಸಹಕಾರ ಸಂಘಗಳ ಮೂಲಕ ಒದಗಿಸುವುದರ ಜೊತೆಗೆ ಹಾಲು ಉತ್ಪಾದಕರ ಸಹಕಾರ ಸಂಘಗಳ ಮೂಲಕ ಹೈನುಗಾರಿಕೆಗೆ ಪ್ರೋತ್ಸಾಹಿಸಿ ಆರ್ಥಿಕ ಅಭಿವೃದ್ಧಿಗೆ ನೆರವು ನೀಡಲಾಗುತ್ತಿದೆ. ರೈತರಿಗೆ ಶೂನ್ಯ ಬಡ್ಡಿದರದಲ್ಲಿ ಸಾಲ ನೀಡಲಾಗುತ್ತಿದೆ ಮಹಿಳೆಯರಿಗೆ ಯುವಕರಿಗೆ ಹಿಂದಳಿದ ವರ್ಗದವರಿಗೆ ಸಹಕಾರ ಸಂಘಗಳ ಪ್ರಯೋಜನ ಪಡೆಯುವಂತೆ ಅನೇಕ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಸಹಕಾರ ಸಪ್ತಾಹದ ಆಚರಣೆಯ ಮುಖ್ಯ ಉದ್ದೇಶವೇ ಸಹಕಾರ ಕ್ಷೇತ್ರದ ಸಾಧನೆಗಳನ್ನು ಮೆಲಕು ಹಾಕಿ ಮುಂಬರುವ ದಿನಗಳಲ್ಲಿ ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳ ಬಗ್ಗೆ ಸಮಾಲೋಚಿಸುವುದೇ ಆಗಿದೆ ಎಂದು ತಿಳಿಸಿದರು.



## ಸಹಕಾರ ಸಂಸ್ಥೆಗಳು ರೈತರ ಆರ್ಥಿಕ ಅಭಿವೃದ್ಧಿಗೆ ಪೂರಕ : ಶ್ರೀಮತಿ ಲಕ್ಷ್ಮೀ ಹೆಬ್ಬಾಳಕರ, ಮಹಿಳಾ ಮತ್ತು ಮಕ್ಕಳ ಇಲಾಖೆ ಸಚಿವರು

ಮುಖ್ಯ ಅತಿಥಿಗಳಾಗಿ ಮಾತನಾಡಿದ ಮಹಿಳಾ ಮತ್ತು ಮಕ್ಕಳ ಇಲಾಖೆಯ ಸಚಿವರು ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಶ್ರೀ ಲಕ್ಷ್ಮೀ ಹೆಬ್ಬಾಳಕರವರು ಈ ದೇಶದಲ್ಲಿ ಸಹಕಾರ ಕ್ಷೇತ್ರದಿಂದ ರೈತರ ಅಭಿವೃದ್ಧಿಯಾಗಿದೆ. ಈ ಕ್ಷೇತ್ರ ಇರದೆ ಇದ್ದಲ್ಲಿ ರೈತರು ಖಾಸಗಿಯವರಿಂದ ಸಾಕಷ್ಟು ಶೋಷಣೆಗೆ ಒಳಗಾಗುತ್ತಿದ್ದರು. ಈ ಕ್ಷೇತ್ರ ಉತ್ತಮವಾಗಿ ಕಾರ್ಯನಿರ್ವಹಿಸಬೇಕು ಇನ್ನೂ ಹೆಚ್ಚಿನ ಸೇವೆ ನೀಡಲು ಅವಕಾಶವಿದೆ. ಸಹಕಾರ ಸಂಸ್ಥೆಗಳನ್ನು ಬಲಪಡಿಸಿ ಇನ್ನು ಸೇವೆಗಳನ್ನು ಒದಗಿಸಲು ಕರೆನೀಡಿದರು.

## ಸಹಕಾರ ಸಂಸ್ಥೆಗಳು ಹೆಚ್ಚು ಕ್ರೀಯಾಶೀಲರಾಗಿ ಕಾರ್ಯನಿರ್ವಹಿಸಲು ಸಾಧ್ಯ ಪ್ರೋತ್ಸಾಹ ಅಗತ್ಯ. : ಶ್ರೀ ಲಕ್ಷ್ಮಣ ಸವದಿ, ಮಾಜಿ ಸಹಕಾರ ಸಚಿವರು ಹಾಗೂ ಹಾಲಿ ಶಾಸಕರು.



ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಮಾಜಿ ಸಹಕಾರ ಸಚಿವ ಹಾಗೂ ಹಾಲಿ ಶಾಸಕ ಶ್ರೀ ಲಕ್ಷ್ಮಣ ಸವದಿಯವರು ಮಾತನಾಡಿ ಈ ದೇಶದಲ್ಲಿ ರೈತರಿಗೆ ಸಹಕಾರಿ ಕ್ಷೇತ್ರ ನೆರವು ನೀಡಿದಷ್ಟು ಬೇರೆ ಯಾವ ಸಂಸ್ಥೆಗಳಿಂದಲೂ ಸಾಧ್ಯಾಗಿಲ್ಲ. ಖಾಸಗಿಯವರು ರೈತರನ್ನು ಶೋಷಣೆ ಮಾಡುತ್ತಲೆ ಬಂದಿದ್ದಾರೆ. ಆದರೆ ರೈತರು ಸಹಕಾರ ಕ್ಷೇತ್ರದ ಪ್ರಯೋಜನ ಪಡೆದು ಶೋಷಣೆಯಿಂದ ಮುಕ್ತಿಹೊಂದಲು ಸಾಧ್ಯವಾಗಿದೆ. ಸರಕಾರ ರೈತರಿಗೆ ನೀಡುವ ಸಹಾಯ ಧನ ಮುಂತಾದವುಗಳನ್ನು ಸಹಕಾರ ಸಂಸ್ಥೆಗಳ ಮೂಲಕ  ಉತ್ತಮವಾಗಿ ನಿರ್ವಹಣೆ ಮಾಡಲಾಗುತ್ತಿದೆ. ಬೆಳಗಾವಿ ಜಿಲ್ಲೆಯ ಸಹಕಾರಿ ಕ್ಷೇತ್ರ ಅನೇಕ ವೈಶಿಷ್ಠತೆಯಿಂದ ಕೂಡಿದೆ. ಇದು ಸಹಕಾರಿ ಸಸ್ಯಕಾಶಿಯೆನಿಸಿದೆ. ಈ ಕ್ಷೇತ್ರ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸರಕಾರ ಹಾಗೂ ಸಾರ್ವಜನಿಕರು ಪ್ರೋತ್ಸಾಹಿಸುವುದು ಅಗತ್ಯ ಎಂದು ತಿಳಿಸಿದರು.

ಸಮಾರಂಭದಲ್ಲಿ ಹಿರಿಯ ಸಹಕಾರಿಗಳಾದ ಶ್ರೀ ಪ್ರಭಾಕರ ಕೋರೆಯವರು, ರಾಜ್ಯಸಭಾ ಸದಸ್ಯರಾದ ಶ್ರೀ ಈರಣ್ಣ ಕಡಾಡಿಯವರು, ಸುದ್ದಿ ಮಾಧ್ಯಮ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರರವರು ಮಾತನಾಡಿದರು.

## ಉತ್ತಮ ಸಹಕಾರ ಸಂಸ್ಥೆಗಳಿಗೆ ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಶ್ರೇಷ್ಠ ಸಹಕಾರಿಗಳಿಗೆ ಸನ್ಮಾನ

71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಆಚರಣೆಯ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ವತಿಯಿಂದ ಉತ್ತಮ ಸೌಹಾರ್ದ ಸಹಕಾರಿ ಹಾಗೂ ಶ್ರೇಷ್ಠ ಸಹಕಾರಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.





ಎಲ್ಲ ಗಣ್ಯ ಮಾನ್ಯರನ್ನು ಹಾಗೂ ಮುಖ್ಯ ಅತಿಥಿಗಳನ್ನು ಸ್ವಾಗತ ಸಮಿತಿಯ ಪರವಾಗಿ ಸನ್ಮಾನಿಸಲಾಯಿತು. ನಂತರದಲ್ಲಿ ಬೆಳಗಾವಿ ಜಿಲ್ಲೆಯ 6 ಕೃಷಿ ಪತ್ತಿನ ಸಹಕಾರ ಸಂಘಗಳಿಗೆ, 6 ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಜಿಲ್ಲೆ ಒಂದರಂತೆ ಕ್ರೆಡಿಟ್ ಸಹಕಾರ ಸಂಘ, ಸೌಹಾರ್ದ ಸಹಕಾರಿ ಸಂಘ, ಮಹಿಳಾ ಸಹಕಾರಿ ಸಂಘ, ವಸತಿ ಸಹಕಾರ ಸಂಘ ಸಕ್ಕರೆ ಕಾರ್ಖಾನೆ ಸಂಯುಕ್ತ ಸಹಕಾರಿಯು ಆಯ್ಕೆ ಮಾಡಿದ ರಾಜ್ಯದ 5 ಉತ್ತಮ ಸೌಹಾರ್ದ ಸಹಕಾರಿಗಳಿಗೆ ಹಾಗೂ 5 ಶ್ರೇಷ್ಠ ಸಹಕಾರಿಗಳಿಗೆ ಸನ್ಮಾನಿಸಲಾಯಿತು.




ಮಾನ್ಯ ಸಚಿವರಾದ ಶ್ರೀ ಕೆ.ಎನ್ ರಾಜಣ್ಣ ಇವರಿಗೆ ಸನ್ಮಾನ



ಮಾನ್ಯ ಸಚಿವರಾದ ಶ್ರೀ ಸತೀಶ ಲ. ಜಾರಕಿಹೊಳಿ ಇವರಿಗೆ ಸನ್ಮಾನ



ಮಾನ್ಯ ಸಚಿವರಾದ ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್ ಇವರಿಗೆ ಸನ್ಮಾನ




ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಜಿ. ನಂಜನಗೌಡ ಇವರಿಗೆ ಸನ್ಮಾನ



ಭಾಗವಹಿಸಿದ ಸಹಕಾರಿಗಳು

### ಸನ್ಮಾನಿತ ಉತ್ತಮ ಸೌಹಾರ್ದ ಸಹಕಾರಿಗಳು

1. ಶ್ರೀ ಭುವನೇಶ್ವರಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ., ರಾಮುಗುರ್ಗ, ಬೆಳಗಾವಿ
2. ಶ್ರೀ ವಿಜಯಲಕ್ಷ್ಮೀ ಸೌಹಾರ್ದ ಸಹಕಾರಿ ಸಂಘ ನಿ., ಧಾರವಾಡ
3. ಶ್ರೀ ವಾಸವಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ., ಕೊಳ್ಳೇಗಾಲ, ಚಾಮರಾಜನಗರ
4. ಮೊಳಕಾಲ್ಮೂರು ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಮೊಳಕಾಲ್ಮೂರು, ಚಿತ್ರದುರ್ಗ
5. ಪ್ರಗತಿ ಕೃಷ್ಣ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಹೊಸಪೇಟೆ, ವಿಜಯನಗರ

### ಸನ್ಮಾನಿತ ಶ್ರೇಷ್ಠ ಸಹಕಾರಿಗಳು

1. ಶ್ರೀ ಭರತೇಶ ಶಾಂತಪ್ಪ ಭನವಾನೆ, ಮಾನ್ಯ ಅಧ್ಯಕ್ಷರು, ಶ್ರೀ ಪಾರ್ಶ್ವನಾಥ ತೀರ್ಥಂಕರ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಚಿಕ್ಕೋಡಿ
2. ಶ್ರೀ ರಾಘವೇಂದ್ರ ದತ್ತಾತ್ರೇಯ ಕುಲಕರ್ಣಿ, ಮಾನ್ಯ ಅಧ್ಯಕ್ಷರು, ಶ್ರೀ ಗಜಾನನ ವಿವಿದೋದ್ದೇಶಗಳ ಸೌಹಾರ್ದ ಸಹಕಾರಿ ಸಂಘ ನಿ., ಸಿಂದಗಿ, ವಿಜಯಪುರ
3. ಶ್ರೀ ಎಂ.ಎಸ್. ಗುರುರಾಜ್, ಮಾನ್ಯ ಅಧ್ಯಕ್ಷರು, ಶ್ರೀಶಾ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ನಿ., ಮಂಗಳೂರು, ದಕ್ಷಿಣ ಕನ್ನಡ
4. ಶ್ರೀ ಎಂ ಬಸಪ್ಪ, ಮಾನ್ಯ ಉಪಾಧ್ಯಕ್ಷರು, ಶ್ರೀ ನಗರೇಶ್ವರ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಬೆಂಗಳೂರು
5. ಶ್ರೀ ಸಿದ್ರಾಮಪ್ಪಾ ಬಿ.ಹರಸುರ, ಮಾನ್ಯ ಅಧ್ಯಕ್ಷರು, ಶ್ರೀ ಮಹಾದೇವ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ಕಲಬುರಗಿ.

ಸಮಾರಂಭದಲ್ಲಿ ವಿವಿಧ ಸಹಕಾರಿ ಸಂಸ್ಥೆಗಳಿಂದ 4600 ಪ್ರತಿನಿಧಿಗಳು ಭಾಗವಹಿಸಿದ್ದರು. ಶ್ರೀ ರವೀಂದ್ರ ಪಾಟೀಲ್ ಸಹಕಾರ ಸಂಘಗಳ ಉಪನಿಬಂಧಕರು ಬೆಳಗಾವಿ ಇವರು ವಂದನಾರ್ಪಣೆ ಸಲ್ಲಿಸಿದರು.

# ಸಹಕಾರದಿಂದ ಸಮೃದ್ಧಿ – ಉತ್ತಮ ಭವಿಷ್ಯಕ್ಕೆ ದಾರಿ ಸಹಕಾರ ಕ್ಷೇತ್ರ ಬಲಪಡಿಸಲು ಸಂಕಲ್ಪ

## ICA ಗ್ಲೋಬಲ್ ಕೋ–ಆಪರೇಟಿವ್ ಸಮಾವೇಶ

## ದಿನಾಂಕ 25 ನವೆಂಬರ್ 2024 ರಿಂದ 30 ನವೆಂಬರ್ 2024ರವರೆಗೆ




**ನವದೆಹಲಿ :** ಪ್ರಪಂಚದಾದ್ಯಂತ 100 ದೇಶಗಳಿಂದ 3000ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದ ಮೂರು ದಿನಗಳ ಜಾಗತಿಕ ಸಹಕಾರಿ ಸಮ್ಮೇಳನವು ದಿನಾಂಕ 25.11.2024ರಂದು ನವದೆಹಲಿಯ ಭಾರತ್ ಮಂಟಪದಲ್ಲಿ ಆರಂಭವಾಗಿದ್ದು, ಜಾಗತಿಕವಾಗಿ ಸಹಕಾರಿ ಆಂದೋಲನವನ್ನು ಸುಸ್ಥಿರ ಅಭಿವೃದ್ಧಿಗೊಳಿಸಲು ನಾಯಕರಲ್ಲಿ ಒಮ್ಮತದ ಸಂಕಲ್ಪಕ್ಕೆ ಈ ಕಾರ್ಯಕ್ರಮವು ಸಾಕ್ಷಿಯಾಯಿತು. ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ನವದೆಹಲಿಯ ಭಾರತ್ ಮಂಟಪದಲ್ಲಿ ಜಾಗತಿಕ ಸಹಕಾರ ಸಮ್ಮೇಳನ 2024 ಅನ್ನು ಉದ್ಘಾಟಿಸಿ ವಿಶ್ವಸಂಸ್ಥೆಯ ನಿರ್ಣಯದಂತೆ 2025ನ್ನು ಅಂತರಾಷ್ಟ್ರೀಯ ಸಹಕಾರಿ ವರ್ಷ ಎಂದು ಘೋಷಿಸಿದರು ಮತ್ತು ಸ್ಮರಣಾರ್ಥ ಅಂಚೆ ಚೀಟಿಯನ್ನು ಬಿಡುಗಡೆ ಮಾಡಿದರು. 2025 ಅನ್ನು ಅಂತರಾಷ್ಟ್ರೀಯ ಸಹಕಾರಿ ವರ್ಷವನ್ನಾಗಿ ಆಚರಿಸುವ ವಿಶ್ವಸಂಸ್ಥೆಯ ನಿರ್ಧಾರವು ಸಹಕಾರದಿಂದ ಸಮೃದ್ಧಿ ಎಂಬ ಘೋಷವಾಕ್ಯಕ್ಕೆ ಪೂರಕವಾಗಿದೆ ಎಂದು ತಿಳಿಸಿದರು.

"ಅಂತರರಾಷ್ಟ್ರೀಯ ಸಹಕಾರ ವರ್ಷ"ದಲ್ಲಿ ಕೇಂದ್ರ ಸರ್ಕಾರವು ಹೊಸ ಸಹಕಾರಿ ನೀತಿಯನ್ನು ಪರಿಚಯಿಸುವ ಮೂಲಕ ಭಾರತದ ಸಹಕಾರ ಚಳುವಳಿಗೆ ಹೊಸ ಆಯಾಮಗಳನ್ನು ನೀಡಲಿದೆ. ಮೂರು ಹೊಸ ರಾಷ್ಟ್ರೀಯ ಸಹಕಾರಿ ಸಂಸ್ಥೆಗಳು ರೈತರಿಗೆ ದೇಶೀಯ ಮತ್ತು ಜಾಗತಿಕ ಮಾರುಕಟ್ಟೆಗಳನ್ನು ತಲುಪಲು ಅನುವು ಮಾಡಿಕೊಡುತ್ತದೆ. ವಲಯದಲ್ಲಿ ಮಾನವ ಸಂಪನ್ಮೂಲಗಳಿಗೆ ತರಬೇತಿ ನೀಡಲು ಮತ್ತು ತಾಂತ್ರಿಕವಾಗಿ ಕೌಶಲ್ಯ ನೀಡಲು ಸಹಕಾರಿ ವಿಶ್ವವಿದ್ಯಾಲಯವನ್ನು ಶೀಘ್ರದಲ್ಲೇ ಸ್ಥಾಪಿಸಲಾಗುವುದು. ಈ ಸಂದರ್ಭದಲ್ಲಿ, ಶ್ರೀ ಅಮಿತ್ ಶಾ ಮಾನ್ಯ ಕೇಂದ್ರ ಗೃಹ ಸಚಿವರು ಮತ್ತು ಸಹಕಾರ ಸಚಿವರು, ಭೂತಾನ್ ಪ್ರಧಾನಿ, ಫಿಜಿ ಉಪ ಪ್ರಧಾನ ಮಂತ್ರಿ, ಅಂತಾರಾಷ್ಟ್ರೀಯ ಸಹಕಾರ ಒಕ್ಕೂಟದ (ICA) ಅಧ್ಯಕ್ಷರು, ಸಹಕಾರ ಸಚಿವಾಲಯದ ಕಾರ್ಯದರ್ಶಿ, ಮತ್ತು ಹಲವಾರು ಗಣ್ಯರು ಉಪಸ್ಥಿತರಿದ್ದರು. ಮಾನ್ಯ ಕೇಂದ್ರ ಗೃಹ ಸಚಿವರು ಮತ್ತು ಸಹಕಾರ ಸಚಿವರಾ ಶ್ರೀ ಅಮಿತ್ ಶಾರವರು ತಮ್ಮ ಭಾಷಣದಲ್ಲಿ 2025 ಅನ್ನು ಅಂತರಾಷ್ಟ್ರೀಯ ಸಹಕಾರಿ ವರ್ಷವನ್ನಾಗಿ ಆಚರಿಸಲು ವಿಶ್ವಸಂಸ್ಥೆಯ ನಿರ್ಧಾರವು ಒಂದು ಸಮಯೋಚಿತವಾಗಿದೆ ಭಾರತದಲ್ಲಿ ICA ಯ ಅಂತರಾಷ್ಟ್ರೀಯ ಸಹಕಾರ ಸಮ್ಮೇಳನವನ್ನು ಆಯೋಜಿಸುತ್ತಿರುವುದು ಸ್ವಾಗತಾರ್ಹ ಹೆಜ್ಜೆಯಾಗಿದೆ ಎಂದು ಅವರು ಹೇಳಿದರು.

ಮಾನ್ಯ ಕೇಂದ್ರ ಗೃಹ ಸಚಿವರು ಮತ್ತು ಸಹಕಾರ ಸಚಿವರಾದ ಶ್ರೀ ಅಮಿತ್ ಶಾರವರು ಮುಂದಿನ 3 ವರ್ಷಗಳಲ್ಲಿ 2 ಲಕ್ಷ ಹೊಸ ಪ್ರಾಥಮಿಕ ಕೃಷಿ ಸಾಲ ಸಂಘಗಳ (PACS) ಮೂಲಕ ಭಾರತದಲ್ಲಿ ಸಹಕಾರಿ ಸಂಘವಿಲ್ಲದೆ ಒಂದೇ ಒಂದು ಗ್ರಾಮ ಪಂಚಾಯಿತಿ ಇರುವುದಿಲ್ಲ ಅಲ್ಲದೆ ಪಿಎಸಿಎಸ್ ಅನ್ನು ಆಧುನಿಕ, ತಂತ್ರಜ್ಞಾನ ಮತ್ತು ಆರ್ಥಿಕವಾಗಿ ಸಶಕ್ತಗೊಳಿಸಲು ಹಲವು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ನ್ಯಾಷನಲ್ ಕೋಆಪರೇಟಿವ್ ಎಕ್ಸ್‌ಪೋರ್ಟ್ಸ್ ಲಿಮಿಟೆಡ್ (ಎನ್‌ಸಿಇಎಲ್), ನ್ಯಾಷನಲ್ ಕೋಆಪರೇಟಿವ್ ಆರ್ಗಾನಿಕ್ಸ್ ಲಿಮಿಟೆಡ್ (ಎನ್‌ಸಿಓಎಲ್) ಮತ್ತು ಭಾರತೀಯ ಬೀಜ ಸಹಕಾರಿ ಸಮಿತಿ ಲಿಮಿಟೆಡ್ (ಬಿಬಿಎಸ್‌ಎಸ್‌ಎಲ್) ಮುಂಬರುವ ದಿನಗಳಲ್ಲಿ ವಿಶ್ವ ವ್ಯಾಪಾರದಲ್ಲಿ ರೈತರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದಲ್ಲದೆ, ಸಹಕಾರಿ ಸಂಸ್ಥೆಗಳಿಗೆ ಸ್ಫೂರ್ತಿ ನೀಡುವ ಕೆಲಸ ಮಾಡಲಿದೆ. ಪ್ರಪಂಚದಾದ್ಯಂತ ಒಂದು ಸಣ್ಣ ರೈತ ಹೇಗೆ ಪ್ರಪಂಚದ ಎಲ್ಲಾ ಮಾರುಕಟ್ಟೆಗಳನ್ನು ತಲುಪಬಹುದು. ಭಾರತೀಯ ರೈತರ ರಸಗೊಬ್ಬರ ಸಹಕಾರಿ (IFFCO), ಕೃಷಿಕ್ ಭಾರತಿ ಸಹಕಾರಿ (KRIBHCO) ಮತ್ತು ಅಮುಲ್ ವಿಶ್ವದಾದ್ಯಂತ ಸಹಕಾರಿ ಕ್ಷೇತ್ರದಲ್ಲಿ ಮಾದರಿಗಳನ್ನು ಸ್ಥಾಪಿಸಿವೆ ಮತ್ತು ಅದೇ ರೀತಿ ಈ ಮೂರು ಸಹಕಾರಿ ಸಂಸ್ಥೆಗಳು ವಿಶ್ವದ ಸಹಕಾರಿ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಜನರಿಗೆ ಮಾರ್ಗದರ್ಶನ ನೀಡುತ್ತವೆ ಎಂದು ಹೇಳಿದರು.

ಭಾರತವು 2024ರ ನವೆಂಬರ್ 25 ರಿಂದ 30 ರವರೆಗೆ ಭಾರತ ಮಂಟಪ ಅಂತರಾಷ್ಟ್ರೀಯ ಸಹಕಾರಿ (ICA) ಸಮ್ಮೇಳನದ ಆತಿಥ್ಯವನ್ನು ವಹಿಸಿಕೊಂಡಿತು. 130 ವರ್ಷಗಳ ಇತಿಹಾಸದಲ್ಲಿ ಈ ಕಾರ್ಯಕ್ರಮವು ಮೊದಲ ಬಾರಿಗೆ ನಡೆದಿದೆ ಮಾನ್ಯ ಪ್ರಧಾನಿಮಂತ್ರಿ ಶ್ರೀ ನರೇಂದ್ರ ಮೋದಿಯವರು ಈ ಸಮ್ಮೇಳನದಲ್ಲಿ 'ಸಹಕಾರಿಗಳ 2025ರ ವಿಶ್ವಸಂಸ್ಥೆ ಅಂತಾರಾಷ್ಟ್ರೀಯ ವರ್ಷ'ವನ್ನು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಸುಮಾರು 3000 ಪ್ರತಿನಿಧಿಗಳಲ್ಲಿ 1000 ಪ್ರತಿನಿಧಿಗಳು ವಿದೇಶಗಳಿಂದ ಆಗಮಿಸಿದ್ದರು. ಈ ಕಾರ್ಯಕ್ರಮವು ಭಾರತದ ಸಹಕಾರಿ ಕ್ಷೇತ್ರದ ವಿರಾಟ ಸ್ವರೂಪದ ಅನಾವರಣ. ಇದು ಜಾಗತಿಕ ಸಹಕಾರಿಗಳ 25% ಅನ್ನು ಒಳಗೊಂಡಿದೆ ಮತ್ತು ದೇಶದಲ್ಲಿ 8,00,000 ಸಹಕಾರಿಗಳು






ಕಾರ್ಯನಿರ್ವಹಿಸುತ್ತಿದ್ದು, 'ಸಹಕಾರಿಗಳು ಎಲ್ಲರಿಗೂ ಸಮೃದ್ಧಿ ತರುತ್ತವೆ' ಎಂಬುದು ಈ ಸಮ್ಮೇಳನದ ವಿಷಯವಾಗಿದ್ದು, ಇದು ಸುಸ್ಥಿರ ಮತ್ತು ಅಭಿವೃದ್ಧಿಯ ಬೆಳವಣಿಗೆಯನ್ನು ಉತ್ತೇಜಿಸುವಂತಾಗಿತ್ತು.

**ಸಮಾವೇಶದ ಉದ್ದೇಶ**

ICA ಗ್ಲೋಬಲ್ ಕೋ–ಆಪರೇಟಿವ್ ಸಮಾವೇಶವನ್ನು ದಿನಾಂಕ 25 ರಿಂದ 30ರವರಗೆ ನವದೆಹಲಿಯ ಭಾರತ್ ಮಂಟಪದಲ್ಲಿ ಆಯೋಜಿಸಲಾಗಿತ್ತು. ಈ ಸಮಾವೇಶದಲ್ಲಿ ಸಹಕಾರದ ನಾಯಕರು, ನೀತಿ ನಿರ್ಧಾರಕ ಮತ್ತು ವೃತ್ತಿಪರರು ಸೇರಿ ಮಹತ್ವಪೂರ್ಣ ವಿಚಾರಗಳನ್ನು ಹಂಚಿಕೊಳ್ಳಲು, ಹೊಸ ಅವಕಾಶಗಳನ್ನು ಅನ್ವೇಷಿಸಲು ಮತ್ತು ಜಾಗತಿಕ ನೆಟ್‌ವರ್ಕ್‌ಗಳನ್ನು ಬಲಪಡಿಸಲು ವೇದಿಕೆಯಾಗಿರುತ್ತದೆ. ಅಲ್ಲದೆ ಸದರಿ ಸಮಾವೇಶದಲ್ಲಿ ಅವಧಿಗಳು ಮತ್ತು ಸೆಮಿನಾರ್‌ಗಳು, ಸಹಕಾರದ ವಿವಿಧ ಕ್ಷೇತ್ರಗಳಲ್ಲಿ ಪ್ರಸ್ತುತ ಬದಲಾವಣೆಗಳು, ಸವಾಲುಗಳು ಮತ್ತು ಅವಕಾಶಗಳ ಮೇಲೆ ಗಮನ ಸೆಳೆಯುವ ಅವಧಿಗಳಾಗಿದ್ದವು. ICA ಗ್ಲೋಬಲ್ ಕೋ–ಆಪರೇಟಿವ್ ಸಮಾವೇಶವು ಸಹಕಾರದ ಮೌಲ್ಯಗಳನ್ನು ಪ್ರಮುಖವಾಗಿ ಹೊಂದಿಕೊಂಡಿದೆ. ಸಹಕಾರದ ಸಂಘಟನೆಗಳು ಗುಣತಾತ್ಮಕ ನಿಯಂತ್ರಣ, ಆರ್ಥಿಕ ಭಾಗವಹಿಸುವಿಕೆ ಮತ್ತು ಸಮುದಾಯದ ಕುರಿತು ಕಾಳಜಿ ಹೊಂದಿರುವುದನ್ನು ಚರ್ಚಿಸುವುದು ಈ ICA ಸಮಾವೇಶದಿಂದ ವ್ಯಾಪಕ ಗುರಿಯನ್ನು ಸಾಧಿಸಲು ಸಹಕಾರ ಚಳವಳಿಯನ್ನು ಉತ್ತೇಜಿಸುವುದು, ಸಹಕಾರ ಸಂಘಟನೆಗಳ ಬೆಳವಣಿಗೆಗೆ ಬೆಂಬಲ ನೀಡುವುದು ಈ ಸಮಾವೇಶ ಉದ್ದೇಶವಾಗಿದೆ.

**ರಾಕ್‌ಡೇಲ್ ಪಯೋನಿಯರ್ಸ್ ಪ್ರಶಸ್ತಿ**



2000ರಲ್ಲಿ ಸ್ಥಾಪಿತವಾದ ರಾಕ್‌ಡೇಲ್ ಪಯೋನಿಯರ್ಸ್ ಪ್ರಶಸ್ತಿಯು ಐಸಿಎ ನೀಡುವ ಅತ್ಯುನ್ನತ ಗೌರವವಾಗಿದೆ. ಇದು ರಾಕ್‌ಡೇಲ್ ಪಯೋನಿಯರ್‌ಗಳ ಉತ್ಸಾಹದಲ್ಲಿ, ಒಬ್ಬ ವ್ಯಕ್ತಿಯನ್ನು ಅಥವಾ ವಿಶೇಷ ಸಂದರ್ಭಗಳಲ್ಲಿ ಸಹಕಾರಿ ಸಂಸ್ಥೆಯನ್ನು ಗುರುತಿಸುವ ಗು–ರಿಯನ್ನು ಹೊಂದಿದೆ, ಇದು ಅವರ ಸದಸ್ಯತ್ವಕ್ಕೆ ಗಮನಾರ್ಹವಾಗಿ ಪ್ರಯೋಜನವನ್ನು ಪಡೆದ ನವೀನ ಮತ್ತು ಆರ್ಥಿಕವಾಗಿ ಸುಸ್ಥಿರ ಸಹಕಾರ ಚಟುವಟಿಕೆಗಳಿಗೆ ಕೊಡುಗೆ ನೀಡುತ್ತದೆ.

ರಾಸಾಯನಿಕ ಇಂಜಿನಿಯರ್, ಅವರು 1976 ರಲ್ಲಿ IFFCO ಗೆ ಸೇರಿದರು. ಅವರ ನಾಯಕತ್ವದಲ್ಲಿ, ಸಹಕಾರಿಯು ತನ್ನ ಉತ್ಪಾದನಾ ಸಾಮರ್ಥ್ಯವನ್ನು 292% ಮತ್ತು ನಿವ್ವಳ ಮೌಲ್ಯವನ್ನು 688% ರಷ್ಟು ಹೆಚ್ಚಿಸಿತು. IFFCO ಭಾರತದಲ್ಲಿ ಅತಿ ದೊಡ್ಡ ರಸಗೊಬ್ಬರ ಉತ್ಪಾದಕ ಮತ್ತು ಮಾರಾಟಗಾರ, ಮತ್ತು ಉಆಕ ತಲಾವಾರು ವಹಿವಾಟಿನ ಮೂಲಕ ವಿಶ್ವದ ಅತಿದೊಡ್ಡ ಸಹಕಾರಿಯಾಗಿದೆ. ನವೆಂಬರ್ 25 ರಂದು ಭಾರತದ ನವದೆಹಲಿಯಲ್ಲಿ ನಡೆದ ICA ಗ್ಲೋಬಲ್ ಸಮಾವೇಶದಲ್ಲಿ ನಡೆದ ವಿಶೇಷ ಸಮಾರಂಭದಲ್ಲಿ ICA ಅಧ್ಯಕ್ಷರಾದ ಏರಿಯಲ್ ಗೌರ್ಕೊ ಅವರು ಸಮಾವೇಶದಲ್ಲಿ 2024 ರ ರಾಕ್‌ಡೇಲ್ ಪಯೋನಿಯರ್ಸ್ ಪ್ರಶಸ್ತಿಯನ್ನು ಇಂಡಿಯನ್ ಫಾರ್ಮರ್ಸ್ ಫರ್ಟಿಲೈಸರ್ ಕೊ–ಆಪರೇಟಿವ್ ಲಿಮಿಟೆಡ್‌ನ (IFFCO) ವ್ಯವಸ್ಥಾಪಕ ನಿರ್ದೇಶಕ ಡಾ. ಉದಯ ಶಂಕರ್ ಅವಸ್ತಿ ಅವ–ರಿಗೆ ಪ್ರದಾನ ಮಾಡಲಾಗಿದೆ. "ನಾವು ಸೇವೆ ಸಲ್ಲಿಸದವರಿಗೆ ಸೇವೆ ಸಲ್ಲಿಸಲು ಪ್ರತಿಜ್ಞೆ ಮಾಡುತ್ತೇವೆ" ಎಂದು ರಾಕ್‌ಡೇಲ್ ಪಯೋನಿಯರ್ಸ್ ಅವಾರ್ಡ್ 2024 ಪುರಸ್ಕೃತರಾದ ಡಾ. U. S. ಅವಸ್ಥಿ ಘೋಷಿಸಿದರು.

**ಸಮೇಶದಲ್ಲಿ ಆಯೋಜಿಸಿದ ಅವಧಿಗಳು:**

ICA ಗ್ಲೋಬಲ್ ಕೋ–ಆಪರೇಟಿವ್ ಸಮಾವೇಶದಲ್ಲಿ ವಿವಿಧ ವಿಶೇಷ ಮತ್ತು ವಿವರಣೆಗೊಳ್ಳುವ ಅವಧಿಗಳನ್ನು ಆಯೋಜಿಸಲಾಗುತ್ತದೆ. ICA ಗ್ಲೋಬಲ್ ಕೋ–ಆಪರೇಟಿವ್ ಸಮಾವೇಶ–2024 ಜನಜೀವನದ ವಿಸ್ತಾರ, ಹೊಸ ಅವಶ್ಯಕತೆಗಳು ಮತ್ತು ಸಾಮಾಜಿಕ ಸುಸ್ಥಿರತೆಯನ್ನು ಉತ್ತೇಜಿಸಲು ಕೋ–ಆಪರೇಟಿವ್ ಚಳವಳಿಯ ಭವಿಷ್ಯದ ದಾರಿ ಸುಧಾ–ರಿಸಲು ಕೇಂದ್ರಿತವಾಗಿದೆ. ಈ ಸಮಾವೇಶದ ಪ್ರಮುಖ ವಿಷಯಗಳು ಜಾಗತಿಕ ಸಹಕಾರ ಚಳವಳಿಯ ಸವಾಲುಗಳನ್ನು ಹಾಗೂ ಅವಕಾಶಗಳನ್ನು ಪರಿಚಯಿಸಿ, ವಿವಿಧ ಕೋ–ಆಪರೇಟಿವ್ ಮಾದರಿಗಳ ಬೆಳವಣಿಗೆಗೆ ಹೊಸ ಮಾರ್ಗಗಳನ್ನು ತೆರೆದಿಡುತ್ತವೆ. ಐಸಿಎ ಸಮಾವೇಶ ಕಾರ್ಯಕ್ರಮಗಳಲ್ಲಿ, ಕಾರ್ಯಾಗಾರಗಳು ಬಹು ಅರ್ಥಪೂರ್ಣವಾಗಿವೆ. ಅವುಗಳಲ್ಲಿ ಸಾಮಾನ್ಯವಾಗಿ ಸಹಕಾರದ ಮುಖ್ಯವಾದ ಹಂತಗಳನ್ನು ಚರ್ಚಿಸುವ ಮತ್ತು ಅವುಗಳನ್ನು ಕಾರ್ಯಕ್ಷಮತೆಯುಳ್ಳದಾಗಿದ್ದು, ಅನುಷ್ಠಾನಗೊಳಿಸುವ ಕುರಿತು ಮಾಹಿತಿ ನೀಡಲಾಗುತ್ತದೆ. ಕಾರ್ಯಾಗಾರಗಳ ಮುಖ್ಯ ಉದ್ದೇಶವು ಪ್ರವೃತ್ತಿಗಳು, ಯೋಜನೆಗಳು ಮತ್ತು ಸಾಧನೆಗಳನ್ನು ತಿಳಿದು ಕೊಳ್ಳುವುದರೊಂದಿಗೆ ಸಂಘಟಿತ ಸಮುದಾಯಗಳು ಹೇಗೆ ಯಶಸ್ವಿಯಾಗಿ



ಕಾರ್ಯನಿರ್ವಹಿಸಬಹುದೆಂಬುದನ್ನು ವಿವರಿಸುವುದಾಗಿದೆ. ICA ಗ್ಲೋಬಲ್ ಕೋ–ಆಪರೇಟಿವ್ ಸಮಾವೇಶದಲ್ಲಿ ಒಟ್ಟು 31 ಸಂಪನ್ಮೂಲ ವ್ಯಕ್ತಿಗಳು ಉಪನ್ಯಾಸ ನೀಡಿರುತ್ತಾರೆ. ಹಾಗೂ 24 ಚರ್ಚಾಗೋಷ್ಠಿಗಳಿದ್ದು, 104 ಚರ್ಚಾಗೋಷ್ಠೀಯ ವಿಚಾರವಂತುಕರಾಗಿ ಸಂಪನ್ಮೂಲ ವ್ಯಕ್ತಿಗಳು ಆಗಮಿಸಿ ವಿಚಾರ ಸಂಕೀರ್ಣ ನಡೆಸಿರುತ್ತಾರೆ.

**ICA ಗ್ಲೋಬಲ್ ಕೋಆಪರೇಟಿವ್ ಸಮಾವೇಶದಲ್ಲಿ 2024 ಮುಖ್ಯ ವಿಷಯಗಳು:**

**1. ಸಹಕಾರದ ಮೌಲಿಕ ತತ್ವಗಳು (Principles of Cooperation):** ಸಹಕಾರದ ಧೋರಣೆಗಳು ಮತ್ತು ಮೌಲ್ಯಗಳು, ಸಮಾಜದಲ್ಲಿ ಪರಿಸರದ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಸಹಕಾರದ ಪಾತ್ರ. ಭದ್ರತೆ, ಸಮಾನತೆ, ನ್ಯಾಯತೆ, ಸಶಕ್ತ ಸಹಕಾರ ಸಂಘಟನೆಗಳಲ್ಲಿ ಹೇಗೆ ಈ ಮೌಲ್ಯಗಳನ್ನು ರೂವಾರಿ ಮಾಡಬಹುದು ಎಂಬುದರ ಕುರಿತು ಚರ್ಚೆಗಳು.

**2. ನವೀಕರಣ ಮತ್ತು ತಂತ್ರಜ್ಞಾನದ ಬಳಕೆ (Innovation and Use of Technology):** ಸಹಕಾರ ಸಂಘಟನೆಗಳು ತಂತ್ರಜ್ಞಾನವನ್ನು ಹೇಗೆ ಬಳಸಬಹುದು ಎಂಬುದರ ಬಗ್ಗೆ ಚರ್ಚೆಗಳು. ಡಿಜಿಟಲ್ ಪರಿವರ್ತನೆ, ಡೇಟಾ ಸಂಗ್ರಹಣೆ, ಮತ್ತು ನಿರ್ವಹಣೆ ಕುರಿತು ಕಾರ್ಯಾಗಾರಗಳು.

**3. ಸಹಕಾರದ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವುದು (Developing Cooperative Systems):** ಸಹಕಾರ ಸಂಘದ ಸ್ಥಾಪನೆ, ಹೊಸ ಸಂಘಗಳನ್ನು ಹೇಗೆ ಸ್ಥಾಪಿಸಬೇಕು, ಯಾವುದೇ ಸಮಸ್ಯೆಗಳನ್ನು ಎದು–ರಿಸುವುದು, ಹಾಗೂ ಸಮುದಾಯವನ್ನು ಸಹಕಾರದ ಕಾರ್ಯವಿಧಾನದಲ್ಲಿ ಭಾಗವಹಿಸುವುದು ಸ್ಥಿತಿಗತಿಯನ್ನು ವಿಶ್ಲೇಷಣೆ, ಯಶಸ್ವಿ ವ್ಯವಸ್ಥೆಗಳ ಪರಿಚಯ, ಪೈಕಿ ನೈತಿಕತೆ ಮತ್ತು ಕಾರ್ಯನಿರ್ವಹಣೆಯ ಸ್ವರೂಪ.

**4. ನಗದು ಮತ್ತು ಸಂಪನ್ಮೂಲ ನಿರ್ವಹಣೆ (Financial and Resource Management):** ಸಹಕಾರದ ಸಂಘಗಳ ಆರ್ಥಿಕ ಸ್ಥಿತಿಗೆ ಸಂಬಂಧಿಸಿದ ಕಾರ್ಯಾಗಾರಗಳು, ಹೂಡಿಕೆ, ಸಾಲಗಳು, ಇನ್ವೆಸ್ಟ್‌ಮೆಂಟ್, ಮತ್ತು ಲಾಭಾಂಶ. ಸ್ವಸಹಕಾರ ಸಂಘಟನೆಗಳ ಆರ್ಥಿಕ ಪೈಕಿ ಮತ್ತು ನಗದು ನಿರ್ವಹಣೆ ಬಗ್ಗೆ ಅರ್ಥಮಾಡಿಕೊಳ್ಳುವುದು.

**5. ಸ್ಥಳೀಯ ಮತ್ತು ಜಾಗತಿಕ ಚಟುವಟಿಕೆಗಳು (Local and Global Activities):** ಸ್ಥಳೀಯ ಅಭಿವೃದ್ಧಿ: ವೈಶಿಷ್ಟಮಯ ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುವ ಸಹಕಾರದ ಪದ್ಧತಿಗಳು. ಜಾಗತಿಕ ಸಂಪರ್ಕಗಳು: ಜಾಗತಿಕ ಸಹಕಾರ ಸಂಘಟನೆಗಳು ಒಂದೇ ನಿಟ್ಟಿನಲ್ಲಿ ಹೇಗೆ ಕಾರ್ಯನಿರ್ವಹಿಸುತ್ತಿವೆ ಎಂಬುದರ ಬಗ್ಗೆ ಚರ್ಚೆ.

**6. ಸಹಕಾರದಲ್ಲಿ ನಾಯಕತ್ವ ಮತ್ತು ನಿರ್ವಹಣೆ (Leadership and Governance in Cooperatives):** ನಾಯಕತ್ವ ಕೌಶಲ್ಯಗಳು: ಯಶಸ್ವಿಯಾದ ನಾಯಕತ್ವಕ್ಕಾಗಿ ಅಗತ್ಯವಿರುವ ಕೌಶಲ್ಯಗಳು. ನಿರ್ವಹಣಾ ತಂತ್ರಗಳು, ಉತ್ತಮ ಆಡಳಿತಕ್ಕಾಗಿ ಅನುಸರಿಸಬೇಕಾದ ವಿಧಾನಗಳು ಮತ್ತು ತಂತ್ರಜ್ಞಾನಗಳು.

**7. ಅಳವಡಿಕೆ ಮತ್ತು ಗುಣಮಟ್ಟದ ಖಚಿತತೆ (Implementation and Quality Assurance):** ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು, ಪ್ರಯೋಜನಕಾರಿ ಪರಿಕಲ್ಪನೆಗಳನ್ನು ಮಾಡುವುದು. ಗುಣಮಟ್ಟವನ್ನು ಸುಧಾರಿಸುವ ಪ್ರಯತ್ನಗಳು ಮತ್ತು ಪರಿಣಾಮಕಾರಿ ಕಡ್ಡಾಯ ನಿಯಮಗಳು.

**ICA ಗ್ಲೋಬಲ್ ಕೋಆಪರೇಟಿವ್ ಕಾನ್ಫರೆನ್ಸ್ 2024: ಪ್ರಮುಖ ವಿಷಯಗಳು ಮತ್ತು ಭವಿಷ್ಯದ ದೃಷ್ಟಿಕೋಣ**

ICA ಗ್ಲೋಬಲ್ ಕೋ–ಆಪರೇಟಿವ್ ಸಮಾವೇಶವು 2024ವು ಜಾಗತಿಕ ಸವಾಲುಗಳನ್ನು ಮತ್ತು ಅವಕಾಶಗಳನ್ನು ಪರಿಚಯಿಸುವ ವರ್ಣನಾತ್ಮಕ ಕಾರ್ಯಚಟುವಟಿಕೆಗಳಿಗೆ ನವೀನ ದಾರಿ ತೆರೆದಿಡುವ ಮೂಲಕ, ಎಲ್ಲರಿಗೂ ಶಾಂತಿ, ಪ್ರಗತಿ ಮತ್ತು ಸಮೃದ್ಧಿಗೆ ಸಹಕಾರ ಚಳವಳಿಯನ್ನು ಮುಂದುವರಿಸಲು ಎಚ್ಚರಿಕೆ ಹಾಗೂ ಪ್ರೇರಣೆ ನೀಡಲು ಉದ್ದೇಶಿಸಲಾಗಿದೆ. ಈ ಸಮಾವೇಶದಲ್ಲಿ ಮುಖ್ಯವಾದ ವಿಷಯಗಳು ಜಾಗತಿಕ ಸಹಕಾರ ಚಳವಳಿಯನ್ನು ಇನ್ನಷ್ಟು ಸದೃಢವಾಗಿ ರೂಪಿಸಲು ಮತ್ತು ಸಹಕಾರಿ ಭವಿಷ್ಯದ ಸ್ಥಾಪನೆಗೆ ಪ್ರೇರಣೆಯಾಗಿದೆ. ಕೋ–ಆಪರೇಟಿವ್ ಎಂಟರ್‌ಪ್ರೈಜಸ್ – ಇವು ತಮ್ಮ ಮೌಲ್ಯಗಳು ಮತ್ತು ತತ್ವಗಳನ್ನು ಹೊಂದಿರುವುದು, ಈ ಸಮಾಜ ಮತ್ತು ಗ್ರಹದ ಸಮೃದ್ಧಿಯನ್ನು ಸಾಧಿಸಲು

ಮತ್ತು ಜಾಗತಿಕ ಗುರಿಗಳ ಯಶಸ್ಸಿಗೆ ಅನುಕೂಲವಾಗುವ ಮೂಲಕ ಜವಾಬ್ದಾರಿ ಹೊತ್ತಿರುತ್ತವೆ. ಉತ್ಥಾನದ ಪ್ರಗತಿಯನ್ನು ಉತ್ತೇಜಿಸಲು ಮತ್ತು ವಿಶ್ವದ ಮೇಲೆ ಜಾಗತಿಕ ಅಸ್ತಿತ್ವವನ್ನು ಸಹಕಾರ ಚಳವಳಿಯ ಬಲವನ್ನು ಘೋಷಿಸಲು ಈ ಸಮಾವೇಶವು ನೆರವು ನೀಡಲು ಉದ್ದೇಶಿಸಲಾಗಿದೆ.

ICA ಗ್ಲೋಬಲ್ ಕೋ–ಆಪರೇಟಿವ್ ಸಮಾವೇಶ 2024ವು ವೈವಿಧ್ಯಮಯ ಭಾಗವಹಿಸುವವರನ್ನು ಸೇರಿಸಿಕೊಳ್ಳಲು ಹಾಗೂ ಅವರು ತಮ್ಮ ಸಾಮಾನ್ಯ ಗುರಿಗಳನ್ನು ಅಭಿವೃದ್ಧಿಪಡಿಸಲು, ಸಹಕಾರ ಚಳವಳಿಯ ಯಶಸ್ಸಿಗೆ ಇರುವ ಮುನ್ನಡೆಯನ್ನು ಚರ್ಚಿಸಲು ಒಂದು ವೇದಿಕೆಯನ್ನು ಒದಗಿಸಲಿದೆ. ಈ ಚರ್ಚೆಗಳು ನಾಲ್ಕು ಮುಖ್ಯ ವಿಭಾಗಗಳನ್ನು ಅಥವಾ ಪಿಲ್ಲರ್‌ಗಳನ್ನು ಚರ್ಚಿಸಿ, ಮತ್ತು ಸಹಕಾರ ಚಳವಳಿಯನ್ನು ಸ್ಥಿರತೆ, ಸಾಮಾಜಿಕ ಸಮಾನತೆ ಮತ್ತು ಜಾಗತಿಕ ಸುಸ್ಥಿರತೆಯುಳ್ಳ ಒಂದು ದಿಕ್ಕಿನಲ್ಲಿ ಮತ್ತಷ್ಟು ಮುಂದುವರಿಸಲು ಮಾರ್ಗವನ್ನರಿಸಲಾಗಿದೆ.

**1. ಕಾರ್ಯನೀತಿ ಮತ್ತು ಉದ್ಯಮಿಯ ವೈವಿಧ್ಯಮಯ ವಾತಾವರಣಗಳ ಸೃಷ್ಟಿ**

ಉದ್ದೇಶ: ಈ ವಿಷಯವು ಕಾರ್ಯನೀತಿ ಮತ್ತು ಉದ್ಯಮಿಯ ಪರಿಕರಗಳು ಸಹಕಾರ ಚಳವಳಿಯ ಬೆಳವಣಿಗೆಗೆ ಹೇಗೆ ಉತ್ತೇಜನ ನೀಡಬಹುದು ಎಂಬುದನ್ನು ಅನ್ವೇಷಿಸುತ್ತದೆ. ಸರ್ಕಾರಗಳು, ಸಂಸ್ಥೆಗಳು ಮತ್ತು ಸಹಕಾರ ಸಂಘಟನೆಗಳ ನಡುವೆ ಸಹಕಾರ ಒದಗಿಸಲು ಅವಕಾಶವನ್ನು ಹೊರತುಪಡಿಸಬೇಕಾಗಿದೆ.

**ಪ್ರಮುಖ ಚರ್ಚಾ ವಿಷಯಗಳು:**

– ಸಹಕಾರ ಸಂಘಗಳ ಬೆಳವಣಿಗೆಗೆ ಅನುಕೂಲವಿರುವ ನೀತಿಗಳು

– ಉದ್ಯಮೀ ಚಟುವಟಿಕೆಗಳಿಗೆ ಬೆಂಬಲ ನೀಡುವ ವಾತಾವರಣ

– ಸಹಕಾರ ಮಾದರಿಗಳಲ್ಲಿ ನವೀನತೆಯ ಪಾತ್ರ

**2. ಉದ್ದೇಶ ಪೂರ್ವಕ ನಾಯಕತ್ವವನ್ನು ಪೋಷಿಸುವುದು**

ಉದ್ದೇಶ : ಈ ವಿಷಯವು ನಾಯಕತ್ವ ಮಹತ್ವವನ್ನು ವಿವರಿಸುತ್ತದೆ ಮತ್ತು ಸಹಕಾರ ಚಳವಳಿಯಲ್ಲಿ ಉದ್ದೇಶಪೂರ್ವಕ ಹಾಗೂ ಮೌಲ್ಯ–ಚಾಲಿತ ನಾಯಕತ್ವದ ಬಗ್ಗೆ ಚರ್ಚಿಸುತ್ತದೆ. ಈ ಕಾರಣದಿಂದ, ಸಹಕಾರ ಸಂಘಟನೆಗಳು ಉತ್ತಮ ಮತ್ತು ಸಾಮಾಜಿಕವಾಗಿ ಹೊಣೆಗಾರಿಕೆಯಿಂದ ಕೂಡಿದ ನಾಯಕತ್ವದ ಮೂಲಕ ತಮ್ಮ ಚಟುವಟಿಕೆಯನ್ನು ನಡೆಸುವುದು.

**ಪ್ರಮುಖ ಚರ್ಚಾ ವಿಷಯಗಳು:**

– ಸದೃಢ ಮತ್ತು ಉದ್ದೇಶಪೂರ್ವಕ ನಾಯಕತ್ವದ ಅಭಿವೃದ್ಧಿ

– ಕೋ–ಆಪರೇಟಿವ್ ಮಾದರಿಯಲ್ಲಿ ಮುಂದುವರಿದ ದಾರಿ

– ಮೌಲ್ಯಗಳಿಗೆ ಅನುಗುಣವಾಗಿರುವ ತತ್ವಮೂಲಕ ನಾಯಕತ್ವ

**3. ಕೋ–ಆಪರೇಟಿವ್ ಗುರುತು ಹೆಚ್ಚುವಿಕೆ ಮತ್ತು ಅಸ್ತಿತ್ವವನ್ನು ದೃಢಪಡಿಸುವುದು**

ಉದ್ದೇಶ : ಈ ವಿಷಯವು ಸಹಕಾರ ಚಳವಳಿಯ ತತ್ವಗಳನ್ನು ಮತ್ತು ಗುರುತನ್ನು ಮತ್ತಷ್ಟು ದೃಢಪಡಿಸುವುದಕ್ಕೆ ಸಹಕಾರಿಯಾಗುತ್ತದೆ. ಈ ವಿಷಯದ ಮೂಲಕ ಸಹಕಾರದ ಪ್ರಾಮುಖ್ಯತೆಯನ್ನು ಮತ್ತು ಅದರ ಪ್ರಭಾವವನ್ನು ಎಲ್ಲೆಡೆ ಹೇಳಿಕೆಗೆ ತರಲಾಗುತ್ತದೆ.

**ಪ್ರಮುಖ ಚರ್ಚಾ ವಿಷಯಗಳು**

– ಸಹಕಾರ ಚಳವಳಿಯ ಗುರುತು

– ಸಹಕಾರದ ಶಕ್ತಿಯನ್ನು ಪೋಷಿಸುವ ಪ್ರಕ್ರಿಯೆಗಳು

– ಪ್ರಾಮುಖ್ಯತೆಯನ್ನು ಹೆಚ್ಚಿಸುವ ಸಹಕಾರಗಳು

**4. ಕೋ–ಆಪರೇಟಿವ್ ಭವಿಷ್ಯವನ್ನು ರೂಪಿಸುವುದು**

ಉದ್ದೇಶ: ಈ ವಿಭಾಗವು ಸಹಕಾರದ ಭವಿಷ್ಯವನ್ನು ರೂಪಿಸುವುದಕ್ಕೆ ಹಾಗೂ ಪ್ರಪಂಚಾದ್ಯಾಂತ ಸಹಕಾರ ಚಳವಳಿಗೆ ಹೊಸ ದಾರಿ ಪ್ರದರ್ಶಿಸಲು ಕೇಂದ್ರಿತವಾಗಿದೆ. ಇಲ್ಲಿ ಚರ್ಚೆಗಳು ಸಹಕಾರ ಚಳವಳಿಯ ಮುಂದಿನ ಗುರಿಗಳನ್ನು, ಯಥಾರ್ಥವನ್ನು ಮತ್ತು ಸಹಕಾರದ ಶಕ್ತಿಯನ್ನು ಹೆಚ್ಚುಸುವಲ್ಲಿ ಪ್ರಾಮುಖ್ಯತೆ

**ಪ್ರಮುಖ ಚರ್ಚಾ ವಿಷಯಗಳು**

– ಸಹಕಾರದ ಸ್ಥಿತಿ ಮತ್ತು ಮುಂದಿನ ಮಾರ್ಗಗಳು

– ದೇಶಾದ್ಯಾಂತ ಸಹಕಾರ ಚಳವಳಿಯನ್ನು ಮತ್ತಷ್ಟು ಗುರುತಿಸುವುದಕ್ಕೆ

– ಯುವ ಸೃಜನಶೀಲತೆ ಮತ್ತು ಡಿಜಿಟಲ್ ಪ್ರಗತಿ

ಈ ಎಲ್ಲಾ ಚರ್ಚೆಗಳು ವಿಶ್ವಸಮಾಜದ ಹೊತ್ತಿಗೆ, ಪರಿಸರ ಸ್ನೇಹಿ ಮತ್ತು ಸಮಾನತೆಯೊಂದಿಗೆ ಒಂದರಲ್ಲೊಂದು ಸೂಕ್ತ ಮಾರ್ಗದರ್ಶಕ ಶಕ್ತಿಯನ್ನಾಗಿ ಬೆಳೆಸುವ ಹಾದಿಯನ್ನು ಸಂಕಲ್ಪಿಸುವುದಕ್ಕೆ ಸಹಕಾರ ಚಳವಳಿಯ ತತ್ವಗಳ ಪ್ರಭಾವವನ್ನು ಧನ್ಯವಾದಪೂರ್ವಕವಾಗಿ ವ್ಯಕ್ತಪಡಿಸುತ್ತವೆ. ಆರ್ಥಿಕತೆಯನ್ನು ಸಾಧಿಸಲು ಸಾಮಾಜಿಕ ನ್ಯಾಯ ಅತ್ಯಗತ್ಯ ಮತ್ತು ಪರಿಸರಯುಕ್ತವಾದುದ್ದಾಗಿದೆ. ಅದರ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ, 2030ರ ಕಾರ್ಯಸೂಚಿಯನ್ನು ಒಳಗೊಂಡಂತೆ ಸುಸ್ಥಿರ ಅಭಿವೃದ್ಧಿಯನ್ನು ಅಳವಡಿಸಲಾಗಿದೆ.

ಭಾಗವಹಿಸುವವರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾ, ICA ಅಧ್ಯಕ್ಷರಾದ ಏರಿಯಲ್ ಗೌರ್ಕೊ, "ಈ ಮೂರು ದಿನಗಳ ಕಾರ್ಯಕ್ರಮ ಎಲ್ಲಾ ಭಾಗವಹಿಸುವವರಿಗೆ ಶಕ್ತಿ ತುಂಬಿದೆ, ಸಹಕಾರಿಗಳ ಬಗ್ಗೆ ನಮ್ಮ ತಿಳುವಳಿಕೆಯನ್ನು ಪುಷ್ಟೀಕರಿಸಿದೆ. ನಾನು ಭಾರತದಲ್ಲಿ ಮನೆಯಲ್ಲಿಯೇ ಇದ್ದೇನೆ ಎಂಬುದು ಹೆಮ್ಮೆಯ ವಿಷಯ ನನಗಾಗಿದೆ ಎಂದರು.

**ಸಹಕಾರಿಗಳ ಭವಿಷ್ಯ**

ಎಲ್ಲರಿಗೂ ಸಮೃದ್ಧಿಯನ್ನು ಸೃಷ್ಟಿಸುವ ಕುರಿತು ಹೊಸ ದೆಹಲಿಯ ಕಾರ್ಯಸೂಚಿಯನ್ನು ಐಸಿಎ ಮಹಾ ನಿರ್ದೇಶಕ ಜೆರೊಯೆನ್ ಡೌಗ್ಲಾಸ್ ಪ್ರಸ್ತುತಪಡಿಸಿದರು. ಅಸಮಾನತೆ, ಹವಾಮಾನ ಬದಲಾವಣೆ ಮತ್ತು ಸಂಘರ್ಷದಂತಹ ಜಾಗತಿಕ ಸವಾಲುಗಳನ್ನು ಎದುರಿಸಲು ಸಹಕಾರಿಗಳ ಶಕ್ತಿಯನ್ನು ಒತ್ತಿಹೇಳುತ್ತಾ ಅವರು ಯುಎನ್ ಅಂತರರಾಷ್ಟ್ರೀಯ ಸಹಕಾರ ವರ್ಷ 2025 ಅನ್ನು ಪ್ರಾರಂಭಿಸುವುದಾಗಿ ಘೋಷಿಸಿದರು.

ICA ಗ್ಲೋಬಲ್ ಕೋ–ಆಪರೇಟಿವ್ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ತಮ್ಮ ಭಾಷಣದಲ್ಲಿ, ಸಹಕಾರ ರಾಜ್ಯ ಸಚಿವ ಮುರಳೀಧರ್ ಮೊಹೋಲ್ ಅವರು ಗ್ರಾಮೀಣ ಅಭಿವೃದ್ಧಿಯಲ್ಲಿ ಪ್ರಾಥಮಿಕ ಕೃಷಿ ಸಾಲ ಸಂಘಗಳ (PACS) ವಿಸ್ತರಣಾ ಪಾತ್ರವನ್ನು ಎತ್ತಿ ತೋರಿಸಿದರು. ಪಿಎಸಿ–ಎಸ್‌ಗಳು ತಮ್ಮ ಕಾರ್ಯಗಳನ್ನು ಹೇಗೆ ವೈವಿಧ್ಯಗೊಳಿಸುತ್ತಿವೆ, ಪಿಎಂ ಜನೌಷಧಿ ಕೇಂದ್ರಗಳು, ಪಿಎಂ ಕಿಸಾನ್ ಸಮೃದ್ಧಿ ಕೇಂದ್ರಗಳು ಮತ್ತು ಪಾನಿ

ಸಮಿತಿಗಳು ಹಲವಾರು ಹಳ್ಳಿಗಳಲ್ಲಿ ಸೇವೆ ಸಲ್ಲಿಸುತ್ತಿವೆ, ಇದರಿಂದಾಗಿ ಅವರ ಆದಾಯದ ಸ್ಟ್ರೀಮ್‌ಗಳು ಮತ್ತು ಸಾಮಾಜಿಕ ಪ್ರಭಾವವನ್ನು ವಿಸ್ತ-ರಿಸಲಾಗಿದೆ. ಅಂತಾರಾಷ್ಟ್ರೀಯ ಸಹಕಾರ ಒಕ್ಕೂಟ (ICA) ಗ್ಲೋಬಲ್ ಕೋ-ಆಪರೇಟಿವ್ ಕಾನ್ಫರೆನ್ಸ್ ಒಂದು ಪ್ರಮುಖ ಕಾರ್ಯಕ್ರಮವಾಗಿದೆ, ಅದು ಪ್ರಪಂಚಾದ್ಯಂತ ಸಹಕಾರ ಸಂಘಟನೆಗಳನ್ನು ಸಂವೇದನಾಶೀಲ ವಿಷಯಗಳನ್ನು ಚರ್ಚಿಸಲು ಮತ್ತು ಸಹಕಾರ ಕ್ಷೇತ್ರದಲ್ಲಿ ನಡೆಯುತ್ತಿರುವ ಮಹತ್ವಪೂರ್ಣ ಪ್ರಗತಿಗಳ ಬಗ್ಗೆ ಚರ್ಚಿಸಲು ಸೇರಿಸುತ್ತದೆ. ICA ಒಂದು ಅಂತಾರಾಷ್ಟ್ರೀಯ ಸಂಸ್ಥೆಯಾಗಿದೆ, ಇದು ಜಾಗತಿಕ ಮಟ್ಟದಲ್ಲಿ ಸಹಕಾರಗಳನ್ನು ಪ್ರತಿನಿಧಿಸುತ್ತದೆ ಮತ್ತು ಬೆಂಬಲಿಸುತ್ತದೆ. ಈ ಸಂಸ್ಥೆಯ ಉದ್ದೇಶವು ಸಹಕಾರದ ಮೌಲ್ಯಗಳನ್ನು ಮತ್ತು ಸಿದ್ಧಾಂತಗಳನ್ನು ಪ್ರಚಾರ ಮಾಡುವುದು, ಮತ್ತು ಸಹಕಾರಗಳನ್ನು ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗೆ ಒಂದು ಮಾದರಿಯಾಗಿ ಪ್ರಚಾರ ಮಾಡುವುದಾಗಿದೆ.

ಈ ಸಮಾವೇಶದಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಸಿಎ ಇವರು, ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿರವರು ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಭಾಗವಹಿಸಿರುತ್ತಾರೆ.

## ವಿಶ್ವಸಂಸ್ಥೆಯಿಂದ ಎರಡನೇ ಬಾರಿಗೆ ಅಂತರರಾಷ್ಟ್ರೀಯ ಸಹಕಾರಿ ವರ್ಷ ಘೋಷಣೆ

2025ನ್ನು ವಿಶ್ವ ಸಂಸ್ಥೆಯವರು "ಅಂತರರಾಷ್ಟ್ರೀಯ ಸಹಕಾರಿ ವರ್ಷವನ್ನಾಗಿ" ಘೋಷಣೆ ಮಾಡಿದ್ದಾರೆ. ವಿಶ್ವಸಂಸ್ಥೆಯವರು ಎರಡನೇ ಬಾರಿಗೆ ಸಹಕಾರ ಕ್ಷೇತ್ರಕ್ಕೆ ಈ ಆದ್ಯತೆಯನ್ನು ನೀಡಿರುವುದು ಸಹಕಾರ ಕ್ಷೇತ್ರದ ಮಹತ್ವ ಹಾಗೂ ಕಾರ್ಯನಿರ್ವಹಣೆ, ಸಾಧನೆಗಳನ್ನು ಪ್ರತಿಬಿಂಬಿಸುತ್ತದೆ ಮತ್ತು ಸಹಕಾರ ಕ್ಷೇತ್ರದ ಬಗ್ಗೆ ಹೆಚ್ಚಿನ ವಿಶ್ವಾಸವನ್ನು ಮೂಡಿಸುವಂತ್ತಾಗಿದೆ.

ಈ ಹಿಂದೆ ವಿಶ್ವ ಸಂಸ್ಥೆಯವರು 2012ರಲ್ಲಿ ಪ್ರಥಮ ಬಾರಿಗೆ ಅಂತರರಾಷ್ಟ್ರೀಯ ವರ್ಷವನ್ನಾಗಿ ಘೋಷಣೆ ಮಾಡಿದ್ದರು. ಆ ಸಂದರ್ಭದಲ್ಲಿ "ಸಹಕಾರಿ ಸಂಸ್ಥೆಗಳು ಒಂದು ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡುತ್ತವೆ" ಎಂಬುದಾಗಿತ್ತು. ಈ ಬಾರಿ ಅಂತರರಾಷ್ಟ್ರೀಯ ಸಹಕಾರಿ ವರ್ಷವನ್ನಾಗಿ ಘೋಷಿಸಿದ ವಿಶ್ವ ಸಂಸ್ಥೆಯವರು ಸಹಕಾರಿ ಸಂಸ್ಥೆಗಳು ಉತ್ತಮ ವಿಶ್ವವನ್ನು ನಿರ್ಮಾಣ ಮಾಡಬಲ್ಲವು ಎಂಬುದಾಗಿ ಘೋಷಿಸಿದ್ದಾರೆ.

ವಿಶ್ವದಲ್ಲಿ 30 ಲಕ್ಷ ಸಹಕಾರಿ ಸಂಸ್ಥೆಗಳಿವೆ, 120 ಕೋಟಿ ಸದಸ್ಯರ ಬಳಗ ಹೊಂದಿದೆ, ಕೃಷಿ, ಗ್ರಾಹಕ, ಮೀನುಗಾರಿಕೆ, ಆರೋಗ್ಯ, ಗೃಹ, ವಿಮೆ, ಬ್ಯಾಂಕಿಂಗ್, ಕೈಗಾರಿಕೆ ಮುಂತಾದ ಸೇವಾ ಕ್ಷೇತ್ರಗಳಲ್ಲಿ ಸಹಕಾರ ಕ್ಷೇತ್ರ ಅದ್ವಿತೀಯ ಸಾಧನೆಗಳನ್ನು ಮಾಡಿ ಸಾರ್ವಜನಿಕರ ಹಾಗೂ ಸಹಕಾರಿಗಳ ಗಮನ ಸೆಳೆದಿದೆ.

**ಅಂತರರಾಷ್ಟ್ರೀಯ ಸಹಕಾರ ವರ್ಷದ – 2025 ಘೋಷಣೆಯ ಉದ್ದೇಶಗಳು**

1. ಸಾರ್ವಜನಿಕರಲ್ಲಿ ಸಹಕಾರ ಕುರಿತು ಜಾಗೃತಿ ಮೂಡಿಸುವುದು.
2. ಸಹಕಾರ ಕ್ಷೇತ್ರದ ಬೆಳವಣಿಗೆ ಹಾಗೂ ಅಭಿವೃದ್ಧಿಯನ್ನು ಸಾಧಿಸುವುದು.
3. ಸಹಕಾರ ಕ್ಷೇತ್ರದ ಬೆಳವಣಿಗೆಗೆ ಸುರಕ್ಷಾ ಬೇಲಿಯನ್ನು ನಿರ್ಮಿಸುವುದು.
4. ಕ್ಷೇತ್ರದ ಅಭಿವೃದ್ಧಿಗಾಗಿ ಉತ್ತಮ ನಾಯಕತ್ವವನ್ನು ಬೆಳೆಸುವುದು ಹಾಗೂ ಯುವಕರು ಈ ಕ್ಷೇತ್ರದಲ್ಲಿ ಹೆಚ್ಚಾಗಿ ಬರುವಂತೆ ಪ್ರೇರೇಪಿಸುವುದು.

ದೆಹಲಿಯಲ್ಲಿ ನಡೆದ ಅಂತರರಾಷ್ಟ್ರೀಯ ವಿಶ್ವ ಸಹಕಾರಿ ಸಮಾವೇಶ ಈ ಎಲ್ಲಾ ಉದ್ದೇಶಗಳ ಸಾಧನೆಗಾಗಿ ಹಲವಾರು ಪ್ರಸ್ತಾವನೆಗಳನ್ನು ಮಂಡಿಸಿದೆ, ಸುಧೀರ್ಘವಾಗಿ ಚರ್ಚೆಗಳು ನಡೆದಿವೆ, ಅನೇಕ ಉತ್ತಮ ನಿರ್ಣಯಗಳು ಆಗಿವೆ, ಈ ಎಲ್ಲಾ ಬೆಳಗವಣಿಗೆಗಳ ಹಿನ್ನೆಲೆಯಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸುವರ್ಣ ಕಾಲ ಬರಲಿದೆ ಎಂಬುದನ್ನು ಅಪೇಕ್ಷಿಸಬಹುದು.



**ಕೊಪ್ಪಳ :** ದಿನಾಂಕ 28.11.2024 ರಂದು ಕೊಪ್ಪಳ ಜಿಲ್ಲೆಯ ಕಾರಟಗಿ ತಾಲೂಕಿನ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಸಭೆಯನ್ನು ಎಲ್.ವಿ.ಟಿ ಕಲ್ಯಾಣ ಮಂಟಪ ಕಾರಟಗಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರರವರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಶರಣಪ್ಪ ಚನ್ನಳ್ಳಿಯವರು ಉಪಸ್ಥಿತರಿದ್ದರು. ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಸೂರ್ಯಕಾಂತ ರ್‍ಯಾಕಲೆಯವರು ಸೌಹಾರ್ದ ಸಹಕಾರಿ ಕಾಯ್ದೆ ಮತ್ತು ಶಾಸನಾತ್ಮಕ ಮಾಹಿತಿಯ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ 58 ಪ್ರತಿನಿಧಿಗಳು ಭಾಗವಹಿಸಿದ್ದರು

# 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತವು ದಿನಾಂಕ 02/12/2024 ರಿಂದ 11/12/2024ವರೆಗೆ ಬೆಂಗಳೂರಿನ ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣೆ ಸಂಸ್ಥೆ (ಆರ್.ಐ.ಸಿ . ಎಂ ಪದ್ಮನಾಭನಗರ) ರಲ್ಲಿ ಆಯೋಜಿಸಿರುವ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿಯ ಉದ್ಘಾಟನಾ ಕಾರ್ಯಕ್ರಮವನ್ನು ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು ಪ್ರಾರ್ಥನೆಯನ್ನು ಶ್ರೀಮತಿ ಶೈಲಾ ಶರಧಿ ಸೌಹಾರ್ದ ಸಹಕಾರಿ ನಿಯಮಿತ ಚಿಕ್ಕಮಂಗಳೂರು ಇವರು ನಡೆಸಿಕೊಟ್ಟರು, ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಎಸ್. ಎನ್. ಅರುಣ್ ಕುಮಾರ್, ಮಾನ್ಯ ಅಪರ ನಿಬಂದಕರು ಹಾಗೂ ಸದಸ್ಯರು (ಸಹಕಾರ) ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ, ಬೆಂಗಳೂರು, ಇವರು ನೆರವೇರಿಸಿದರು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಜಿ. ನಂಜನಗೌಡ ಮಾನ್ಯ ಅಧ್ಯಕ್ಷರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಬೆಂಗಳೂರು, ಇವರು ವಹಿಸಿದ್ದರು, ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಶ್ರೀ ಸುರೇಶ್.ಪಿ. ಎನ್. ಮಾನ್ಯ ಪ್ರಾಂತೀಯ ನಿರ್ದೇಶಕರು, ಪ್ರಾದೇಶಿಕ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ, ಬೆಂಗಳೂರು, ಇವರು ಉಪಸ್ಥಿತರಿದ್ದರು, ತರಬೇತಿಯ ಪ್ರಾಸ್ತಾವಿಕ ನುಡಿಯನ್ನು ಶ್ರೀ ಶರಣಗೌಡ ಜಿ. ಪಾಟೀಲ್ ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ನೆರವೇರಿಸಿದರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ ಒಟ್ಟು 19 ಜಿಲ್ಲೆಗಳಿಂದ, 36 ಸೌಹಾರ್ದ ಸಹಕಾರಿ ಸಂಸ್ಥೆ ಗಳಿಂದ, 51 ಶಿಬಿರಾರ್ಥಿಗಳು ಹಾಗೂ ಸಂಯುಕ್ತ ಸಹಕಾರಿಯಿಂದ 2 ಶಿಬಿರಾರ್ಥಿಗಳು ಭಾಗವಹಿಸಿರುತ್ತಾರೆ.

**ಸಂಯುಕ್ತ ಸಹಕಾರಿಯು ಉತ್ತಮ ಹಾಗೂ ನವೀಕರಣವುಳ್ಳ ತರಬೇತಿಗಳನ್ನು ಆಯೋಜಿಸುತ್ತದೆ. – ಶ್ರೀ ಎಸ್. ಎನ್. ಅರುಣ್ ಕುಮಾರ್**

ತರಬೇತಿ ಕಾರ್ಯಕ್ರಮಕ್ಕೆ ಉದ್ಘಾಟಕರಾಗಿ ಆಗಮಿಸಿದ ಶ್ರೀ ಎಸ್. ಎನ್. ಅರುಣ್ ಕುಮಾರ್, ಮಾನ್ಯ ಅಪರ ನಿಬಂಧಕರು ಹಾಗೂ ಸದಸ್ಯರು (ಸಹಕಾರ) ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ, ಬೆಂಗಳೂರು, ಉದ್ಘಾಟನಾ ಭಾಷಣದಲ್ಲಿ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಬಗ್ಗೆ ತರಬೇತಿಯಲ್ಲಿ ಮಾಹಿತಿ ನೀಡಿದರೆ ಉತ್ತಮವಾಗಿರುವುದು ಎಂಬ ಸಲಹೆಯನ್ನು ನೀಡಿದರು. ಸಹಕಾರ ಸಂಸ್ಥೆಗಳ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಕಾರ್ಯಗಳನ್ನು ನಿರ್ವಹಿಸಿದರೆ ಸಹಕಾರಿ ಸಂಸ್ಥೆಗೆ ಅನುಕೂಲವಾಗುತ್ತದೆ. ಮತ್ತು ಯುವ ಪೀಳಿಗೆ ಸಹಕಾರಿ ಸಂಸ್ಥೆಗೆ ಬರುವುದರಿಂದ ಸಹಕಾರಿ ಸಂಸ್ಥೆಗೆ ಬುನಾದಿಯಾಗುತ್ತದೆ ಮುಂದಿನ ಪೀಳಿಗೆಗೆ ಅದು ಸಹಕಾರಿ ಸಂಸ್ಥೆಗೆ ಉತ್ತಮವಾದ ಬೆಳವಣಿಗೆಗೆ ಕಾರಣವಾಗುತ್ತದೆ ಎಂಬ ಮಾತುಗಳನ್ನು ತಮ್ಮ ಭಾಷಣದಲ್ಲಿ ತಿಳಿಸಿದರು.

**ಸಹಕಾರಿಗಳ ಅಭಿವೃದ್ಧಿಗೆ ಸಿಬ್ಬಂದಿಗಳಿಗೆ ತರಬೇತಿ ಅವಶ್ಯಕ : ಶ್ರೀ ಜಿ. ನಂಜನಗೌಡ**

ಸಹಕಾರ ಸಂಸ್ಥೆಗಳಲ್ಲಿನ ಆರ್ಥಿಕತೆ ಮತ್ತು ಸಾಲ ನೀಡುವಿಕೆ ಬಗ್ಗೆ ಹೆಚ್ಚಿನ ಗಮನ ಹರಿಸಬೇಕೆಂದು ತಿಳಿಸಿದರು. ತರಬೇತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿರುವಂತಹ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು 1997ನೇ ಕಾಯ್ದೆ ಅನ್ವಯದಲ್ಲಿ ಸೌಹಾರ್ದ ಸಹಕಾರಿಯ ಅಡಿಯಲ್ಲಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವ ಬಗ್ಗೆ ಮಾಹಿತಿಯನ್ನು ನೀಡಿದರು. ಹಾಗೂ ಸಂಯುಕ್ತ ಸಹಕಾರಿಯ ಕೆಲಸ ಕಾರ್ಯಗಳ ಬಗ್ಗೆ ಜವಾಬ್ದಾರಿ ಮತ್ತು ಸಹಕಾರಿಗೆ ಇರುವ ವ್ಯವಸ್ಥೆ ಮತ್ತು ಉದ್ದೇಶಗಳ ಬಗ್ಗೆ ಪರಿಪೂರ್ಣವಾಗಿ ಮಾಹಿತಿಯನ್ನು ನೀಡಿದರು. ಸಹಕಾರಿಗಳು ಸಾಲ ನೀಡಿವಿಕೆ ಹಾಗೂ ಸಂಸ್ಥೆಗಳ ದಿನ ಸಿಬ್ಬಂದಿಗಳು ಗಮನಹರಿಸಬೇಕಾದ ಕೆಲವು ಅಂಶಗಳ ಬಗ್ಗೆ ಉತ್ತಮವಾಗಿ ವಿವರವಾಗಿ ತಿಳಿಸಿದರು. ಮತ್ತು ಶೇರು ಹಣದ ಬಗ್ಗೆ ಹಾಗೂ ಸಂಗ್ರಹಣೆ ಬಗ್ಗೆ ಸಹಕಾರಿಗಳಲ್ಲಿ ಅನುಸರಿಸಬೇಕಾದ ಕಾರ್ಯ ಪ್ರಗತಿಯನ್ನು ಹಾಗೂ ಡಿವಿಡೆಂಟ್‌ಗಳನ್ನು ನೀಡುವಾಗ ಅನುಸರಿಸಬೇಕಾದ ಕ್ರಮಗಳನ್ನು ವಿವರವಾಗಿ ತಿಳಿಸಿದರು. ಸೆಕ್ಷನ್ 80ರ ಬಗ್ಗೆ ವಿವರಿಸಿದರು.

**ತರಬೇತಿ ಅಭಿವೃದ್ಧಿಯ ಮೆಟ್ಟಿಲು–ಶ್ರೀ ಸುರೇಶ್**

ತರಬೇತಿ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಆಗಮಿಸಿದಂತಹ ಶ್ರೀ ಸುರೇಶ್ ರವರು ತಮ್ಮ ಭಾಷಣದಲ್ಲಿ ಮಾತನಾಡಿ ಸಹಕಾರಿ ಗಳಲ್ಲಿನ ಶೇರು ಸಂಗ್ರಹಣೆ ಬಗ್ಗೆ ಹಾಗೂ ಸಂಯುಕ್ತ ಸಹಕಾರಿ ಇಂದ ಆಯೋಜಿಸುವಂತಹ ಎಲ್ಲಾ ತರಬೇತಿ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸುತ್ತಿರುವ ವಿಷಯದ ಬಗ್ಗೆ ಹೆಮ್ಮೆಯಿಂದ ತಿಳಿಸಿದರು ಸಂಯುಕ್ತ ಸಹಕಾರಿಯಿಂದ ತರಬೇತಿ ಕಾರ್ಯಕ್ರಮಗಳಲ್ಲಿ ಆಯೋಜಿಸುವ ವಿಷಯಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳ ಬಗ್ಗೆ ತಮ್ಮ ಭಾಷಣದಲ್ಲಿ ವಿವರವಾಗಿ ತಿಳಿಸಿದರು ಹಾಗೂ ಅದರ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

## ಸೌಹಾರ್ದ ಸಹಕಾರಿಗಳಿಗೆ ಸಹಕಾರ ರತ್ನ ಪ್ರಶಸ್ತಿ

ಕರ್ನಾಟಕ ರಾಜ್ಯ ಸಹಕಾರ ಪ್ರತಿಷ್ಠಿತ ಸಹಕಾರ ರತ್ನ ಪ್ರಶಸ್ತಿ 2024 ಇದನ್ನು ಸಹಕಾರ ಸಪ್ತಾಹದ ಸಂದರ್ಭದಲ್ಲಿ ದಿನಾಂಕ 18.11.2024ರಂದು ಬಾಗಲಕೋಟೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಭಾಗವಹಿಸಿದ ಸಂದರ್ಭದಲ್ಲಿ ನಡೆದ ಸಪ್ತಾಹದ ಆಚರಣೆಯಲ್ಲಿ ಈ ಕೆಳಕಂಡ ಸೌಹಾರ್ದ ಸಹಕಾರಿಗಳಿಗೆ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಶ್ರೀ ಜಿ. ಎನ್ ಹೆಗಡೆ ಹಿರೇಸರ
ಮಾನ್ಯ ಅಧ್ಯಕ್ಷರು, ಶ್ರೀಮಾತಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಉಮ್ಮಚಗಿ



ಶ್ರೀ ಎಸ್ ಎನ್ ವಿಶ್ವನಾಥ
ಮಾನ್ಯ ಅಧ್ಯಕ್ಷರು, ಹಿಮಗಿರಿ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಕೊಪ್ಪ



ಶ್ರೀ ನಾಗಲಿಂಗಪ್ಪ ಪತ್ತಾರ
ಮಾನ್ಯ ಅಧ್ಯಕ್ಷರು, ಸ್ವಂದನ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಕೊಪ್ಪಳ



ಶ್ರೀ ಆರ್.ಕೆ ಪಾಟೀಲ,
ಮಾನ್ಯ ಅಧ್ಯಕ್ಷರು, ಆಳಂದ ಸಮೃದ್ಧ ಸೌಹಾರ್ದ ಸಹಕಾರಿ ನಿಯಮಿತ, ಕಲಬುರಗಿ



**ಬೀದರ :** ದಿನಾಂಕ 18.11.2024 ರಂದು ಬೀದರ ಜಿಲ್ಲೆಯ ಜಿರೆ ಕನ್ವೇನಶನಲ್ ಹಾಲ್‌ನಲ್ಲಿ ಆಯೋಜಿಸಲಾಗಿದ್ದ 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಕಾರ್ಯಕ್ರಮವನ್ನು ಶ್ರೀ ಈಶ್ವರ ಖಂಡ್ರೆ ಮಾನ್ಯ ಸಚಿವರು ಅರಣ್ಯ, ಪರಿಸರ ಮತ್ತು ಜೈವಿಕ ಇಲಾಖೆ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರು ಉದ್ಘಾಟಿಸಿದರು. ಸಭೆಗೆ ಮುಖ್ಯ ಅತಿಥಿಗಳಾಗಿ ಮಾನ್ಯ ಪೌರಾಡಳಿತ ಹಜ್ ಸಚಿವರು ಕರ್ನಾಟಕ ಸರ್ಕಾರ. ಮಾನ್ಯ ಶಾಸಕರುಗಳಾದ ಡಾ॥ ಶೈಲೆಂದ್ರ ಬೆಲ್ದಾಳೆ ಡಾ॥ ಸಿದ್ದಲಿಂಗ ಪಾಟೀಲ ನಗರ ಸಭೆ ಬೀದರ ಅಧ್ಯಕ್ಷರಾದ ಶ್ರೀ ಮೊಹಮ್ಮದ ಗೌಸ್ ಶ್ರೀ ಗುರುನಾಥ ಜ್ಯಾಂತೀಕರ್, ಮಾನ್ಯ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು. ಶ್ರೀ ಶೇಖರಗೌಡ ಮಾಲಿಪಾಟೀಲ, ಶ್ರೀಮತಿ ಶಕುಂತಲಾ ಬೆಲ್ದಾಳೆ, ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಅಮರ ಕುಮಾರ ಖಂಡ್ರೆ. ಉಪಾಧ್ಯಕ್ಷರಾದ ಶ್ರೀ ಅಭಿಷೇಕ ಆರ್. ಪಾಟೀಲ, ಸಹಕಾರ ಯೂನಿಯನ್ ಅಧ್ಯಕ್ಷ ಪರಮೇಶ್ವರ ಮುಗಟೆ, ಜಿಲ್ಲಾ ಅಧಿಕಾರಿಗಳಾದ ಶ್ರೀಮತಿ ಶಿಲ್ಪಾ ಶರ್ಮ, ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಕರಾದ ಶ್ರೀ ಗಿರೀಶ ಭದೋಲೆ ಸಹಕಾರ ಇಲಾಖೆಯ ಅಧಿಕಾರಿಗಳಾದ ಶ್ರೀಮತಿ ಆಶಾ ಕೆ ಎಮ್, ಶ್ರೀ ಲಕ್ಷ್ಮೀಪತಯ್ಯಾ, ಶ್ರೀ ವಿಶ್ವನಾಥ ಮಲ್ಕೋಢ್, ಶ್ರೀ ಮಂಜುಳಾ ಜಿಲ್ಲೆಯ ಸಹಕಾರಿ ಧುರೀಣರು, ಸಹಕಾರ ಇಲಾಖೆಯ ಅಧಿಕಾರಿಗಳು ಮಹಾಮಂಡಳದ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೀದರ :** ದಿನಾಂಕ 23.11.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಬೀದರ ಜಿಲ್ಲೆಯ 2024ರಲ್ಲಿ ನೋಂದಣಿಗೊಂಡ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯ ನಿರ್ವಾಹಕರುಗಳಿಗೆ ಪ್ರವೇಶ ತರಬೇತಿಯನ್ನು ಬೀದರ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಪ್ರಾಸ್ತವಿಕ ನುಡಿ ಮತ್ತು ಸ್ವಾಗತವನ್ನು ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ವೀರಶಟ್ಟಿ ಯವರು ಕೋರಿದರು. ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರ ರವರು ಉದ್ಘಾಟಿಸಿದರು. ಮತ್ತು ಸೌಹಾರ್ದ ಕಾಯ್ದೆ ಮತ್ತು ನಿಯಮಗಳ ಕುರಿತು ಮಾಹಿತಿ ನೀಡಿದರು. ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಸಹಕಾರಿಗಳಲ್ಲಿ ಕಡ್ಡಾಯವಾಗಿ ನಿರ್ವಹಿಸಬೇಕಾದ ಕಾರ್ಯಗಳು ಮತ್ತು ದಾಖಲೆಗಳ ಕುರಿತು ಮಾಹಿತಿ ನೀಡಿದರು. ತರಬೇತಿಯಲ್ಲಿ 6 ಸಹಕಾರಿಗಳಿಂದ 12 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

# ಚಾಣಕ್ಯ ವಿಶ್ವವಿದ್ಯಾನಿಲಯದಲ್ಲಿ "ಯುವಜನ ಹಾಗೂ ಸಹಕಾರ" ಸಂವಾದ ಕಾರ್ಯಕ್ರಮ



**ಬೆಂಗಳೂರು :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಹಾಗೂ ಚಾಣಕ್ಯ ವಿಶ್ವವಿದ್ಯಾನಿಲಯ, ದೇವನಹಳ್ಳಿ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ "ಯುವಜನ ಹಾಗೂ ಸಹಕಾರ" ಕುರಿತು ಸಂವಾದ ಕಾರ್ಯಕ್ರಮವನ್ನು ದಿನಾಂಕ: 12.11.2024ರಂದು ಚಾಣಕ್ಯ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ /ವಿದ್ಯಾರ್ಥಿನಿಯರು ಹಾಗೂ ಎಲ್ಲಾ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು ಭಾಗವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ನೇರವೇರಿಸಿದ ಡಾ. ಯಶವಂತ ಡೋಂಗ್ರೆ, ಮಾನ್ಯ ಉಪ ಕುಲಪತಿಗಳು ಚಾಣಕ್ಯ ವಿಶ್ವವಿದ್ಯಾನಿಲಯ, ದೇವನಹಳ್ಳಿ, ಬೆಂಗಳೂರು ಇವರು ಮಾತನಾಡುತ್ತಾ ಇವತ್ತಿನ ಈ ಯುವಜನ ಮತ್ತು ಸಹಕಾರ ಕಾರ್ಯಕ್ರಮವನ್ನು ಆಯೋಜಿಸಿದಂತಹ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಗೆ ವಿಶ್ವವಿದ್ಯಾನಿಲಯದ ವತಿಯಿಂದ ಕೃತಜ್ಞತೆಗಳನ್ನು ಸಲ್ಲಿಸುತ್ತಾ ನಿಸ್ವಾರ್ಥ ಸೇವೆ ಮತ್ತು ಯಾವುದೇ ಫಲಾಪೇಕ್ಷೆ ಇಲ್ಲದೇ ಯುವ ಸಮೂಹ ಸಹಕಾರ ಕ್ಷೇತ್ರಕ್ಕೆ ಬರಲು ಮುಂದಾಗಬೇಕು. ಇದೊಂದು ಸೇವಾ ಕ್ಷೇತ್ರವಾಗಿದ್ದು ಉದ್ಯಮಿಗಳಿಗೆ ಕೈಗಾರಿಕೆ ಸ್ಥಾಪಿಸಲು ಸಾಲ ನೀಡಿದಾಗ ಅದರಿಂದ ನೂರಾರು ಜನರಿಗೆ ಉದ್ಯೋಗ ಸಿಗಲಿದೆ. ಯುವಕರು ಸಹಕಾರ ಕ್ಷೇತ್ರದತ್ತ ಮುಖ ಮಾಡಿ ಸಹಕಾರ ಸಂಸ್ಥೆಗಳನ್ನು ಕಟ್ಟಿ ಬೆಳೆಸುವ ಮೂಲಕ ಸ್ವಸ್ಥ, ಸುಂದರ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಶ್ರೀ ಜಿ. ನಂಜನಗೌಡ ಸಿ.ಎ. ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಇವರು ಮಾತನಾಡುತ್ತಾ ಯುವಕರು ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವುದು ಪ್ರಸ್ತುತತೆಗೆ ಸೂಕ್ತವಾಗಿದೆ. ಇದೊಂದು ವಿನೂತನವಾದ ಕಾರ್ಯಕ್ರಮವಾಗಿದ್ದು ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು ಹಾಗಾಗಿ ಯುವಕರು ಸಹಕಾರ ಕ್ಷೇತಕ್ಕೆ ಬರುವ ಮೂಲಕ ದೇಶದ ಸರ್ವಾಂಗೀಣ ಅಭಿವೃದ್ಧಿಗೆ ತಮ್ಮದೆ ಆದ ಸೇವೆಯನ್ನು ಸಲ್ಲಿಸಬಹುದು ಎಂದು ಹೇಳಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಶ್ರೀ ರಾಘವೇಂದ್ರ ತೊಗರ್ಸಿ, ಮುಖ್ಯಸ್ಥರು, ಸುಧಾ ವಾರ ಪತ್ರಿಕೆ, ಬೆಂಗಳೂರು ಇವರು ಮಾತನಾಡುತ್ತಾ ಸಹಕಾರಿ ರಂಗದಲ್ಲಿ ವಿಫುಲ ಅವಕಾಶವಿದ್ದು ಯುವ ಪೀಳಿಗೆ ಈ ವಿಷಯವಾಗಿ ಸಾಕಷ್ಟು ಅರಿವು ಮೂಡಿಸಿಕೊಂಡು ಭವಿಷ್ಯದಲ್ಲಿ ಉದ್ಯೋಗಿಯಾಗದೆ, ಉದ್ಯಮಿಯಾಗುವತ್ತ ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಯುವಕರು ಮತ್ತು ಸಹಕಾರ ಕುರಿತು ಪ್ರಧಾನ ವಿಷಯ ಮಂಡನೆಯನ್ನು ಡಾ. ಅನಿಲಕುಮಾರ್ ಗರಗ, ಪ್ರೋಫೆಸರ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್, ಚಾಣಕ್ಯ ವಿಶ್ವವಿದ್ಯಾನಿಲಯ, ದೇವನಹಳ್ಳಿ, ಬೆಂಗಳೂರು, ಮುಖ್ಯ ಅತಿಥಿಗಳಾಗಿ ಡಾ. ಸಂದೀಪ್ ನಾಯರ್, ಮಾನ್ಯ ಕುಲಸಚಿವರು (ಮೌಲ್ಯಮಾಪನ), ಚಾಣಕ್ಯ ವಿಶ್ವವಿದ್ಯಾನಿಲಯ, ದೇವನಹಳ್ಳಿ, ಬೆಂಗಳೂರು, ಡಾ. ಸುಶಾಂತ್ ಜೋಷಿ, ಮಾನ್ಯ ಕುಲಸಚಿವರು (ಆಡಳಿತ), ಚಾಣಕ್ಯ ವಿಶ್ವವಿದ್ಯಾನಿಲಯ, ದೇವನಹಳ್ಳಿ, ಬೆಂಗಳೂರು ಇವರು ಭಾಗವಹಿಸಿದ್ದರು.

ಕಾರ್ಯಕ್ರಮದ ವೇದಿಕೆಯ ಮೇಲೆ ಉಪಸ್ಥಿತರಿರುವ ಗಣ್ಯರ ಪರಿಚಯ ಮತ್ತು ಸ್ವಾಗತವನ್ನು ಶ್ರೀ ಚೇತನ ಉಪನ್ಯಾಸಕರು, ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್, ಚಾಣಕ್ಯ ವಿಶ್ವವಿದ್ಯಾನಿಲಯ, ದೇವನಹಳ್ಳಿ, ಬೆಂಗಳೂರು ಹಾಗೂ ಪ್ರಾಸ್ತಾವಿಕವಾಗಿ ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಮಾತನಾಡಿದರು.

**ಸಂವಾದ ಕಾರ್ಯಕ್ರಮ:** ಸಂವಾದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ಸಿ.ಎ. ರವರು ವಹಿಸಿದರು. ಮುಖ್ಯ ಅತಿಥಿಗಳಾಗಿ ಡಾ. ಅನಿಲಕುಮಾರ್ ಗರಗ, ಪ್ರೋಫೆಸರ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್, ಚಾಣಕ್ಯ ವಿಶ್ವವಿದ್ಯಾನಿಲಯ, ದೇವನಹಳ್ಳಿ, ಬೆಂಗಳೂರು, ಡಾ. ಸಂದೀಪ್ ನಾಯರ್, ಮಾನ್ಯ ಕುಲಸಚಿವರು (ಮೌಲ್ಯಮಾಪನ), ಚಾಣಕ್ಯ ವಿಶ್ವವಿದ್ಯಾನಿಲಯ, ದೇವನಹಳ್ಳಿ, ಬೆಂಗಳೂರು, ಡಾ. ಸುಶಾಂತ್ ಜೋಷಿ, ಮಾನ್ಯ ಕುಲಸಚಿವರು (ಆಡಳಿತ), ಚಾಣಕ್ಯ ವಿಶ್ವವಿದ್ಯಾನಿಲಯ, ದೇವನಹಳ್ಳಿ, ಬೆಂಗಳೂರು ಹಾಗೂ ಶ್ರೀ ರಾಘವೇಂದ್ರ ತೊಗರ್ಸಿ, ಮುಖ್ಯಸ್ಥರು, ಸುಧಾ ವಾರ ಪತ್ರಿಕೆ, ಬೆಂಗಳೂರು ಇವರು ಭಾಗವಹಿಸಿದ್ದರು. ಸಂವಾದಕರಾಗಿ ಶ್ರೀ ಶರಣಗೌಡ

ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರು ಮಾತನಾಡಿದರು.

**"ಕ್ಯಾಂಪಸ್ ಕೋ-ಆಪರೇಟಿವ್ ಸೌಹಾರ್ದ ಸಹಕಾರಿಯ" ಪ್ರವರ್ತಕರ ಸಭೆ ಮುಖ್ಯ ಪ್ರವರ್ತಕರಾಗಿ ಡಾ. ಅನಿಲಕುಮಾರ್ ಗರಗ ಆಯ್ಕೆ:**

ಸಂವಾದ ಕಾರ್ಯಕ್ರಮದ ನಂತರ ಮಧ್ಯಾಹ್ನದ ಅವಧಿಯಲ್ಲಿ "ಕ್ಯಾಂಪಸ್ ಕೋ-ಆಪರೇಟಿವ್ ಸೌಹಾರ್ದ ಸಹಕಾರಿಯ" ಪ್ರವರ್ತಕರ ಸಭೆಯನ್ನು ಡಾ. ಯಶವಂತ ಡೋಂಗ್ರೆ, ಮಾನ್ಯ ಉಪ ಕುಲಪತಿಗಳು ಚಾಣಕ್ಯ ವಿಶ್ವವಿದ್ಯಾನಿಲಯ, ದೇವನಹಳ್ಳಿ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಯಿತು. ವಿಶ್ವವಿದ್ಯಾನಿಲಯದ ಬೋಧಕ, ಬೋಧಕೇತರ ಸಿಬ್ಬಂದಿಗಳು ಹಾಗೂ ಯುವ ಪ್ರತಿನಿಧಿಗಳು ಭಾಗವಹಿಸಿದ್ದರು. ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು "ಕ್ಯಾಂಪಸ್ ಕೋ-ಆಪರೇಟಿವ್" ಸಹಕಾರ ಸಂಸ್ಥೆ ರಚಿಸುವುದರಿಂದ ಆಗುವ ಪ್ರಯೋಜನಗಳು ಹಾಗೂ ಅದರ ಧ್ಯೇಯೋದ್ದೇಶಗಳ ಕುರಿತು ವಿವರಿಸಿದರು. ಕ್ಯಾಂಪಸ್ ಕೋ-ಆಪರೇಟಿವ್ ಸೌಹಾರ್ದ ಸಹಕಾರಿಯ ಮುಖ್ಯ ಪ್ರವರ್ತಕರಾಗಿ ಡಾ. ಅನೀಲ್ ಕುಮಾರ್ ಗರಗ್, ಪ್ರೊಫೆಸರ್ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್, ಚಾಣಕ್ಯ ವಿಶ್ವವಿದ್ಯಾನಿಲಯ, ದೇವನಹಳ್ಳಿ, ಬೆಂಗಳೂರು ಇವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಸಭೆಯ ನಿರೂಪಣೆಯನ್ನು ತರಬೇತಿ ಸಲಹೆಗಾರರಾದ ಶ್ರೀ ವಿ.ಜಿ. ಕಾರಕೂನ್‌ರವರು ಹಾಗೂ ವಂದನಾರ್ಪಣೆಯನ್ನು ತರಬೇತಿ ವ್ಯವಸ್ಥಾಪಕರಾದ ಶ್ರೀ ಶಿವಕುಮಾರ ಬಿರಾದಾರ ಇವರು ನೆರವೇರಿಸಿದರು.

---



**ಸಹಕಾರ ಸಂಘಗಳಿಂದ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಿ- ಗುರುನಾಥ ಜ್ಯಾಂತೀಕರ**

**ಬೀದರ :** ದಿನಾಂಕ 16.11.2024 ರಂದು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರ ಹಗೂ ಸಹಕಾರ ಯುನಿಯನ್ ಬೀದರ ಹಾಗೂ ಭಾಲ್ಕಿ ತಾಲೂಕಿನ ಸೌಹರ್ದ ಸಹಕಾರಿಗಳು ಇತರೇ ಸಹಕಾರ ಸಂಘಗಳ ನೇತೃತ್ವದಲ್ಲಿ 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ಕಾರ್ಯಕ್ರಮವನ್ನು ಭಾಲ್ಕಿ ನಗರದ ಬಾಲಾಜಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿತ್ತು. ಸಹಕಾರ ಸಪ್ತಾಹದ ಧ್ವಜಾರೋಹಣವನ್ನು ಡಿಸಿಸಿ ಬ್ಯಾಂಕಿನ ಮಾನ್ಯ ಅಧ್ಯಕ್ಷರಾದ ಶ್ರೀ ಅಮರಕುಮಾರ ಖಂಡ್ರೆ ಯವರು ನೆರವೇರಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತೀಕರರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಬಸವರಾಜ ಹುಡಗೆ, ಮಾನ್ಯ ನಿರ್ದೇಶಕರು, ಬೀದರ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಬೀದರರವರು ವಹಿಸಿದ್ದರು. ಕಾರ್ಯಕ್ರಮದ ಪೂರ್ವದಲ್ಲಿ ಸಹಕಾರ ಜಾಥಾ ನಡೆಸಲಾಯಿತು

---

## ವಿಷಯಾಧಾರಿತ ತರಬೇತಿ ಕಾರ್ಯಕ್ರಮ



**ಕಲಬುರಗಿ :** ದಿನಾಂಕ 25.10.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕಲಬುರಗಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ವಿಷಯಾಧಾರಿತ ತರಬೇತಿಯನ್ನು ಪ್ರಾಂತಿಯ ಕಛೇರಿ ಕಲಬುರಗಿಯ ತರಬೇತಿಯ ಸಭಾಂಗದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರಾದ ಶ್ರೀ ವಿಶ್ವನಾಥ ಮಲಕುಡ ರವರು ನೇರವೆರಿಸಿದರು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾ-ರಿಯ ಮಾನ್ಯ ನಿರ್ದೇಶಕರಾದ ಶ್ರೀ ಶ್ರೀಮತಿ ಶೈಲಜಾ ತಪಲಿಯವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರಾದ ಶ್ರೀ ಸಂಜೀವ ಮಹಾಜನರವರು ಸಂಪನ್ಮೂಲ ವ್ಯಕ್ತಿಗಳಾಗಿ ಶ್ರಿ ಮಂಜುನಾಥ ಭಾಗವತ್, ಶ್ರಿ ಸೈಬರ್ ಕ್ರೈಂ ವಿಭಾಗದ ಅಧಿಕಾರಿಗಳಾದ ಶ್ರೀ ಅಂಬರೀಷ ಮತ್ತು ವಿಠಲ ಭಾಲ್ಕೆಯವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಸ್ತವಿಕ ನುಡಿ ಮತ್ತು ಸ್ವಾಗತವನ್ನು ಕಲಬುರಗಿ ಮಾನ್ಯ ಪ್ರಾಂತೀಯ ಅಧಿಕಾರಿಗಳಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಕೋರಿದರು. ಪ್ರಾರ್ಥನೆಯನ್ನು ಸೌಮ್ಯ ಕುಲಕರ್ಣಿ ಹಾಡಿದರು. ಸಭೆಯಲ್ಲಿ 75 ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಭಾಗವಹಿಸಿದ್ದರು.

## ಆಡಳಿತ ಪರಿಣಿತಿ ತರಬೇತಿ



**ಉಡುಪಿ :** ದಿನಾಂಕ 29.11.2024 ರಂದು ಉಡುಪಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ನಿರ್ದೇಶಕರಿಗೆ ಒಂದು ದಿನಗಳ ಆಡಳಿತ ಪರಿಣಿತಿ ತರಬೇತಿ ಕಾರ್ಯಕ್ರಮವನ್ನು ಉಡುಪಿ ನಗರದ ಹೋಟೆಲ್ ದಯಾನ ಇಲ್ಲಿ ಯೋಜನೆ ಮಾಡಲಾಗಿತ್ತು. ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಮಂಜುನಾಥ್ ಎಸ್ ಕೆ ರವರು ವಹಿಸಿದ್ದರು ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀಮತಿ ಭಾರತಿ ಜಿ ಭಟ್ ಹಾಗು ಉಡುಪಿ ಜಿಲ್ಲೆಯ ಸಹಕಾರ ಸಂಘಗಳ ಉಪ-ನಿಬಂಧಕರಾದ ಶ್ರೀಮತಿ ಕೆ.ಆರ್ ಲಾವಣ್ಯ ಅವರು ಭಾಗವಹಿಸಿದ್ದರು. ಅತಿಥಿಗಳಾಗಿ ಉಡುಪಿ ಜಿಲ್ಲೆ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜಗನ್ನಾಥ್ ಶೆಟ್ಟಿ ಮತ್ತು ಸಂಯುಕ್ತ ಸಹಕಾರಿಯ ನಿಕಟ ಪೂರ್ವ ವೃತ್ತಿಪರ ನಿರ್ದೇಶಕರಾದ ಶ್ರೀ ಬೋಳ ಸದಾಶಿವ ಶೆಟ್ಟಿ ರವರು ಭಾಗವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಮೈಸೂರು ಪ್ರಾಂತೀಯ ಅಧಿಕಾರಿಗಳಾದ ಶ್ರೀ ಗುರುಪ್ರಸಾದ್ ಬಂಗೇರ ರವರು ನಡೆಸಿಕೊಟ್ಟರು. ಕಾರ್ಯಕ್ರಮದ ನಿರೂಪಣೆ ಮತ್ತು ವಂದನಾರ್ಪಣೆಯನ್ನು ಸೌಹಾರ್ದ ಸಹಕಾರಿಗಳ ಅಭಿವೃದ್ಧಿ ಅಧಿಕಾರಿಗಳಾದ ವಿಜಯ್ ಬಿ.ಎಸ್ ರವರು ನಡೆಸಿಕೊಟ್ಟರು. ಸದರಿ ತರಬೇತಿ ಕಾರ್ಯಕ್ರಮದಲ್ಲಿ 94 ಸೌಹಾರ್ದ ಸಹಕಾರಿಗಳಿಂದ 118 ಪ್ರತಿನಿದಿಗಳು ಭಾಗವಹಿಸಿದ್ದರು

## ಪ್ರವೇಶ ತರಬೇತಿ ಕಾರ್ಯಕ್ರಮ



**ರಾಯಚೂರು :** ದಿನಾಂಕ 29.10.2024 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ಹಾಗೂ ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ.,ಇವರ ಸಹಯೋಗದೊಂದಿಗೆ ದಿನಾಂಕ 01.11.2023 ರಿಂದ 22.10.2024 ರವರೆಗೆ ರಾಯಚೂರು ಜಿಲ್ಲೆಯಲ್ಲಿ ನೋಂದಣಿಗೊಂಡ ಸೌಹಾರ್ದ ಸಹಕಾರಿ ಸಂಘಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ತುಂಗಭದ್ರಾ ಸೌಹಾರ್ದ ಸಹಕಾರಿ ಸಂಘ ನಿ.,ಕಛೇರಿ ಆವರಣ, 3ನೇ ಮಹಡಿ, ಸುಕೋ ಬ್ಯಾಂಕ್ ಪಕ್ಕ, ಗಂಗಾವತಿ ಮುಖ್ಯ ರಸ್ತೆ, ಸಿಂಧನೂರು ಇಲ್ಲಿ ಅಯೋಜಿಸಲಾಗಿತ್ತು. ಈ ತರಬೇತಿ ಕಾರ್ಯಕ್ರಮದ ಉದ್ಘಾಟನೆಯನ್ನು ರಾಯಚೂರು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ದ ಅಧ್ಯಕ್ಷರಾದ ಎಂ. ದೊಡ್ಡ ಬಸವರಾಜರವರು ಹಾಗೂ ವೇದಿಕೆ ಮೇಲೆ ಗಣ್ಯರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾಜಿ ನಿರ್ದೇಶಕರಾದ ಶ್ರೀಮತಿ ಮಂಜುಳಾ ಪಾಟೀಲರವರು, ಬಿ. ರಾಜಶೇಖರರವರು ಉಪಸ್ಥಿತರಿದ್ದರು. ತರಬೇತಿಯ ಮೊದಲನೆಯ ಅವಧಿಯಲ್ಲಿ ಲೆಕ್ಕಪತ್ರಗಳು ಮತ್ತು ಆಡಳಿತ ನಿರ್ವಹಣೆ ಎಂಬ ವಿಷಯದ ಕುರಿತು ಶ್ರೀ ಚಂದ್ರಶೇಖರ ಕರಡಕಲ್ ಮಾನ್ಯ ಲೆಕ್ಕಪರಿಶೋಧಕರು ಮತ್ತು ತೆರಿಗೆ ಸಲಹೆಗಾರರು, ಲಿಂಗಸೂಗುರು ಇವರು ಉಪನ್ಯಾಸ ನೀಡಿದರು. ನಂತರ ಸೌಹಾರ್ದ ಕಾಯ್ದೆ, ನಿಯಮಗಳು, ಸಂಯುಕ್ತ ಸಹಕಾರಿಯ ಪ್ರಕಾರ್ಯಗಳು ಹಾಗೂ ಟಾಸ್ಕ ಪೋರ್ಸಗೆ ಸಂಬಂಧಿಸಿದ ವಿಷಯಗಳ ಕುರಿತು ಶ್ರೀ ಮಹಾಂತಪ್ಪ ಎಂ, ಅಧಿಕಾರಿಗಳು, ಟಾಸ್ಕ ಪೋರ್ಸ ವಿಭಾಗ, ಬೆಂಗಳೂರು ಮತ್ತು ಮೈಸೂರು ಪ್ರಾಂತ ಇವರು ಮಾಹಿತಿ ನೀಡಿದರು.

ನಂತರ ಮಧ್ಯಾಹ್ನದ ಅವಧಿಯಲ್ಲಿ ಆಡಳಿತ ಮಂಡಳಿ ಸಭೆಗಳು, ವಾರ್ಷಿಕ ಸಾಮಾನ್ಯ ಸಭೆಗಳು, ಶಾಸನಾತ್ಮಕ ಕಾರ್ಯಚಟುವಟಿಕೆಗಳ ಬಗ್ಗೆ ಶ್ರೀ ನಟರಾಜ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ರಾಯಚೂರು ಜಿಲ್ಲೆ ಇವರು ಮಾಹಿತಿ ನೀಡಿದರು. ತರಬೇತಿಯಲ್ಲಿ 22 ಸೌಹಾರ್ದ ಸಹಕಾರಿಗಳಿಂದ 58 ಪ್ರತಿನಿಧಿಗಳು ಭಾಗವಹಿಸಿದ್ದರು.

### ಸಂಯುಕ್ತ ಸಹಕಾರಿಯ ಮುಂಬರುವ ತರಬೇತಿ ಕಾರ್ಯಕ್ರಮಗಳು

1. ಡಿಸೆಂಬರ್ ಮಾಹೆಯಲ್ಲಿ ಪಟ್ಟಣ ಸಹಕಾರಿ ಬ್ಯಾಂಕುಗಳ ಮುಖ್ಯಕಾರ್ಯನಿರ್ವಾಹಕರಿಗೆ/ ಜನರಲ್ ಮ್ಯಾನೇಜರ್ ಇವರಿಗೆ ಉನ್ನತ ಮಟ್ಟದ ತರಬೇತಿ ಕಾರ್ಯಕ್ರಮವನ್ನು ಬೆಂಗಳೂರು ಹೊರವಲಯದಲ್ಲಿ ಹಮ್ಮಿಕೊಳ್ಳಲಾಗುವುದು.
2. ಡಿಸೆಂಬರ್ ಮಾಹೆಯಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಯುವಕರು ಹಾಗೂ ಸಹಕಾರ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು.

# ಕ್ಲಸ್ಟರ್ ಮಟ್ಟದ ತರಬೇತಿ



**ವಿಜಯನಗರ** : ದಿನಾಂಕ 28.10.2024 ರಂದು ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ, ಕೋಟ್ಟೂರು, ಕೂಡ್ಲಿಗಿ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಸಭಾಂಗಣ ಹಗರಿಬೊಮ್ಮನಹಳ್ಳಿ ಯಲ್ಲಿ ಆಯೋಜಿಲಾಗಿತ್ತು. ಮಧ್ಯಾಹ್ನದ ಅವಧಿಯಲ್ಲಿ ಹೊಸಪೇಟೆಯ ತಾಲೂಕಿನ ಸೌಹಾರ್ದ ಸಹಕಾರಿಗಳಿಗೆ ಜಿಲ್ಲಾ ಯೂನಿಯನ್ ಸಭಾಂಗಣ ಹೊಸಪೇಟೆಯಲ್ಲಿ ಆಯೋಜಿಸಲಾಗಿತ್ತು.

ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ವಹಿಸಿದ್ದರು. ಮುಖ್ಯಕಾರ್ಯನಿರ್ವಾಹಕರ ಸಭೆಯನ್ನು ರವಿಕುಮಾರ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ನಡೆಸಿದರು. ಸಭೆಯಲ್ಲಿ ಆಡಳಿತ ಮಂಡಳಿ ಜರುಗಿಸುವ ವಿಧಾನ. ಸಾಮಾನ್ಯ ಸಭೆ ಜರುಗಿಸುವ ವಿಧಾನ, ಚುನವಣಾ ಪ್ರಸ್ತಾವನೆ ಸಲ್ಲಿಸುವ ಕುರಿತು ಕಲಂ 34 ಸಲ್ಲಿಕೆಯ ಬಗ್ಗೆ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಶ್ರೀ ಸೂರ್ಯಕಾಂತ ರ್‍ಯಾಕಲೆಯವರು ಮಾಹಿತಿ ನೀಡಿದರು. ಸಭೆಯಲ್ಲಿ 68 ಸಹಕಾರಿಗಳಿಂದ 75 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ದಿನಾಂಕ 29.10.2024 ರಂದು ಬೆಳಗ್ಗೆ ಹೂವಿನಹಡಗಲಿಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಜಿ.ಬಿ.ಆರ್ ಕಾಲೇಜಿನ ಸಭಾಂಗಣದಲ್ಲಿ ಅಯೋಜಿಸಲಾಗಿತ್ತು. ಮಧ್ಯಾಹ್ನದ ಅವಧಿಯಲ್ಲಿ ಹರಪ್ಪನಹಳ್ಳಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರುಗಳಿಗೆ ವೀರಶೈವ ಲಿಂಗಾಯತ ಪಂಚಮಸಾಲಿಯಲ್ಲಿ ಸೌಹಾರ್ದ ಸಹಕಾರಿಯ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಶರಣಬಸಪ್ಪ ಸಹಾಯಕ ನಿಬಂಧಕರು ಹರಪ್ಪನಹಳ್ಳಿ ಉಪವಿಭಾಗ ಇವರು ಆಗಮಿಸಿದ್ದರು. ಸಭೆಯಲ್ಲಿ 36 ಸಹಕಾರಿಗಳಿಂದ 41 ಸಹಕಾರಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

---




**ಕೊಡಗು** : ದಿನಾಂಕ : 30.11.2024ರಂದು ಕೊಡಗು ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ಹಾಗೂ ಸಿಬ್ಬಂದಿಗಳಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಹಾಗೂ ಮೈಸೂರು ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇವರ ಸಹಕಾರದೊಂದಿಗೆ ಕೊಡವ ಎಂಟರ್‌ಪ್ರೆನ್ಯೂರ್ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಲಿ., ಕೊಡವ ಸಮಾಜ ಕಾಂಪ್ಲೆಕ್ಸ್, ಮುಖ್ಯ ರಸ್ತೆ, ಮಡಿಕೇರಿ. ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಉದ್ಘಾಟನೆಯನ್ನು ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಆರ್. ನಾರಾಯಣ ರಾವ್ ರವರು ನೆರವೇರಿಸಿದರು. ಸಂಯುಕ್ತ ಸಹಕಾರಿಯ ಮಾನ್ಯ ಮಾಜಿ ನಿರ್ದೇಶಕರು ಹಾಗೂ ಇಗ್ಗುತಪ್ಪ ಕೊಡವ ಸೌಹಾರ್ದ ಕ್ರೆಡಿಟ್ ಕೋ ಆಪರೇಟೀವ್ ಲಿ., ಮಾನ್ಯ ಮಾಜಿ ಅಧ್ಯಕ್ಷರು ಮತ್ತು ಹಾಲಿ ನಿರ್ದೇಶಕರಾದ ಶ್ರೀ ಎಂ. ಕೆ. ಸೋಮಯ್ಯರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಹಾಗೂ ಮೈಸೂರು, ಮಂಡ್ಯ ಮತ್ತು ಕೊಡಗು ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ನಿ., ಇದರ ನಿರ್ದೇಶಕರರವರು ಭಾಗವಹಿಸಿದ್ದರು. ಗುಣಾತ್ಮಕ ಸಾಲಗಳ ನೀಡಿಕೆ ಹಾಗೂ ಸಾಲ ವಸೂಲಾತಿ ಕ್ರಮಗಳು ವಿಷಯದ ಕುರಿತು ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಇದರ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವಸಂತ ಎ ಇವರು ಉಪನ್ಯಾಸ ನೀಡಿದರು. ಸದರಿ ಕ್ಲಸ್ಟರ್ ಮಟ್ಟದ ತರಬೇತಿಯಲ್ಲಿ ಒಟ್ಟು 14 ಸೌಹಾರ್ದ ಸಹಕಾರಿಗಳಿಂದ ಮತ್ತು ಒಕ್ಕೂಟದ ನಿರ್ದೇಶಕರು ಸೇರಿದಂತೆ ಒಟ್ಟು 32 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

**ಹಾಸನ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಮೈಸೂರು ಪ್ರಾಂತೀಯ ಕಛೇರಿಯಿಂದ ಹಾಸನ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗೆ ಗುಣಾತ್ಮಕ ಸಾಲ ನೀಡಿಕೆ, ದಾವಾದಾಖಲಾತಿ & ಸಾಲವಸೂಲಾತಿ ವಿಷಯದ ಕುರಿತು ಕ್ಲಸ್ಟರ್ ಮಟ್ಟದ ತರಬೇತಿಯನ್ನು ದಿನಾಂಕ 26.11.2024 ರಂದು ಹಾಸನ ವರ್ತಕರ ಸೌಹಾರ್ದ ಸಹಕಾರಿ ಸಂಘ, ಹಾಸನ ಇಲ್ಲಿ ಆಯೋಜಿಸಲಾಗಿತ್ತು. ಈ ತರಬೇತಿಯ ಉದ್ಘಾಟನೆಯನ್ನು ಸಾಯಿರಾಂ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಮಂಜುನಾಥ್ ರವರು ನೆರವೇರಿಸಿದರು. ಕಾರ್ಯಕ್ರಮದ ಪ್ರಾಸ್ತಾವಿಕವನ್ನು ಶ್ರೀ ಗುರುಪ್ರಸಾದ್ ಬಂಗೇರ, ಪ್ರಾಂತೀಯ ಅಧಿಕಾರಿ ಇವರು ನುಡಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 17 ಸೌಹಾರ್ದ ಸಹಕಾರಿಗಳಿಂದ 39 ಪ್ರತಿನಿಧಿಗಳು ಭಾಗವಹಿಸಿದ್ದರು.

---

ಹೊಸಪೇಟೆಯಲ್ಲಿ ಜರುಗಿದ ಮುಖ್ಯ ಕಾರ್ಯನಿರ್ವಾಹಕರ ಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ರವಿಕುಮಾರ, ಮಾನ್ಯ ಸಹಾಯಕ ನಿಬಂಧಕರು ಹೊಸಪೇಟೆ ಉಪವಿಭಾಗ ಅಧಿಕಾರಿಗಳಿಗೆ 24 ಸೌಹಾರ್ದ ಸಹಕಾರಿಗಳ ಸಮಾಪನೆಗೆ ಸಹಕರಿಸಿ ನೋಂದಣಿ ರದ್ದತಿಗೆ ಸಹಕರಿಸಿದ ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ನಂಜನಗೌಡರವರು ಸನ್ಮಾನಿಸಿದರು.

**ಉತ್ತರ ಕನ್ನಡ :** ದಿನಾಂಕ 05.11.2024 ರಂದು ಬೆಳಿಗ್ಗೆ 11:30 ಕ್ಕೆ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ವಿನಾಯಕ ಸಭಾ ಭವನ, ಶಿರಸಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮೋಹನದಾಸ ನಾಯಕ ಇವರು ವಹಿಸಿದ್ದರು. ತರಬೇತಿಯಲ್ಲಿ ಕಲಂ 34 ರ ಮಾಹಿತಿ ಸಲ್ಲಿಕೆ, ಸಾಮಾನ್ಯ ಸಭೆ ಜರುಗಿಸುವ ಕುರಿತು, ಆಡಳಿತ ಮಂಡಳಿ ಸಭೆ ಜರುಗಿಸುವ ಕುರಿತು ಹಾಗೂ ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿ ಸಲ್ಲಿಕೆ ಕುರಿತು ವರ್ಚುವಲ್ ಅಕೌಂಟ ಬಗ್ಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸಂತೋಷ ಎಮ್ ಜೆ ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 17 ಸೌಹಾರ್ದ ಸಹಕಾರಿಗಳಿಂದ 17 ಪ್ರತಿನಿಧಿಗಳು ಹಾಜರಾಗಿದ್ದರು.

ದಿನಾಂಕ 05.11.2024 ರಂದು ಮಧ್ಯಾನ್ಹ 2:30ಕ್ಕೆ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ, ಯಲ್ಲಾಪುರ, ಮುಂಡಗೋಡ ಮತ್ತು ಜೋಯಿಡಾ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ವಿನಾಯಕ ಸಭಾ ಭವನ, ಶಿರಸಿ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮೋಹನದಾಸ ನಾಯಕ ಇವರು ವಹಿಸಿದ್ದರು. ತರಬೇತಿಯಲ್ಲಿ ಕಲಂ 34 ರ ಮಾಹಿತಿ ಸಲ್ಲಿಕೆ, ಸಾಮಾನ್ಯ ಸಭೆ ಜರುಗಿಸುವ ಕುರಿತು, ಆಡಳಿತ ಮಂಡಳಿ ಸಭೆ ಜರುಗಿಸುವ ಕುರಿತು ಹಾಗೂ ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿ ಸಲ್ಲಿಕೆ ಕುರಿತು ವರ್ಚುವಲ್ ಅಕೌಂಟ ಬಗ್ಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸಂತೋಷ ಎಮ್ ಜೆ ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 14 ಸೌಹಾರ್ದ ಸಹಕಾರಿಗಳಿಂದ 14 ಪ್ರತಿನಿಧಿಗಳು ಹಾಜರಾಗಿದ್ದರು.

ದಿನಾಂಕ 15.11.2024 ರಂದು ಬೆಳಿಗ್ಗೆ 11:00ಕ್ಕೆ ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಮಿಸ್ಪಿ ಕ್ರೆಡಿಟ್ ಸೌಹಾರ್ದ ಕೋ–ಆಪರೇಟಿವ್ ಸೊಸೈಟಿ ಲಿ, ಕಾರವಾರ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮೋಹನದಾಸ ನಾಯಕ ಇವರು ವಹಿಸಿದ್ದರು. ತರಬೇತಿಯಲ್ಲಿ ಕಲಂ 34 ರ ಮಾಹಿತಿ ಸಲ್ಲಿಕೆ, ಸಾಮಾನ್ಯ ಸಭೆ ಜರುಗಿಸುವ ಕುರಿತು, ಆಡಳಿತ ಮಂಡಳಿ ಸಭೆ ಜರುಗಿಸುವ ಕುರಿತು ಹಾಗೂ ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿ ಸಲ್ಲಿಕೆ ಕುರಿತು ವರ್ಚುವಲ್ ಅಕೌಂಟ ಬಗ್ಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸಂತೋಷ ಎಮ್ ಜೆ ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 13 ಸೌಹಾರ್ದ ಸಹಕಾರಿಗಳಿಂದ 17 ಪ್ರತಿನಿಧಿಗಳು ಹಾಜರಾಗಿದ್ದರು.

ದಿನಾಂಕ 15.11.2024 ರಂದು ಮಧ್ಯಾನ್ಹ 2:30 ಕ್ಕೆ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಹೋಟೆಲ್ ಅಂಕೋಲಾ ಇಂಟರ್‌ನ್ಯಾಷಿನಲ್, ಅಂಕೋಲಾ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮೋಹನದಾಸ ನಾಯಕ ಇವರು ವಹಿಸಿದ್ದರು. ತರಬೇತಿಯಲ್ಲಿ ಕಲಂ 34 ರ ಮಾಹಿತಿ ಸಲ್ಲಿಕೆ, ಸಾಮಾನ್ಯ ಸಭೆ ಜರುಗಿಸುವ ಕುರಿತು, ಆಡಳಿತ ಮಂಡಳಿ ಸಭೆ ಜರುಗಿಸುವ ಕುರಿತು ಹಾಗೂ ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿ ಸಲ್ಲಿಕೆ ಕುರಿತು ವರ್ಚುವಲ್ ಅಕೌಂಟ ಬಗ್ಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸಂತೋಷ ಎಮ್ ಜೆ ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 35 ಸೌಹಾರ್ದ ಸಹಕಾರಿಗಳಿಂದ 38 ಪ್ರತಿನಿಧಿಗಳು ಹಾಜರಾಗಿದ್ದರು.

ದಿನಾಂಕ 25.11.2024 ರಂದು ಬೆಳಗ್ಗೆ 11.30 ಗಂಟೆಗೆ ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ್ ಮಟ್ಟದ ತರಬೇತಿಯನ್ನು ಭಟ್ಕಳ ಸೌಹಾರ್ದ ಕೋಆಪರೇಟಿವ್ ಸೊಸೈಟಿ ಭಟ್ಕಳ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮೋಹನದಾಸ ನಾಯಕ ಇವರು ವಹಿಸಿದ್ದರು. ತರಬೇತಿಯಲ್ಲಿ ಕಲಂ 34 ರ ಮಾಹಿತಿ ಸಲ್ಲಿಕೆ, ಸಾಮಾನ್ಯ ಸಭೆ ಜರುಗಿಸುವ ಕುರಿತು, ಆಡಳಿತ ಮಂಡಳಿ ಸಭೆ ಜರುಗಿಸುವ ಕುರಿತು ಹಾಗೂ ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿ ಸಲ್ಲಿಕೆ ಕುರಿತು ವರ್ಚುವಲ್ ಅಕೌಂಟ ಕುರಿತು, ಚುನಾವಣಾ ಮಾಹಿತಿ ಸಲ್ಲಿಕೆ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸಂತೋಷ ಎಮ್ ಜೆ ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 20 ಸೌಹಾರ್ದ ಸಹಕಾರಿಗಳಿಂದ 23 ಪ್ರತಿನಿಧಿಗಳು ಹಾಜರಾಗಿದ್ದರು.

ದಿನಾಂಕ 25.11.2024 ರಂದು ಮಧ್ಯಾನ್ಹ 2.30 ಗಂಟೆಗೆ ಉತ್ತರ ಕನ್ನಡ ಜಿಲ್ಲೆಯ ಕುಮಟಾ ಮತ್ತು ಹೊನ್ನಾವರ ತಾಲೂಕಿನ ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರಿಗಾಗಿ ಕ್ಲಸ್ಟರ ಮಟ್ಟದ ತರಬೇತಿಯನ್ನು ಜಿಲ್ಲಾ ಸಹಕಾರ ಯೂನಿಯನ್ ಕುಮಟಾ ಇಲ್ಲಿ ಆಯೋಜಿಸಲಾಗಿತ್ತು. ಸದರಿ ತರಬೇತಿಯ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ನಿರ್ದೇಶಕರಾದ ಶ್ರೀ ಮೋಹನದಾಸ ನಾಯಕ ಇವರು ವಹಿಸಿದ್ದರು. ತರಬೇತಿಯಲ್ಲಿ ಕಲಂ 34 ರ ಮಾಹಿತಿ ಸಲ್ಲಿಕೆ, ಸಾಮಾನ್ಯ ಸಭೆ ಜರುಗಿಸುವ ಕುರಿತು, ಆಡಳಿತ ಮಂಡಳಿ ಸಭೆ ಜರುಗಿಸುವ ಕುರಿತು ಹಾಗೂ ಲೆಕ್ಕಪರಿಶೋಧಕರ ನೇಮಕಾತಿ ಮಾಹಿತಿ ಸಲ್ಲಿಕೆ ಕುರಿತು ವರ್ಚುವಲ್ ಅಕೌಂಟ ಕುರಿತು, ಚುನಾವಣಾ ಮಾಹಿತಿ ಸಲ್ಲಿಕೆ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಸಂತೋಷ ಎಮ್ ಜೆ ಮಾಹಿತಿ ನೀಡಿದರು. ಸದರಿ ತರಬೇತಿಯಲ್ಲಿ 38 ಸೌಹಾರ್ದ ಸಹಕಾರಿಗಳಿಂದ 43 ಪ್ರತಿನಿಧಿಗಳು ಹಾಜರಾಗಿದ್ದರು.

## ನವೆಂಬರ್ 2024 : ಶಾಸನಾತ್ಮಕ ವಿಭಾಗದ ಕಾರ್ಯಚಟುವಟಿಕೆಗಳು

**1. ವಿಶೇಷಾಧಿಕಾರಿ ನೇಮಕದ ಕುರಿತು.**

ಸಂಯುಕ್ತ ಸಹಕಾರಿಯ ಸದಸ್ಯ ಸಹಕಾರಿಯ ಆಡಳಿತ ಮಂಡಲಿಯ ಪದಾವಧಿಯು ಮುಕ್ತಾಯವಾದ 05 ಸೌಹಾರ್ದ ಸಹಕಾರಿಗಳಿಗೆ ಸೌಹಾರ್ದ ಕಾಯ್ದೆ ಕಲಂ 38ಎ ರನ್ವಯ ನವೆಂಬರ್ ತಿಂಗಳಲ್ಲಿ ವಿಶೇಷಾಧಿಕಾರಿಗಳನ್ನು ನೇಮಕ ಮಾಡಿ ಆದೇಶವನ್ನು ಹೊರಡಿಸಲಾಗಿರುತ್ತದೆ.

**2. ಸಮಾಪನಾಧಿಕಾರಿಯ ಮಾರ್ಪಾಡು ಆದೇಶವಾಗಿರುವ ಕುರಿತು:**

**ಅ. ಶ್ರೀ ಶಕ್ತಿ ಸೌಹಾರ್ದ ಕ್ರೆಡಿಟ್ ಕೋ–ಆಪ್ ಲಿ., ಬೆಂಗಳೂರು:**

ಸಹಕಾರಿಗೆ ಈ ಹಿಂದೆ ದಿನಾಂಕ 19.06.2023ರಂದು ಸಹಕಾರಿಯ ಸಮಾಪನಾಧಿಕಾರಿಯಾಗಿ ನೇಮಕವಾಗಿದ್ದ ಶ್ರೀ ಗುರುಪ್ರಸಾದ್ ಬಂಗೇರ ಇವರು ಬೇರೆ ಜಿಲ್ಲೆಯಲ್ಲಿ ವರ್ಗಾವಣೆಯವರಿಂದ ಸದರಿಯವರ ಬದಲಾಗಿ ಶ್ರೀ ಶ್ರೀಧರ್ ಎಸ್ ಸಹಪ್ರಧಾನ ವ್ಯವಸ್ಥಾಪಕ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರನ್ನು ನೇಮಕ ಮಾಡುವ ಟಿಪ್ಪಣಿಯನ್ನು ಮಾನ್ಯ ಸಹಕಾರಿಗಳ ನಿಬಂಧಕರ ಅನುಮೋದನೆಯೊಂದಿಗೆ ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರು (ಕಾನೂನು ಕೋಶ) ಇವರು ದಿನಾಂಕ 30.10.2024 ರಂದು ಮಾರ್ಪಾಡು ಆದೇಶ ಮಾಡಿರುತ್ತಾರೆ. ಪ್ರಸ್ತುತ ಸಮಾಪನಾಧಿಕಾರಿಯು ಅಧಿಕಾರ ಸ್ವೀಕಾರ ಮಾಡಿರುತ್ತಾರೆ.

**ಆ. ವಿಜಯ ಪರ್ವ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ.**

ಸಹಕಾರಿಗೆ ಈ ಹಿಂದೆ ದಿನಾಂಕ 17.10.2011ರಂದು ಸಹಕಾರಿಯ ಸಮಾಪನಾಧಿಕಾರಿಯಾಗಿ ನೇಮಕವಾಗಿದ್ದ ಹಿರಿಯ ನಿರೀಕ್ಷರು, ಹೊಸಪೇಟೆ ಇವರನ್ನು ನೇಮಕ ಮಾಡಲಾಗಿದ್ದು ಪ್ರಸ್ತುತು ಇವರು ನಿವೃತ್ತಿಯಾಗಿರುವುದರಿಂದ ಸದರಿಯವರ ಬದಲಾಗಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಕಲಬುರಗಿ ಪ್ರಾಂತ, ಕ.ರಾ.ಸೌ.ಸಂ.ಸ.ನಿ., ಕಲಬುರಗಿ ಇವರನ್ನು ನೇಮಕ ಮಾಡಿ ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, ಹೊಸಪೇಟೆ ಉಪ–ವಿಭಾಗ, ಹೊಸಪೇಟೆ ಇವರು ದಿನಾಂಕ 07.11.2024 ರಂದು ಮಾರ್ಪಾಡು ಆದೇಶ ಮಾಡಿರುತ್ತಾರೆ.

**3. ಸ್ಥಗಿತಗೊಂಡಿರುವ ಸೌಹಾರ್ದ ಸಹಕಾರಿಗಳ ನೊಂದಣಿ ರದ್ದಾಗಿರುವ ಕುರಿತು:**

ಅ. ಕವಾಡ ಕಾಮದೇನು ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಖಾನಹೊಸಳ್ಳಿ, ತಾ॥ ಕೂಡ್ಲಿಗಿ.

ಆ. ನಂದಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ತಂಬ್ರಹಳ್ಳಿ, ತಾ॥ ಹಗರಿಬೊಮ್ಮನಹಳ್ಳಿ

ಇ. ಕವಾಡ ಸರ್ಮೋದಯ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಚಿಕ್ಕಕುಂಬಲಕುಂಟೆ, ತಾ॥ ಕೂಡ್ಲಿಗಿ.

ಈ. ಕವಾಡ್ಸ್ ಪ್ರಗತಿ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಲೋಕಿಕೆರೆ, ತಾ॥ ಕೂಡ್ಲಿಗಿ.

ಉ ಕವಾಡ ಆದರ್ಶ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಕುಲಿಮೆಹಟ್ಟಿ, ತಾ॥ ಕೂಡ್ಲಿಗಿ.

ಊ. ಕವಾಡ ದಿವ್ಯಜ್ಯೋತಿ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಪೂಜರಹಳ್ಳಿ, ತಾ॥ ಕೂಡ್ಲಿಗಿ.

ಋ. ಕವಾಡ ವಿಜಯನಗರ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಹಿರೇಕುಂಬಲಕುಂಟೆ, ತಾ॥ ಕೂಡ್ಲಿಗಿ.

ಎ. ಕವಾಡ ಜಗಜ್ಯೋತಿ ಬಸವೇಶ್ವರ ಸೌಹಾರ್ದ ವಿ ಸಹಕಾರಿ ನಿ., ಬಯಲುತುಂಬರಗುದಿ, ತಾ॥ ಕೂಡ್ಲಿಗಿ.

ಏ. ಕವಾಡ ನವಜೀವನ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಕನ್ನಿಗೋರಯ್ಯನಹಟ್ಟಿ, ತಾ॥ ಕೂಡ್ಲಿಗಿ.

ಐ. ತುಂಗಭದ್ರ ಬೋರ್ಡ ಆಫೀಸರ್ ಸೌಹಾರ್ದ ಗ್ರಾಹಕರ ಸಹಕಾರಿ ನಿ., ಟಿ.ಬಿ ಡ್ಯಾಂ, ಹೊಸಪೇಟೆ.

ಒ. ಹಂಪಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಹಂಪಿ, ತಾ॥ ಹೊಸಪೇಟೆ.

ಓ. ರೇಣುಕಾಚಾರ್ಯ ಸೌಹಾರ್ದ ಸಹಕಾರಿ ನಿ., ಹೊಸಪೇಟೆ.ತಾ॥ ಹೊಸಪೇಟೆ,

ಔ. ಕವಾಡ ಶ್ರೀ ಸಿದ್ದೇಶ್ವರ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಸೂರವ್ವಹಳ್ಳಿ, ತಾ॥ ಕೂಡ್ಲಿಗಿ.

ಅಂ. ಕವಾಡ ಭಾರತಾಂಭೆ ಸೌಹಾರ್ದ ವಿವಿದೋದ್ದೇಶ ಸಹಕಾರಿ ನಿ., ಜುಟ್ಟಲಿಂಗನಹಳ್ಳಿ, ತಾ॥ ಕೂಡ್ಲಿಗಿ.

ಅಃ. ಸಮೃದ್ಧಿ ಸ್ವಶಕ್ತಿ ಸೌಹಾರ್ದ ಸ್ವ–ಸಹಾಯ ಸಹಕಾರಿ ನಿ., ಬಣವಿನಕಲ್ಲು, ತಾ॥ ಕೂಡ್ಲಿಗಿ.

ಕ. ಆದರ್ಶ ಸ್ವಶಕ್ತಿ ಸೌಹಾರ್ದ ಸ್ವ–ಸಹಾಯ ಸಹಕಾರಿ ನಿ., ಸಾಸಲವಾಡ, ತಾ॥ ಕೂಡ್ಲಿಗಿ.

ಈ ಮೇಲ್ಕಂಡ ಸೌಹಾರ್ದ ಸಹಕಾರಿಗಳು ಕಾರ್ಯ ಸ್ಥಗಿತಗೊಂಡಿರುವುದರಿಂದ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ–1997ರ ಕಲಂ 48(6)ರ ಅಧಿಕಾರ ಚಲಾಯಿಸಿ ಮಾನ್ಯ ಸಹಕಾರಿಗಳ ಸಹಾಯಕ ನಿಬಂಧಕರು, ಉಉ–ವಿಭಾಗ, ಹೊಸಪೇಟೆ ಇವರು ದಿನಾಂಕ 18.10.2024ರಂದು ಸಹಕಾರಿಗಳ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ–1997ರ ಕಲಂ 51(4)ರಡಿಯಲ್ಲಿ ನೊಂದಣಿಯನ್ನು ರದ್ದುಪಡಿಸಿರುತ್ತಾರೆ.

## ಉದ್ಘಾಟನೆ



**ಶಿವಮೊಗ್ಗ** : 17-11-2024ರಂದು ಅಕ್ಷಯ ಸಾಗರ ಸೌಹಾರ್ದ ಸಹಕಾರಿ ಸಂಘ ನಿ, ಸಾಗರ ಇದರ ನೂತನ ಕಟ್ಟಡವನ್ನು ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪರವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಬಿ.ಜಿ. ದಿನೇಶ್ ಬರದವಳ್ಳಿ ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಾನ್ಯ ಲೋಕಸಭಾ ಸದಸ್ಯರಾದ ಶ್ರೀ ಬಿ.ವೈ. ರಾಘವೇಂದ್ರ ರವರು, ಮಾನ್ಯ ಶಾಸಕರಾದ ಶ್ರೀ ಬೇಳೂರು ಗೋಪಾಲಕೃಷ್ಣ ರವರು, ಮಾನ್ಯ ಮಾಜಿ ಶಾಸಕರಾದ ಶ್ರೀ ಹರತಾಳು ಹಾಲಪ್ಪ ರವರು, ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಮತ್ತು ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್. ಪ್ರಸನ್ನಕುಮಾರ್ ರವರು ಭಾಗವಹಿಸಿದ್ದರು.

## ಕನ್ನಡರಾಜ್ಯೋತ್ಸವ ಪ್ರತಿಭಾಪುರಸ್ಕಾರ, ಹಿರಿಯಸದಸ್ಯರಿಗೆ ಸನ್ಮಾನ ಕಾರ್ಯಕ್ರಮ



**ಮೈಸೂರು** : ಸಪ್ತರ್ಷಿ ಸೌಹಾರ್ದ ಪತ್ತಿನ ಸಹಕಾರ ಸಂಘ ನಿ., ಮೈಸೂರು ಸಹಕಾರಿಯ ದಿನಾಂಕ 10.11.2024ರಂದು ರಮಾಗೋವಿಂದ ರಂಗಮಂದಿರದಲ್ಲಿ ಸಹಕಾರಿಯ ವತಿಯಿಂದ ಕನ್ನಡರಾಜ್ಯೋತ್ಸವ, ಪ್ರತಿಭಾಪುರಸ್ಕಾರ. ಹಿರಿಯಸದಸ್ಯರಿಗೆ ಸನ್ಮಾನ ಮತ್ತು ವಯೋಮಾನದ ಹಿರಿಯ ಸದಸ್ಯರಿಗೆ ಸನ್ಮಾನ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದ ಉದ್ಘಾಟನೆಯನ್ನು ಡಾ.ಬಿ.ಪಿ.ವಸಂತಕುಮಾರ್ ಪ್ರಾಧ್ಯಾಪಕರು. ಶ್ರೀ ಡಿ.ದೇವರಾಜ ಅರಸು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹುಣಸೂರು ಇವರು ನೆರವೇರಿಸಿಕೊಟ್ಟರು. ಅಧ್ಯಕ್ಷತೆಯನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ.ಎಸ್. ಚಂದ್ರಶೇಖರ್ ರವರು ವಹಿಸಿದ್ದರು ಈ ಸಮಾರಂಭದಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀಮತಿ ಎಸ್. ಶ್ಯಾಮಲ ರವರು, ಖಜಾಂಚಿಯವರಾದ ಶ್ರೀಮತಿ ಎಸ್. ಲಕ್ಷ್ಮಿದೇವಿ. ಶ್ರೀ ಎಸ್. ರಾಜಕುಮಾರ, ಶ್ರೀ ಎ.ಎಸ್. ರಂಗನಾಥನ್, ಶ್ರೀ ಮುತ್ತುರಾಜ್, ಶ್ರೀ ಕೀರ್ತಿಪ್ರಕಾಶ್ ಜಿ, ಶ್ರೀ ಹನುಮಂತಯ್ಯ. ಎಂ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿ ಯವರಾದ ಶ್ರೀ ಹೆಚ್.ಎ. ಪುರುಷೋತ್ತಮ. ಸಿಬ್ಬಂದಿವರ್ಗದವರು ಹಾಗೂ ಸನ್ಮಾನಿತರು, ಪುರಸ್ಕೃತರು. ಗೌರವಾನ್ವಿತ ಸದಸ್ಯರು ಹಾಜರಿದ್ದರು ಈ ಸಮಾರಂಭದ ಸಮಾರೋಪ ಭಾಷಣವನ್ನು ಶ್ರೀ ವೆಂಕಟಾಚಲ ಜಿ ಸಹಾಯಕ ಯೋಜನಾ ಸಮನ್ವಯಾಧಿಕಾರಿ, ಉಪನಿರ್ದೇಶಕರ ಕಛೇರಿ ಮೈಸೂರು ಇವರು ನಡೆಸಿಕೊಟ್ಟರು. ಸಮಾರಂಭದಲ್ಲಿ ಡಾ. ಪದ್ಮಾನಂದ ಜಿ ರವರಿಂದ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಯುಕ್ತ ಸುಗಮ ಸಂಗೀತ ಮತ್ತು ಮಧುರ ಚಲನಚಿತ್ರ ಗೀತೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.



**ಕೊಪ್ಪಳ** : ಆದೀಶ್ವರ ಸೌಹಾರ್ದ ಸಹಕಾರಿ ಸಂಘದ ಉದ್ಘಾಟನೆಯನ್ನು ಮಾಜಿ ಸಂಸದ ಸಂಗಣ್ಣ ಕರಡಿ ನೆರವೇರಿಸಿದರು. ಪರಮಪೂಜ್ಯ ಶ್ರೀ ಡಾ. ಮೌನೇಶ್ ಮಹಾಪುರುಷರು ಮಳೆ ರಾಜೇಂದ್ರಮಠ ಗದ್ದನಕೇರಿ, ಬಾಗಲಕೋಟ ಜಿಲ್ಲಾ ಮತ್ತು ಪರಮ ಪೂಜ್ಯ ಶ್ರೀ ಡಾ. ಮಹಾದೇವ ದೇವರು ಅನ್ನದಾನೇಶ್ವರ ಶಾಖಾ ಮಠ ಕುಕುನೂರು ಶ್ರೀ ಗಳು ದಿವ್ಯ ಸಾನಿಧ್ಯವನ್ನು ವಹಿಸಿದ್ದರು. ಕಾರ್ಯಕ್ರಮದ ಜ್ಯೋತಿಯನ್ನ ಶ್ರೀ ಶ್ರೀಧರ್ ಕೆಸರಟ್ಟಿ ಮಾನ್ಯ ನಿರ್ದೇಶಕರು, ಸಂಯುಕ್ತ ಸಹಕಾರಿ, ಬೆಂಗಳೂರು ಇವರು ನೆರವೇರಿಸಿದರು. ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷರಾದ ಶಿವಕುಮಾರ್ ಏಣಿಗಿ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಹಕಾರ ಇಲಾಖೆಯ ಉಪ ಸಹಾಯಕ ನಿಬಂಧಕರಾದ ಶ್ರೀ ದಸ್ತಗಿರಿ ಅಲಿ ಹಾಗೂ ಸಹಾಯಕ ನಿಬಂಧಕರಾದ ಶ್ರೀ ಪ್ರಕಾಶ್ ಸಜ್ಜನರ, ಇಲಾಖೆಯ ಪ್ರದೀಪ ಗಂಟೆ, ವೆಂಕಾರೆಡ್ಡಿ ,ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ಅಧ್ಯಕ್ಷ ಚೆನ್ನಪ್ಪ ಕಡ್ಡಿಪುಡಿ, ಜಿಲ್ಲಾ ನಿರ್ದೇಶಕರುಗಳಾದ ಶಂಕರಗೌಡ ಹಿರೇಗೌಡ, ನಾಗಲಿಂಗಪ್ಪ ಪತ್ತಾರ್, ಗವಿಸಿದ್ದಯ್ಯ ಲಿಂಗಬಸಯ್ಯನ ಮಠ, ಮುದ್ದಪ್ಪ ಬೇವಿನಹಳ್ಳಿ, ಶರಣಪ್ಪ ವಡಿಗೇರಿ, ನಾಗರಾಜ್ ನಾಗನೂರು, ಜಿಲ್ಲಾ ಸಹಕಾರಿ ಯೂನಿಯನ್ ನ ತೋಟಪ್ಪ ಕಾಮನೂರ್, ರಾಜೀವ್ ಮಾದಿನೂರು, ಅಕ್ಷಯ್ ಕುಮಾರ್ ಸಹಕಾರಿ ದೂರಿಣರುಗಳಾದ ಶರಣಪ್ಪ ಹ್ಯಾಟಿ, ವೀರೇಶ್ ಹತ್ತಿ, ಸುರೇಶ ರಾವ್ ಕುಲಕರ್ಣಿ, ಮುದಿಯಪ್ಪ ಆದೋನಿ, ಸೋಮಲಿಂಗಪ್ಪ ಹುಡೇದ, ದೊಡ್ಡಪ್ಪ ಯಡ್ಡೋಣಿ, ಸಂಸ್ಥೆಯ ಉಪಾಧ್ಯಕ್ಷ ಶಿವರೆಡ್ಡಿ ಹೊಸಮನಿ, ಕಾರ್ಯಕ್ರಮವನ್ನು ರಮೇಶಕುಮಾರ ಹುಡೇದ ನಿರೂಪಿಸಿದರು.



**ಹಾಸನ** : ಬಿ.ಜಿ.ಎಸ್ ಸೌಹಾರ್ದ ಸಹಕಾರಿ ಸಂಘ ನಿ., ಚನ್ನರಾಯಪಟ್ಟಣ ಸಹಕಾರಿ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಕನ್ನಡ ನಾಡು–ನುಡಿಯ ಬಗ್ಗೆ ಪ್ರೊ॥ ಸಿದ್ದೇಗೌಡರು, ನಿವೃತ್ತ ಕನ್ನಡ ಪ್ರಾಧ್ಯಾಪಕರು ಮಾತನಾಡಿದರು. ಇದೇ ಸಂಧರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಡಾ॥ ನಾಗೇಶ್ ರವರು "ಅಂತಾರಾಷ್ಟ್ರೀಯ ಮಧುಮೇಹ ದಿನ ಆಚರಣೆಯ ಬಗ್ಗೆ ಮಾತನಾಡಿ, ಮಿತವಾದ ಊಟ, ಹಣ್ಣು–ತರಕಾರಿ, ಕೊಬ್ಬುರಹಿತ ಊಟ ಹಾಗೂ ಪರಿಶ್ರಮದ ಜೀವನ, ವ್ಯಾಯಾಮ, ಒತ್ತಡ ರಹಿತವಾದ ಬದುಕು ಮಧುಮೇಹವನ್ನು ದೂರವಿಡುತ್ತದೆ ಎಂದು ತಿಳಿಸಿದರು. ಮಧುಮೇಹದಿಂದ ಹೃದಯಸಂಬಂಧಿ ಖಾಯಿಲೆಗಳಿಗೆ ರಹದಾರಿ. ಆದ್ದರಿಂದ 30 ವರ್ಷ ಕಳೆದ ನಂತರ ನಿಯಮಿತವಾಗಿ ರಕ್ತದಲ್ಲಿನ ಸಕ್ಕರೆ ಅಂಶ ಪರೀಕ್ಷಿಸಿಕೊಳ್ಳಬೇಕು ಎಂದು ತಿಳಿಸಿದರು. ಖ್ಯಾತ ಮೂಳೆತಜ್ಞ ರಾದ ಡಾ॥ ಮಹೇಶ್ ಮಾತನಾಡಿ ಈ ಕಾರ್ಯಕ್ರಮಕ್ಕೆ ಅತ್ಯಂತ ಸೂಕ್ತ ವೈದ್ಯರಾದ ಡಾ॥ ನಾಗೇಶ್ ಅವರಿಂದ ಉಪನ್ಯಾಸ ನೀಡಿರುವುದಕ್ಕೆ ಸಂಘದ ಪರವಾಗಿ ಧನ್ಯವಾದ ತಿಳಿಸಿದರು. ಇದೇ ಸಂದರ್ಭದಲ್ಲಿ ಕಛೇರಿಯಲ್ಲಿ, "ಬಿ.ಜಿ.ಎಸ್ ಗ್ರಂಥಾಲಯ"(ಮಿನಿ ಲೈಬ್ರರಿ) ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರುಗಳು, ಸದಸ್ಯರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.




**ಮಂಡ್ಯ** : ಮಂಡ್ಯ ಜಿಲ್ಲಾಡಳಿತದಿಂದ ನೀಡುವ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಶಾಮಿಯಾನ ಮಾಲೀಕರ ಸೌಹಾರ್ದ ಸಹಕರಿ ಸಂಘದ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಹೆಚ್.ಎಂ ಬಸವರಾಜು ಇವರಿಗೆ ಯುವಜನ ಸೇವಾ ವಿಭಾಗದಲ್ಲಿ ಇವರಿಗೆ ಈ ಪ್ರಶಸ್ತಿ ದೊರೆತಿರುತ್ತದೆ



**ಹುಲ್ಲೋಳಿ** : ಅರಿಹಂತ ಸೌಹಾರ್ದ ಸಹಕಾರಿ ಸಂಘ ನಿ., ಹುಲ್ಲೋಳಿಯಲ್ಲಿ 14–11–2024 ರಂದು 71ನೇ ಅಖಿಲ ಭಾರತ ಸಹಕಾರ ಸಪ್ತಾಹದ ನಿಮಿತ್ಯವಾಗಿ ಧ್ವಜಾರೋಹಣವನ್ನು ಸಹಕಾರಿಯ ಹಿರಿಯ ನಿರ್ದೇಶಕರಾದ ಶ್ರೀ ಜಯಪಾಲ ಪಾ. ಚೌಗಲಾ ಅವರು ಸಹಕಾರಿ ಧ್ವಜ ಹಾರಿಸಿ ಸಂಭ್ರಮದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ನಿರ್ದೇಶಕರು ಸಹಕಾರ ಸಪ್ತಾಹದ ಬಗ್ಗೆ ಹಾಗೂ ಸೌಹಾರ್ದ ಸಹಕಾರಿಯ ಕಾಯ್ದೆ ಮತ್ತು ಕಾರ್ಯ ಕೆಲಸಗಳ ಬಗ್ಗೆ ಸಮಾಜದ ಕೆಳಮಟ್ಟದ ಜನರಿಗೆ ತಲುಪಿಸಿ ಅದರ ಅರಿವು ಅವರಿಗೆ ಮೂಡಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ನಮ್ಮ ಸಹಕಾರಿಯ ನಿರ್ದೇಶಕರು ಹಾಗೂ ಶಾಖಾ ವ್ಯವಸ್ಥಾಪಕರು ಮತ್ತು ಸಿಬ್ಬಂದಿ ವರ್ಗದವರು ಹಾಜರಿದ್ದರು.



**ಗದಗ** : ವೀರಶೈವ ಪಂಚಮಸಾಲಿ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ 71ನೇಯ ಅಖಿಲ ಭಾರತ ಸಹಕಾರಿ ಸಪ್ತಾಹದ ಅಂಗವಾಗಿ ಸಹಕಾರಿಯ ಧ್ವಜಾರೋಹಣ ದಿನಾಂಕ 14–11–2024 ರಂದು ಗುರುವಾರ ದಿವಸ ಮುಂಜಾನೆ 10–15 ಘಂಟೆಗೆ ಸಹಕಾರಿಯ ಆಫೀಸಿನ ಆವರಣದಲ್ಲಿ ಧ್ವಜಾರೋಹಣವನ್ನು ಸಹಕಾರಿಯ ಮ್ಯಾನೇಜರಾದ ಶ್ರೀ ಸಿ ವ್ಹಿ ಪಾಟೀಲ ಇವರು ನೆರವೇರಿಸಿದರು ನಂತರ ಸಹಕಾರಿಯ ಸದಸ್ಯರಾದ ಶ್ರೀ ಎಸ್ ಎನ್ ಹೊಟ್ಟಿ, ಶ್ರೀ ಎಂ ಎಸ್ ಹಾಳಕೇರಿ, ಶ್ರೀ ಮಹೇಶ ಎಸ್ ಕರಮುಡಿ, ಶ್ರೀ ಹಾಲಪ್ಪ ಬಣಕಾರ, ಮಾಗರಾಜ ಕಿನ್ನಾರಿ, ಹಾಗೂ ನಮ್ಮ ಸಹಕಾರಿಯ ಪಿಗ್ಮಿ ಸಂಗ್ರಹಕಾರರಾದ ಶ್ರೀ ಆರ್ ಪಿ ಅಣ್ಣಿಗೇರಿ, ಆಯ್ ಜೆ ಶಿರೂರ, ಹಾಗೂ ಸಹಕಾರಿಯ ಸಿಬ್ಬಂದಿಯಾದ ಪರಪ್ಪ ವ್ಹಿ ಬಳಿಗೇರ ಮುಂತಾದವರು ಸಹಕಾರಿಯ ಆಂದೋಲನೆಯ ಬಗ್ಗೆ ಸಹಕಾರಿಯ ಧ್ಯೆಯ ವಿಕಸಿತ ಭಾರತ ನಿರ್ಮಾಣದಲ್ಲಿಸಹಕಾರಿಯ ಸಂಸ್ಥೆಗಳ ಪಾತ್ರದ ಬಗೆಗೆ ಪ್ರಜಾಪ್ರಭುತ್ವದ ಬಗ್ಗೆ ಸಹಕಾರಿಯ ಪರಿಸರ ಮತ್ತು ಉತ್ತಮ ಜೀವನದ ಬಗ್ಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ಸಹಕಾರಿಯ ಕ್ಷೇತ್ರದಲ್ಲಿ ವೃತ್ತಿಪರ ಬಗ್ಗೆ ಸಹಕಾರಿ ಸಂಘಗಳ ಮಹಿಳೆಯರಿಗೆ ಹಾಗೂ ಯುವಕರಿಗೆ ಅಧಿಕಾರಿಕರಣದ ಬಗ್ಗೆ ವಿವರವಾಗಿ ಮಾತನಾಡಿದ ಬಳಿಕ ಸಹಕಾರಿಯ ಸಿಬ್ಬಂದಿಯಾದ ಶ್ರೀ ಪರಪ್ಪ ವ್ಹಿ ಬಳಿಗೇರ ಇವರ ಅಭಾರ ಮನ್ನಣೆ ಮಾಡಿದ ನಂತರ ಸಭೆಯು ಮುಕ್ತಾಯವಾಯಿತು.




**ಗದಗ :** ಭಾಗ್ಯಲಕ್ಷ್ಮೀ ವಿವಿದೋದ್ದೇಶಗಳ ಸೌಹಾರ್ದ ಪತ್ತಿನ ಸಹಕಾರಿ ನಿ., ಗದಗ 71ನೇಯ ಅಖಿಲ ಭಾರತ ಸಹಕಾರಿ ಸಪ್ತಾಹದ ಅಂಗವಾಗಿ ಸಹಕಾರಿಯ ಧ್ವಜಾರೋಹಣ ದಿನಾಂಕ 14–11–2024 ರಂದು ಗುರುವಾರ ದಿವಸ ಮುಂಜಾನೆ 10–15 ಘಂಟೆಗೆ ಸಹಕಾರಿಯ ಆಫೀಸಿನ ಆವರಣದಲ್ಲಿ ಧ್ವಜಾರೋಹಣವನ್ನು ಸಹಕಾರಿಯ ಅಧ್ಯಕ್ಷರಾದ ಶ್ರೀ ಕಲ್ಲಯ್ಯ ಎಸ್ ಹೊಸಮಠ ಅಧ್ಯಕ್ಷತೆಯಲ್ಲಿ ಉಪಾಧ್ಯಕ್ಷರಾದ ಶ್ರೀ ಅಶೋಕ ಪಿ ಮುತ್ತಿನ ಇವರು ನೆರವೇರಿಸಿದರು ಹಾಗೂ ಸಹಕಾರಿಯ ಆಂದೋಲನೆಯ ಬಗ್ಗೆ ಸಹಕಾರಿಯ ಧ್ಯೇಯ "ವಿಕಸಿತ ಭಾರತ" ನಿರ್ಮಾಣದಲ್ಲಿ ಸಹಕಾರಿಯ ಸಂಸ್ಥೆಗಳ ಪಾತ್ರದ ಬಗೆಗೆ ಪ್ರಜಾಪ್ರಭುತ್ವದ ಬಗ್ಗೆ ಸಹಕಾರಿಯ ಪರಿಸರ ಮತ್ತು ಉತ್ತಮ ಜೀವನದ ಬಗ್ಗೆ ಮಾನವ ಸಂಪನ್ಮೂಲ ಅಭಿವೃದ್ಧಿ ಹಾಗೂ ಸಹಕಾರಿಯ ಕ್ಷೇತ್ರದಲ್ಲಿ ವೃತ್ತಿಪರ ಬಗ್ಗೆ ಸಹಕಾರಿ ಸಂಘಗಳ ಮಹಿಳೆಯರಿಗೆ ಹಾಗೂ ಯುವಕರಿಗೆ ಅಧಿಕಾರಿಕರಣದ ಬಗ್ಗೆ ವಿವರವಾಗಿ ಮಾತನಾಡಿದ ಈ ಸಂದರ್ಭದಲ್ಲಿ ಸಹಕಾರಿಯ ಎಲ್ಲಾ ನಿರ್ದೇಶಕರು ಪಿಗ್ಮಿಸಂಗ್ರಹಕಾರರು, ಸದಸ್ಯರು, ಸಹ ಸದಸ್ಯರು, ಠೇವುದಾರರು ಹಾಗೂ ಹಿತೈಷಿಗಳ ಹಾಜರಿದ್ದರು. ಬಳಿಕ ಸಹಕಾರಿಯ ಮ್ಯಾನೇಜರವರು ಆಭಾರ ಮನ್ನಣೆ ಮಾಡಿದ ನಂತರ ಸಭೆ ಮುಕ್ತಾಯವಾಯಿತು.



**ದಾವಣಗೆರೆ :** ದಿನಾಂಕ: 05.12.2024 ರಿಂದ 07.12.2024 ರವರೆಗೆ ಜಿ.ಎಂ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿಯಮಿತ, ದಾವಣಗೆರೆ ಸಹಕಾರಿಯ ಸಿಬ್ಬಂದಿ ನೇಮಕಾತಿ ಸಮಿತಿಯಲ್ಲಿ ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಭಾಗವಹಿಸಲಾಯಿತು. ಜೂನಿಯರ್ ಅಕೌಂಟೆಂಟ್, ಸೀನಿಯರ್ ಅಕೌಂಟೆಂಟ್, ಶಾಖಾ ವ್ಯವಸ್ಥಾಪಕರು, ಸಾಲ ವಸೂಲಾಧಿಕಾರಿ, ಆಂತರಿಕ ಲೆಕ್ಕಪರಿಶೋಧಕರು ಹಾಗೂ ತಾಂತ್ರಿಕ ಅಧಿಕಾರಿ ಹುದ್ದೆಗಳಿಗೆ ಸಂದರ್ಶನ ಜರುಗಿತು. ಒಟ್ಟು 58 ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಿದ್ದರು. ಸೌಹಾರ್ದ ಕಾಯ್ದೆ & ನಿಯಮಾನುಸಾರ ಹಾಗೂ ಸಂಘದ ಉಪವಿಧಿಯನ್ವಯ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಜರುಗಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಕಾರ್ಯನಿರ್ವಾಹಕ ನಿರ್ದೇಶಕರು, ಉಪಸಮಿತಿ ನಿರ್ದೇಶಕರು, ಬಾಹ್ಯ ತಜ್ಞರು ಹಾಗೂ ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.



## 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಧ್ವಜಾರೋಹಣ ಕಾರ್ಯಕ್ರಮ

ಶ್ರೀ ಮಹಾದೇವ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ.,ಕಲಬುರಗಿ ಸಹಕಾರಿಯಲ್ಲಿ 71ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಗದಗ :** ಆದರ್ಶ ಸೌಹಾರ್ದ ಸಹಕಾರಿ ಸಂಘದಲ್ಲಿ ದಿನಾಂಕ 03/12/2024 ನೇ ಮಂಗಳವಾರದಂದು ನಡೆದ ಮಾಸಿಕ ಸಭೆಯಲ್ಲಿ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಶೇಖರಪ್ಪ ಬ. ಮಹಾಜನಶೆಟ್ಟರ ಇವರು 2025ನೇ ಸಾಲಿನ ಸಹಕಾರಿಯ ಕ್ಯಾಲೆಂಡರ್ ಬಿಡುಗಡೆ ಮಾಡಿದರು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರಾದ ಶ್ರೀ ಸಂತೋಷ ವೆ. ಮೇಕಳಿ ನಿರ್ದೇಶಕರಾದ ಶ್ರೀ ಬಸವರಾಜ ಹಮಿಗಿ, ಶ್ರೀ ಕಲಂದರ ಚ. ತೋಟದ, ಶ್ರೀ ಚನ್ನಬಸಯ್ಯ ಜೋ. ಹೊಂಬಳಮಠ, ಶ್ರೀ ಶ್ರೀನಿವಾಸ ವೈಕುಂಠ, ಸಂಘದ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ನಬೀಸಾಬ ಪೀ. ಪಿಂಜಾರ ಮತ್ತು ಸಿಬ್ಬಂದಿಗಳಾದ ಶ್ರೀ ಜಿನ್ನಪ್ಪ ಹ. ಜೈನರ, ಶ್ರೀಮತಿ ವರ್ಷಿಣಿ ರಾ. ಕಾರಿ, ರಾಘವೇಂದ್ರ ಬಿಲಂಕರ, ಶರಣಪ್ಪ ಪಟ್ಟಣಶೆಟ್ಟಿ, ಇತರರು ಹಾಜರಿದ್ದರು.

# ಸಹಕಾರ ಸಂಸ್ಥೆಗಳಲ್ಲಿ ಹೊರಗುತ್ತಿಗೆ ನೇಮಕ - ಒಂದು ವಿಮರ್ಷೆ



– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.

ಸಹಕಾರ ಸಂಘಗಳ ಕಾಯಿದೆ 1959 ರಡಿ ನೋಂದಾಯಿಸಿದ ಸಂಸ್ಥೆಗಳ ಕಾರ್ಯನಿರ್ವಹಣೆಗೆ ನೇಮಕ ಮಾಡುವಾಗ 1960ರ ನಿಯಮ 17 ಮತ್ತು 18 ರಡಿ ರಚನೆಯಾದ ನೀತಿಯನ್ನು ಅನುಸರಿಸಿ ನೇಮಕ ಮಾಡಲು ಅವಕಾಶ ಕಲ್ಪಿಸಿದೆ. ಒಂದು ಸಹಕಾರ ಸಂಸ್ಥೆ ಹುಟ್ಟುಹಾಕಿದಾಗ ಅದರ ದಿನನಿತ್ಯದ ಕೆಲಸ ನಿರ್ವಹಣೆಗೆ ನೌಕರರ ಅವಶ್ಯಕತೆ ಇದೆ. ಏಕೆಂದರೆ ಸದಸ್ಯರೇ ಕೆಲಸ ನಿರ್ವಹಿಸಲು ಸಾಧ್ಯವಾಗಲಾರದು ಎಂದು, ಅದರಂತೆ ಸಹಕಾರ ಸಂಸ್ಥೆಗಳು ನೌಕರರ ನೇಮಕಾತಿ ಮಾಡಿಕೊಳ್ಳುತ್ತಿದ್ದವು. ಸಹಕಾರ ಕಾಯಿದೆಯಡಿ ಸುಮಾರು 5000 ಕೃಷಿ ಪತ್ತಿನ ಸಹಕಾರ ಸಂಘಗಳು ಮತ್ತು ಸುಮಾರು 16000 ಹಾಲು ಉತ್ಪಾದಕರ ಸಹಕಾರ ಸಂಘಗಳ ನೇಮಕಾತಿಯಲ್ಲಿ ಯಾವ ನಿಯಮಗಳನ್ನು ಪಾಲಿಸದೆ, ಸ್ಥಳೀಯರನ್ನು ಅಂದರೆ ಆಡಳಿತ ಮಂಡಳಿ ಸದಸ್ಯರ ಸಂಬಂಧಿಕರ ನೇಮಕವಾಗುತ್ತಿದೆ. ಇದನ್ನು ನಿಯಂತ್ರಿಸಲು ನಿಬಂಧಕರಿಗೆ ಈವರೆವಿಗೂ ಸಾಧ್ಯವಾಗುತ್ತಿಲ್ಲ. ಕಲಂ.29ಜಿ ಅಡಿಯಲ್ಲಿ ಮುಖ್ಯಕಾರ್ಯನಿರ್ವಾಹಕನ ಬಗ್ಗೆ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಕಲಂ.128ಎ ಅಡಿ ಒಂದು ಪ್ರಾಧಿಕಾರ ರಚನೆ ಮಾಡಿ ನಿಯಂತ್ರಣಕ್ಕೆ ಪ್ರಯತ್ನಿಸಲಾಗಿದೆ.

ಮುಖ್ಯಕಾರ್ಯನಿರ್ವಾಹಕನ ನೇಮಕದಲ್ಲಿ ಪ್ರತಿಯೊಂದು ಸಹಕಾರ ಸಂಸ್ಥೆ, ಈ ಹುದ್ದೆ ಸೃಷ್ಟಿಸಲೇಬೇಕು ಮತ್ತು ಆ ಹುದ್ದೆಗೆ ಪ್ರತಿ ಸಹಕಾರ ಸಂಸ್ಥೆ ನೇಮಕವನ್ನು ನೇಮಕಾತಿ ನಿಯಮಗಳಂತೆ ನೇಮಕ ಮಾಡಬೇಕು ಹಾಗೆ ಮಾಡದಿದ್ದರೆ (ಮೂರು ತಿಂಗಳ ಒಳಗೆ) ನಿಬಂಧಕರೇ ನೇಮಕ ಮಾಡುವ ಅಧಿಕಾರ ಕಾಯಿದೆಯಲ್ಲಿ ನೀಡಿದೆ. (ಇದನ್ನು ನಿಬಂಧಕರು ಉಪಯೋಗಿಸುವುದೇ ಇಲ್ಲ) ಹಲವಾರು ಸಂಸ್ಥೆಗಳು ಪ್ರಭಾರ ವ್ಯವಸ್ಥೆ ಮಾಡಿ ಮುಂದುವರಿಸುತ್ತವೆ.) ನಿಯಮ 1960 ರಡಿ ರೂಪಿಸಿದ ನೇಮಕಾತಿ ನಿಯಮ 17 ಮತ್ತು 18 ರಡಿ ನೇಮಕ ಮಾಡುವ ಪ್ರವೃತ್ತಿ ಜಿಲ್ಲಾ ಮಟ್ಟ ಮತ್ತು ರಾಜ್ಯ ಮಟ್ಟದ ಸಂಸ್ಥೆಗಳಲ್ಲಿ ಅನುಸರಿಸುತ್ತವೆ. ಕೆಳ ಮಟ್ಟದ ಸಂಸ್ಥೆಗಳಲ್ಲಿ ಸಾಮಾನ್ಯವಾಗಿ, ನೇಮಕಾತಿ ನೀತಿ ಅನುಸರಿಸದೇ ನೇಮಕವಾಗುತ್ತದೆ. ಇದನ್ನು ಕ್ಷೇತ್ರ ಸಿಬ್ಬಂದಿ ಹೊಂದಾಣಿಕೆ ನೀತಿ ಅಳವಡಿಸಿಕೊಂಡಿದೆ. ಅಂದರೆ ಉಲ್ಲಂಘನೆಗೆ ಕ್ರಮಗಳಾಗುತ್ತಿಲ್ಲ. ಆದರೂ ಅದು ಯಾರದೇ ಪ್ರಭಾವಕ್ಕೊಳ್ಳಗಾಗಿ ಆ ಸಂಸ್ಥೆಗೆ ಹಿಂಸೆ ಕೊಡಲು ಮಾತ್ರ ಪ್ರಯೋಗ ನಡೆಯುತ್ತದೆ.

**ಒಪ್ಪಂದ/ಹೊರಗುತ್ತಿಗೆ :**

ರಾಜ್ಯ ಸರ್ಕಾರ ಹೊರಗುತ್ತಿಗೆ ನೀತಿ ರೂಪಿಸಿಕೊಂಡ ನಂತರ ಸಹಕಾರ ಸಂಸ್ಥೆಗಳಲ್ಲಿಯೂ ಈ ರೀತಿ ನೀತಿ ರೂಪಿಸುವ ವ್ಯವಸ್ಥೆಯಾಗಿದೆ. ಪ್ರಾರಂಭಿಕ ಹಂತದಲ್ಲಿ ನಿಯಮ 17(4) ಈ ಕೆಳಕಂಡಂತೆ ಇದೆ.

"ಸಹಕಾರ ಸಂಘದ ತುರ್ತು ಸೇವೆಯ ಅಗತ್ಯತೆ ಇದ್ದಾಗ ಸಹಕಾರ ಸಂಘದ ಆಡಳಿತ ಮಂಡಳಿಯ ಗುತ್ತಿಗೆ ಆಧಾರದ, ಮೇಲೆ ನೇಮಕಾತಿ ಮಾಡಬಹುದಾಗಿದೆ."

ಈ ನೀತಿಯನ್ನು ಮತ್ತು ಮಾರ್ಪಡಿಸಿ ಈ ಕೆಳಕಂಡಂತೆ ರೂಪಿಸಿದೆ.

"ಆಡಳಿತ ಮಂಡಳಿ, ನಿಬಂಧಕರ ಪೂರ್ವಾನುಮತಿ ಪಡೆದು ಹನ್ನೊಂದು ತಿಂಗಳ ಅವಧಿಗೆ ಎರಡನೇ ದರ್ಜೆ ಗುಮಾಸ್ತ ಮತ್ತು ಅದಕ್ಕಿಂತ ಕೆಳಗಿನ ಹುದ್ದೆಗೆ ಹೊರಗುತ್ತಿಗೆ ಆಧಾರದಲ್ಲಿ ನೇಮಕ ಮಾಡಬಹುದು" ಎಂದು ಅವಕಾಶ ಸೇರಿಸಿದೆ. ಈಗ ಈ ನೀತಿ ಜಾರಿಯಲ್ಲಿದೆ.

ಒಪ್ಪಂದದ ಮೇಲೆ ನೇಮಕವಾದ ವ್ಯಕ್ತಿಗಳು ಸಂಘದ ನೌಕರರಾಗಿರುತ್ತಾರೆ. ಅವರು ಮಾಡಿದ ವ್ಯವಹಾರಗಳಿಗೆ ಅವರನ್ನು ಜವಾಬ್ದಾರರನ್ನಾಗಿ ಮಾಡಲು ಮಂಡಳಿಗೆ ಅಧಿಕಾರ ಇದೆ. ಆದರೆ ಹೊರಗುತ್ತಿಗೆ ಆಧಾರದಲ್ಲಿ ನೇಮಕವಾದ ವ್ಯಕ್ತಿಗಳು ಸಂಘದ ನೌಕರರಾಗುವುದಿಲ್ಲ. ಅವನನ್ನು ನೀಡಿದ ಸಂಸ್ಥೆಯ ನೌಕರರಾಗಿರುತ್ತಾರೆ.

ಹೊರಗುತ್ತಿಗೆಯಿಂದ ಆಗುವ ಪರಿಣಾಮವೆಂದರೆ ಅವರಿಗೆ ವಹಿಸಿದ ಕೆಲಸದಲ್ಲಿ ಪ್ರಾಮಾಣಿಕತೆ, ನಿಷ್ಠೆ, ಭದ್ರತೆ ಇರಬೇಕೆಂದಿಲ್ಲ. ಇದರ ಜೊತೆಗೆ ಹೊರಗುತ್ತಿಗೆ ಆಧಾರದಲ್ಲಿ ಬಂದ ನೌಕರರು, ಅವರನ್ನು ಶಿಫಾರಸ್ ಮಾಡಿದ ವ್ಯಕ್ತಿಗೆ ಇರುತ್ತಿದೆಯೇ ಹೊರತು ಸಂಸ್ಥೆಗೆ ಅಲ್ಲ. ಇದರ ಜೊತೆಗೆ ಹೊರಗುತ್ತಿಗೆಯಲ್ಲಿ ಶೀಘ್ರಲಿಪಿಗಾರರನ್ನು ತೆಗೆದುಕೊಂಡರೆ (ಸರ್ಕಾರದ ಮಟ್ಟದಲ್ಲಿ, ಸಹಕಾರ ಸಂಘದಲ್ಲಿ ಎರಡನೆ ದರ್ಜೆ ಗುಮಾಸ್ತರಿಗಿಂತ ಕೇಳ ಮಟ್ಟ ಹುದ್ದೆಗಳಿಗೆ ಮಾತ್ರ ಅವಕಾಶ) ಇಲಾಖೆ/ಕಛೇರಿ ಮುಖ್ಯಸ್ಥರು ನೀಡಿದ ಉತ್ತಲೇಖನ ಗುಪ್ತತೆ ಕಾಪಾಡಬೇಕಾದಾಗ, ಅಂತಹ ಶಿಘ್ರಲಿಪಿಕಾರರು ಅದನ್ನು ನಿರ್ವಹಿಸುತ್ತಾರೆಂಬ ನಂಬಿಕೆ ಇರುವುದಿಲ್ಲ. ಸರ್ಕಾರದ (ವಿಧಾನ ಸೌದದ) ಮಟ್ಟದಲ್ಲಿ ಸುಮಾರು 3000 ಇಂತಹ ನೌಕರರು ಇದ್ದಾರೆಂದು ಭಾವನೆ. ಅಂತಹ ನೌಕರರು ಸರ್ಕಾರದ ನೀತಿ ರೂಪಿಸುವಾಗ, ತಯಾರಿಸುತ್ತಿರುವ ಯೋಜನೆ ಸೋರಿಕೆ ಮಾಡುವ ಸಾಧ್ಯತೆ ಇಲ್ಲವೇ? ಹಾಗೆ ನೋಡಿದರೆ ನಿಯಮ 17(4) ರಲ್ಲಿ ರೂಪಿಸಿದ ನೀತಿಯೂ ಸರಿ ಇಲ್ಲ. ಸಿಪಾಯಿಗಳು/ರಾತ್ರಿ ಕಾವಲುಗಾರರೂ ಸಹ ಆ ಸಂಸ್ಥೆಯ ಗುಪ್ತತೆಯನ್ನು ಪ್ರಚಾರ ಮಾಡಬಹುದು ಮತ್ತು ದುರುಪಯೋಗ ಪಡಿಸಿಕೊಳ್ಳಬಹುದು.

ಗುಪ್ತತೆ ಎಂಬುದಕ್ಕೆ ಒಂದು ಉದಾಹರಣೆ ನೀಡುವುದಾದರೆ. ನಾನು

1960 ದಶಕದಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ, ವಿಶ್ವವಿದ್ಯಾನಿಲಯದ ನಿಬಂಧಕರ ಆಪ್ತಸಹಾಯಕರಾಗಿ ಉಬ್ಲಾದಿ ಎಂದು ಕೆಲಸ ನಿರ್ವಹಿಸುತ್ತಿದ್ದರು. ವಿಶ್ವವಿದ್ಯಾನಿಲಯದಲ್ಲಿ ಯಾವುದಾದರೂ ನೇಮಕ ಪ್ರಕ್ರಿಯೆ ಮುಕ್ತಾಯವಾಗಿ ಆಯ್ಕೆಯಾದ ವ್ಯಕ್ತಿಗಳ ಪಟ್ಟಿ ದಿನ ಪತ್ರಿಕೆಯಲ್ಲಿ ಪ್ರಕಟವಾಗಿದ್ದರೂ, ಉಬ್ಲಾದಿ ಅವರನ್ನು ನೇಮಕಾತಿ ಬಗ್ಗೆ ಕೇಳಿದರೂ, ಅವರ ಪ್ರತಿಕ್ರಿಯೆ ಏನೂ ಇರುತ್ತಿರಲಿಲ್ಲ. ನಾವೇ ದಿನ ಪತ್ರಿಕೆಯಲ್ಲಿ ಬಂದಿದೆ ಎಂದರೂ "ಹೌದೇನು" ಎಂದು ಮರು ಪ್ರಶ್ನಿಸುತ್ತಿದ್ದರು. ಇದನ್ನು ಗುಪ್ತತೆ ಎಂದು ಕರೆಯಬೇಕು. ಅಂತಹ ನಿಷ್ಠೆಯನ್ನು ನಾವು ಹೊರಗುತ್ತಿಗೆ ನೌಕರರಲ್ಲಿ ನಿರೀಕ್ಷಿಸಬಹುದೇ?

ರಾಜ್ಯ ಸರ್ಕಾರದ ಕಾರ್ಯಸೌದದ ಜೊತೆಗೆ ಮಂತ್ರಿಗಳ ಕಛೇರಿಯಲ್ಲಿಯೂ ಹೊರಗುತ್ತಿಗೆಯಿಂದ ಪಡೆದ ನೌಕರರಿದ್ದರೆ, ಮಂತ್ರಿಗಳು ರೂಪಿಸುವ ನೀತಿಗಳನ್ನು ಹೊರಗಿನ ವ್ಯಕ್ತಿಗಳಿಗೆ ಮಾರಿಕೊಂಡರೆ. ಸರ್ಕಾರ ಸಂಕಷ್ಟಕ್ಕೆ ಸಿಲುಕುವುದಿಲ್ಲವೆ. ಈಗಿನ ವಿದ್ಯಾನ್ಮಾನ ಯಂತ್ರಗಳ ಮೂಲಕ ಸರ್ಕಾರ ತೆಗೆದುಕೊಂಡ ಗುಪ್ತ ತೀರ್ಮಾನಗಳನ್ನು ಪಡೆದು ಸಂಬಂಧಪಟ್ಟವರಿಗೆ ರವಾನಿಸುತ್ತಿರುವುದು ಸಾರ್ವಜನಿಕವಾಗಿದೆ. ಉದಾಹರಣೆಗೆ ಇತ್ತೀಚೆಗೆ ಕರ್ನಾಟಕ ರಾಜ್ಯದ ರಾಜ್ಯ ಪಾಲರು ಲೋಕಾಯಕ್ತ, ರಾಜ್ಯಪಾಲರಿಗೆ ರವಾನಿಸಿದ ಗುಪ್ತ ಕಡತಗಳು ರಾಜ್ಯ ಸರ್ಕಾರದ ಸಂಪುಟ ಸಭೆಯಲ್ಲಿ ಹೇಗೆ ಚರ್ಚೆಯಾಗಿ ತೀರ್ಮಾನಿಸಲಾಯಿತು ಎಂಬುದು ಒಂದು ದೊಡ್ಡ ಉದಾಹರಣೆ. ಇಂತಹ ಸಂದರ್ಭದಲ್ಲಿ ಹೊರಗುತ್ತಿಗೆ ನೌಕರರನ್ನು ಸರ್ಕಾರ/ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿ ನೇಮಿಸಿಕೊಳ್ಳುವುದು ಸರಿಯೇ?

ಇತ್ತೀಚೆಗೆ ರಾಜ್ಯ ಸರ್ಕಾರ ಬೀದರ್ ಜಿಲ್ಲೆಯಲ್ಲಿ ರೂಪಿಸಿದ ಹೊರಗುತ್ತಿಗೆ ಸಹಕಾರ ಸಂಘ ಸ್ಥಾಪನೆಗೆ ಮಾದರಿ ಎಂದು ಪರಿಗಣಿಸಿ, ಎಲ್ಲಾ ಜಿಲ್ಲೆಗಳಲ್ಲೂ ಇಂತಹ ಹೊರಗುತ್ತಿಗೆ ಸಹಕಾರ ಸಂಘಗಳ ಮೂಲಕ ನೇಮಕವಾಗಲು ತೀರ್ಮಾನಿಸಿರುವುದು ಒಂದು ಒಳ್ಳೆಯ ಕ್ರಮ. ಆದರೆ, ಅಂತಹ ಸಹಕಾರ ಸಂಘಗಳು ಒಂದು ರಾಜಕೀಯ ಪಕ್ಷದಿಂದ ರೂಪಿಸಿದಂತಾಗಬಾರದು ಎಂಬ ಎಚ್ಚರಿಕೆ ವಹಿಸಬೇಕು. ಅಂತಹ ಸಹಕಾರ ಸಂಘಗಳಿಂದ ಬಂದ ನೌಕರರು, ಸಹಕಾರ ವ್ಯವಸ್ಥೆಯಲ್ಲಿಯೇ ಇರುವುದರಿಂದ ಶಿಸ್ತು ಕ್ರಮ ಜರುಗಿಸಲು ಸುಲಭವಾಗುತ್ತಿದೆ.

ಸಹಕಾರಿ ಸಂಸ್ಥೆಗಳಿಗೆ ಸಂಬಂದಪಟ್ಟಂತೆ ಈಗಿನ ವ್ಯವಸ್ಥೆಯಲ್ಲಿ ಎಲ್ಲಾ ಸಹಕಾರ ಸಂಘಗಳ ನೌಕರರ ನೇಮಕಾತಿಯನ್ನು ಮೇಲ್ವಿಚಾರಣೆ ಮಾಡಲು ನಿಬಂಧಕರಿಗೆ ಸಾಧ್ಯವಾಗಿಲ್ಲ. ಆದ್ದರಿಂದ ಬಹಳಷ್ಟು ಸಹಕಾರ ಸಂಸ್ಥೆಗಳಲ್ಲಿ ನೇಮಕಾತಿ ಸಮಿತಿ ರಚಿಸಿ ವ್ಯವಸ್ಥಿತವಾಗಿ ಹಣ ಲಪಟಾಯಿಸಲು ಮಂಡಳಿ ಸದಸ್ಯರು ರೂಪಿಸಿಕೊಂಡಿದ್ದರೆ. ಇದನ್ನು ನಿಯಂತ್ರಿಸುವ ಚಿಂತನೆಗೆ ಕೇರಳ ರಾಜ್ಯದಲ್ಲಿ ರಾಜ್ಯ ಮಟ್ಟದ ನೇಮಕಾತಿ ಮಂಡಳಿ ರಚಿಸಿದ್ದು, ಎಲ್ಲಾ ಸಹಕಾರ ಸಂಸ್ಥೆಗಳ ಅವಶ್ಯಕತೆ ಪೂರೈಸುತ್ತಿದೆ. ಇದರಲ್ಲಿಯು/ಅಪಾಯವೆಂದರೆ ಆ ನೇಮಕಾತಿ ಸಮಿತಿ ಸದಸ್ಯರನ್ನು ಆಯ್ಕೆ ಮಾಡುವಾಗ ಅನುಸರಿಸುತ್ತಿರುವ ನೀತಿ. ಆ ಮಂಡಳಿ ಸದಸ್ಯರೂ ಲಂಚದ ವ್ಯವಸ್ಥೆಗೆ ಹೊಂದಿಕೊಂಡರೆ, ಸಹಕಾರ ಸಂಸ್ಥೆ ಮೇಲೇರಲು ಸಾಧ್ಯವಾಗುವುದಿಲ್ಲ. ಏಕೆಂದರೆ ಲಂಚದ ಹಣ ನೀಡಿ ಬಂದ ನೌಕರ, ಆ ಹಣ ಸಂಪಾಧಿಸುವುದೇ ವೃತ್ತಿ ಎಂದು ತಿಳಿಯುತ್ತೇನೆ. ಅಂತಹ ನೌಕರರಿಂದ ಸಹಕಾರ ಸಂಸ್ಥೆ ಸತ್ಯತೆ, ಪ್ರಾಮಾಣಿಕತೆ ಮತ್ತು ಭದ್ರತೆ ನಿರೀಕ್ಷಿಸುವುದು ತಪ್ಪು.

ನನಗೆ ಲಭ್ಯವಾದ ಗುಪ್ತ ಮಾಹಿತಿ ಎಂದರೆ ಉತ್ತರ ಕರ್ನಾಟಕದ ಒಂದು ಜಿಲ್ಲೆಯಲ್ಲಿ ಜಿಲ್ಲಾ ಸಹಕಾರ ಬ್ಯಾಂಕಿನ ಮಂಡಳಿ ರಚನೆ ಸಂದರ್ಭದಲ್ಲಿ ಕೃಷಿ ಪತ್ತಿನ ಸಹಕಾರ ಸಂಘದ ಪ್ರತಿನಿಧಿಗೆ ಬಂದ ಮತಕ್ಕೆ 5 ಲಕ್ಷ ಸಂಭಾವನೆ ನೀಡಿರುವುದನ್ನು ಗಮನಿಸಿದರೆ, ನಮ್ಮ ಸಹಕಾರ ವ್ಯವಸ್ಥೆ ಎತ್ತಸಾಗಿದೆ?

## ಭೇಟಿ

**ಹೊಸಪೇಟೆ :** ಪದ್ಮಶಾಲಿ ಪತ್ತಿನ ಸೌಹಾರ್ದ ಸಹಕಾರಿ ನಿ., ಹೊಸಪೇಟೆ ಪದ್ಮಶಾಲಿಯ ಸದರಿ ಸಹಕಾರಿಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಬೆಳಗಾವಿ ಮತ್ತು ಕಲಬುರಗಿ ವಿಭಾಗದ ಟಾಸ್ಕ ಪೋರ್ಸ ಮುಖ್ಯಸ್ಥರಾದ ಶ್ರೀಮತಿ ಶೋಭಾ ರವರು, ಹಿರಿಯ ಅಧಿಕಾರಿಗಳಾದ ವೃಷಭನಾಥ ಹಾಗೂ ಬಳ್ಳಾರಿ ಮತ್ತು ವಿಜಯನಗರ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ರವಿಕುಮಾರವರು ಉಪಸ್ಥಿತರಿದ್ದರು. ಸಹಕಾರಿಯ ಅಧ್ಯಕ್ಷರಾದ ಶ್ರೀ ಜಯರಾಂ, ನಿರ್ದೇಶಕರಾದ ಶ್ರೀ ರಾಮಚಂದ್ರಪ್ಪ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ಉಮಾಪತಿ ಯವರು ಸಹಕಾರಿಯ ಕುರಿತು ಮಾಹಿತಿ ಹಂಚಿಕೊಂಡರು. ಸದರಿ ಸಹಕಾರಿಯ ಆಡಳಿತ ಮಂಡಳಿಯವರಿಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಅಗತ್ಯ ಮಾರ್ಗದರ್ಶನ ಮಾಡಿದರು.

ವಡಕರಾಯ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿ ನಿ., ಹೊಸಪೇಟೆ. ಸದರಿ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲರವರು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಬೆಳಗಾವಿ ಮತ್ತು ಕಲಬುರಗಿ ವಿಭಾಗದ ಟಾಸ್ಕ ಪೋರ್ಸ ಮುಖ್ಯಸ್ಥರಾದ ಶ್ರೀಮತಿ ಶೋಭಾ ರವರು, ಹಿರಿಯ ಅಧಿಕಾ–ರಿಗಳಾದ ವೃಷಭನಾಥ ಹಾಗೂ ಬಳ್ಳಾರಿ ಮತ್ತು ವಿಜಯನಗರ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ರವಿಕುಮಾರವರು ಉಪಸ್ಥಿತ–ರಿದ್ದರು. ಸದರಿ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಸಂಜೀವಶೆಟ್ಟಿ, ನಿರ್ದೇಶಕರಾದ ಮಾಡ್ಲೇರ ವೆಂಕಪ್ಪ ಮುಖ್ಯಕಾರ್ಯ ನಿರ್ವಾಹಕರಾದ ಚಿತ್ರಶೇಖರ ಸಹಕಾರಿಯ ಬಗ್ಗೆ ಮಾಹಿತಿ ನೀಡಿದರು. ಸದರಿ ಸಹಕಾರಿಗೆ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲರವರು ಅಗತ್ಯ ಮಾರ್ಗದರ್ಶನ ಮಾಡಿದರು.

# "ಐಡೆಂಟಿಟಿ ಕ್ರೈಸಿಸ್ ಎನ್ನುವುದರ ಐಡೆಂಟಿಟಿ"

ಶ್ರೀ ಧೀರೇಂದ್ರ ನಾಗರಹಳ್ಳಿ

'Identify' ಎನ್ನುವುದು ಎಲ್ಲರಿಗೂ ಇದ್ದೆ ಇರುತ್ತದೆ.ಆದರೆ ಕೆಲವೊಂದು ಸಂದರ್ಭದಲ್ಲಿ ಈ 'Identify' ಎನ್ನುವುದರ ಬಗ್ಗೆ ಅನುಮಾನ ಶುರುವಾಗುತ್ತದೆ, ಇದನ್ನೆ ಐಡೆಂಟಿಟಿ ಕ್ರೈಸಿಸ್ ಎನ್ನುವುದು.

**ಈ ಕೆಳಗಿನ ಕೆಲವು ಉದಾಹರಣೆಗಳನ್ನು ಗಮನಿಸಿ:**

- ಸಭೆಯು ನಡೆಯತ್ತಿರವಾಗ ಕೆಲವರು ತಮ್ಮ 'ಇರುವಿಕೆ'ಯನ್ನು ಸಾಬೀತುಮಾಡಲು ಪ್ರಯತ್ನಿಸುತ್ತಿರುತ್ತಾರೆ
- ತಮ್ಮತ್ತ ಯಾರು ಗಮನ ಕೊಡುತ್ತಿಲ್ಲ ಎನ್ನುತ್ತಿರುತ್ತಾರೆ (ಹಲುಬುತ್ತಿರುತ್ತಾರೆ)
- ಕೆಲವರು ಸಮಯ ಮತ್ತು ಸಂದರ್ಭಕ್ಕೆ ತಕ್ಕಂತೆ ತಮ್ಮ (ಪದೇ-ಪದೇ) ಅಭಿಪ್ರಾಯವನ್ನು ಬದಲಾಯಿಸುತ್ತಲೆ ತಾವು ಮತ್ತು ತಮ್ಮ ಅಭಿಪ್ರಾಯ ಎಷ್ಟು ಮುಖ್ಯ ಎನ್ನುವುದನ್ನು ತೋರಿಸುತ್ತಿರುತ್ತಾರೆ.

ಮೇಲಿನ ಎಲ್ಲಾ ಉದಾಹರಣೆಗಳಲ್ಲಿ ಒಂದು ವಿಷಯ ಸ್ಪಷ್ಟವಾಗಿದೆ ಅದೆಂದರೆ 'ಇರುವಿಕೆ'ಯ (ವ್ಯಕ್ತಿತ್ವ) ಬಗ್ಗೆಯೆ ಅನುಮಾನ. ಈ ಅನುಮಾನ ಇರುವುದರಿಂದಲೇ ತಮ್ಮ 'ಇರುವಿಕೆಯನ್ನು' ಸಾಬೀತು ಪಡಿಸಲು ಪ್ರಯತ್ನಿಸುತ್ತಿರುತ್ತಾರೆ.

ಇನ್ನೂ ಐಡೆಂಟಿಟಿ ಕ್ರೈಸಿಸ್ ಎನ್ನುವುದನ್ನು ಈ ಕೆಳಗಿನಂತೆ ವ್ಯಾಖ್ಯಾನಿಸಬಹುದು:

"ಅನಿಶ್ಚಿತತೆ ಅವಧಿಯಲ್ಲಿ ಅಥವಾ ಗೊಂದಲಕ್ಕೊಳಗಾದಗ ವ್ಯಕ್ತಿಯು ತನ್ನ ಅಸ್ಮಿತೆಯು ಅಭದ್ರತೆಯಲ್ಲಿದೆ ಎಂದು ಭಾವಿಸುವದನ್ನೆ ನಾವು ಐಡೆಂಟಿಟಿ ಕ್ರೈಸಿಸ್ ಎನ್ನಬಹುದ".

ಈ ಐಡೆಂಟಿಟಿ ಕ್ರೈಸಿಸ್ ಎನ್ನುವುದನ್ನು ಮೊಟ್ಟ ಮೊದಲ ಬಾರಿಗೆ ಚಲಾವಣೆಗೆ ತಂದಿದ್ದು ಎರಿಕ್ ಎರಿಕ್ಸನ್. ಇಲ್ಲಿ ಒಂದು ವಿಶೇಷವಿದೆ ಎರಿಕ್ ಎರಿಕ್ಸನ್ ಯಾವ ಪದವಿಯನ್ನು ಪಡೆದಿರಲಿಲ್ಲ.ಸಾಕಷ್ಟು ನೋವನ್ನೆ ಹೊದ್ದು ಮಲಗಿದ್ದ ಎರಿಕ್ಗೆ ತನ್ನ ಜೀವನದಲ್ಲಿ ತನ್ನದೆನ್ನುವ 'ಐಡೆಂಟಿಟಿ' ಎನ್ನುವುದು ಸಹಾ ಇರಲಿಲ್ಲ. ಬಹುಶಃ ಇದೇ ಮುಂದೆ ಐಡಂಟಿಟಿ ಕ್ರೈಸಿಸ್ ಬಗ್ಗೆ ಅಧ್ಯಯನ ಮಾಡುವಂತೆ ಮಾಡಿರಬಹುದು ! ಎರಿಕ್ ಎರಿಕ್ಸನ್ನ ಮನೋವಿಶ್ಲೇಷಕ ಅಧ್ಯಯನವು ಮುಂದಿನ ದಿನಗಳಲ್ಲಿ ತುಂಬಾ ಪ್ರಾಮುಖ್ಯತೆಯನ್ನು ಪಡೆಯಿತು ಮತ್ತು ಮನೋವಿಶ್ಲೇಷಣೆಯ ಮೂಲಕವೆ ಐಡೆಂಟಿಟಿ ಕ್ರೈಸಿಸ್ ಬಗ್ಗೆ ಅಧ್ಯಯನ ಮಾಡಿದರು.

ಈಗ ನಮ್ಮ ಮೂಲ ವಿಷಯಕ್ಕೆ ಬರುವುದಾದರೆ ಹದಿಹರೆಯದವರಲ್ಲಿನ ಕೆಲವೊಂದು ಸೋಲುಗಳ ಉದಾಹರಣೆಯಿಂದ ವಿಶ್ಲೇಷಣೆ ಮಾಡುವ,

ಕೆಲವು ಹದಿಹರೆಯದವರಿಗೆ ಪರೀಕ್ಷೆಗಳಲ್ಲಿ/ಕ್ರೀಡೆಗಳಲ್ಲಿ/ಇನ್ನಿತರೆ ಸಾಂಸ್ಕೃತಿಕ ವಿಭಾಗಳಲ್ಲಿ ಕಳಪೆ ಸಾಧನೆಯಾದಾಗ ಅದು ಆತ್ಮಗೌರವವನ್ನು ಕುಂದಿಸುತ್ತದೆ ಹಾಗೂ ಅಲ್ಲಿಂದ ತಾನು ಅಸಮರ್ಥ ಎನ್ನುವ ಭಾವನೆಯನ್ನು ತಂದುಕೊಡುತ್ತದೆ. (ಬಹುತೇಕವಾಗಿ ಈ ಭಾವನೆಯು ಸುಪ್ತ ಮನಸ್ಸು/ 'ಅ ಚೇತನ' ಸ್ಥಿತಿನಲ್ಲಿಯೆ ಮೂಡಿರುತ್ತದೆ ಕಾರಣ ಜಾಗೃತ ಮನಸ್ಥಿತಿಯು ಸೋಲನ್ನು ಪರಾಮರ್ಶಿಸುತ್ತಿರುತ್ತದೆ). ಈ ಅಸಮರ್ಥನೆನ್ನುವ ಭಾವನೆ ಮುಂದಿನ ದಿನಗಳಲ್ಲಿ ಸರಣಿ ಸೋಲುಗಳಿಗೆ ಕಾರಣವಾಗಿ ಇದರಿಂದ ಹದಿಹರೆಯದವರು ಐಡೆಂಟಿಟಿ ಕ್ರೈಸಿಸ್ ಗೆ ಒಳಗಾಗಲು ಕಾರಣವಾಗುತ್ತದೆ.ಈ ಐಡೆಂಟಿಟಿ ಕ್ರೈಸಿಸ್ ಗೆ ಒಳಗಾಗುವುದಕ್ಕೂ ಮೊದಲು ಸರಣಿಯಾಗ ಕೆಲವು ಘಟನೆಗಳು ಘಟಿಸಿ ಹೋದವು ಮೊದಲನೆಯದು (1) ಪರೀಕ್ಷೆ/ಸ್ಪರ್ಧೆಯಲ್ಲಿನ ಸೋಲು (2) ಆತ್ಮ ಗೌರವಕ್ಕಾದ ಆಘಾತ (3) ಸರಣಿ ಸೋಲುಗಳು ಮತ್ತು ಕೊನೆಯದಾಗಿ ಐಡೆಂಟಿಟ ಕ್ರೈಸಿಸ್. ಅಂದರೆ ಈ ಸರಣಿ ಘಟನೆಗಳಲ್ಲಿ ಯಾವುದಾದರೂ ಒಂದು ಘಟನೆಗಳಲ್ಲಿ ನಾವು ಎಚ್ಚೆತ್ತು ಕೊಂಡಿದ್ದರೂ ಯಾವ ಐಡೆಂಟಿಟ ಕ್ರೈಸಿಸ್ ಗೆ ಒಳಗಾಗುತ್ತಿರಲಿಲ್ಲ. ಐಡೆಂಟಿಟಿ ಕ್ರೈಸಿಸ್ ಗೆ ಒಳಗಾದ ಹದಿಹರೆಯದವರಲ್ಲಿ ಸಾಮಾನ್ಯವಾಗಿ ಈ ಕೆಳಗಿನ ಲಕ್ಷಣಗಳನ್ನು ಕಾಣುತ್ತೇವೆ

- ನನ್ನನ್ನು ಯಾರು ಗುರುತಿಸುತ್ತಿಲ್ಲ (ಎನ್ನುವುದು)
- ನನ್ನನ್ನು ಎಲ್ಲರೂ ಕೀಳು ದೃಷ್ಟಿಯಿಂದ ನೋಡುತಿದ್ದಾರೆ
- ನಾನು ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶವನ್ನು ತರಬಹುದೆ? (ಅನುಮಾನ)
- ಮನೆಯಲ್ಲಿ ನನಗೆ ಕಾಳಜಿ ತೋರಿಸುತ್ತಿಲ್ಲ
- ಶಿಕ್ಷಕರು ನನ್ನ ಕಡೆ ಯಾಕೋ ಇತ್ತೀಚಿಗೆ ಗಮನ ಕೊಡುತ್ತಿಲ್ಲ
- ನನ್ನ ಸ್ನೇಹಿತರು ನನ್ನನ್ನು ಹಿಂದಿನಂತೆ ನಡೆಸಿಕೊಳ್ಳುತ್ತಿಲ್ಲ
- ನಾನು ಅಪ್ರಸ್ತುತವಾಗುತ್ತಲಿದ್ದೇನೆ (ಅನುಮಾನ)

ನೆನಪಿಡಿ, ಐಡೆಂಟಿಟಿ ಕ್ರೈಸಿಸ್ ಎನ್ನುವುದು ಒಂದು ಪ್ರಕ್ರಿಯೆ. ಯಾವುದೂ ಒಂದು ಘಳಿಗೆಯಲ್ಲಿ ನಮ್ಮೊಳಗೆ ಬಂದು ಹೋಗುವ ಅನಿಸಿಕೆಯನ್ನು ನಾವು ಐಡೆಂಟಿಟಿ ಕ್ರೈಸಿಸ್ ಅನ್ನಲಾಗುವುದಿಲ್ಲ. ಅದೊಂದು ಸದಾ ಕಾಲ ಕಾಡಿದಾಗ ಮಾತ್ರ ಅದನ್ನು ಐಡೆಂಟಿಟಿ ಕ್ರೈಸಿಸ್ ಎಂದು ಹೇಳಬಹುದು.ನಮ್ಮೊಳಗೆ ಯಾವ ಸಂದರ್ಭದಲ್ಲಿ ಋಣಾತ್ಮಕ ಆಲೋಚನೆಗಳು ಒಂದಾದ ಮೇಲೆ ಒಂದರಂತೆ ಬರಲು ಶುರುವಾಗುತ್ತದೆಯೊ ಅದು ಬಹುಶಃ ಐಡೆಂಟಿಟಿ ಕ್ರೈಸಿಸ್ನ ಆರಂಭದ ಸೂಚನೆಯಾಗಿರಬಹುದು ಆ ಕ್ಷಣಕ್ಕೆ ನಾವು ಜಾಗೃತವಾಗಬೇಕು . ಈ ಋಣಾತ್ಮಕ ಆಲೋಚನೆಗಳು ಪರೀಕ್ಷೆ/ಶಾಲೆಯ ಬಗ್ಗೆ/ವಿಷಯಗಳ

ಕರಗತವಾಗಗದಿರುವಿಕೆ/ಮನೆಯಲ್ಲಿನ ಪರಿಸ್ಥಿತಿ/ಸಂಬಂಧಗಳ ಬಗ್ಗೆ ಹೀಗೆ ಯಾವುದರ ಕುರಿತಾದರೂ ಆಗಿರಬಹುದು. ಅಲ್ಲಿಂದ ಶುರುವಾದ ಋಣಾತ್ಮಕ ಆಲೋಚನೆಗಳು ಐಡೆಂಟಿಟಿ ಕ್ರೈಸಿಸ್ನ ರೂಪವನ್ನು ಪಡೆಯಬಹುದು ಈ ಐಡೆಂಟಿಟಿ ಕ್ರೈಸಿಸ್ಗೆ ಕಾರಣಗಳೇನು ಎನ್ನುವುದನ್ನು ಹುಡುಕಿದರೆ.ಇದಕ್ಕೆ ಇಂತಹದ್ದೆ ಎನ್ನುವಂತಹ ನಿಖರವಾದ ಕಾರಣಗಳು ಎಂದು ಹೇಳಲಾಗುವುದಿಲ್ಲ.ಆದರೂ ಈ ಕೆಳಗಿನ ಕೆಲವು ಕಾರಣಗಳು ಐಡೆಂಟಿಟ ಕ್ರೈಸಿಸ್ಗೆ ಕಾರಣಗಳಾಗಿರಬಹುದು.

- ನಿಭಾಯಿಸಲಾಗದ ಒತ್ತಡದ ಜೀವನ.
- ಮುರಿದು ಬಿದ್ದ ಸ್ನೇಹ ಸಂಬಂಧಗಳು ಅಥವಾ ಪ್ರೇಮ ಪ್ರಕರಣ
- ಹೊಂದಿಕೊಳ್ಳಲಾಗದ ಹೊಸ ವಾತವಾರಣ
- ಸರಣಿ ಸೋಲುಗಳು
- ಕಳೆದುಕೊಳ್ಳುವ ಭಯ
- ಉತ್ತಮ ರೀತಿಯಲ್ಲಿ ನಿಭಾಯಿಸದ ಋಣಾತ್ಮಕ ಆಲೋಚನೆಗಳು

ಇನ್ನೂ ಈ ಐಡೆಂಟಿಟಿ ಕ್ರೈಸಿಸ್ ಅನ್ನು ಹೇಗೆ ಗೆಲ್ಲಬಹುದು(ಸಂಭಾವ್ಯ ಪರಿಹಾರಗಳು).

ಐಡೆಂಟಿಟಿಯನ್ನು ಗುರಿತಿಸಿ:– ನೆನಪಿಡಿ ಪ್ರತಿಯೊಬ್ಬರಿಗೂ ತಮ್ಮದೇ ಆದ ಐಡೆಂಟಿಟಿ ಇದೆ ಅಷ್ಟೇ ಅಲ್ಲ ಪ್ರತಿಯೊಬ್ಬರೂ ಗಟಿಡಣಾಜ .ನಮ್ಮ ಐಡೆಂಟಿಟಿ ನಮಗೆ, ಬೇರೆಯೊಬ್ಬರಿಗೆ ಹೋಲಿಕೆ ಸಲ್ಲದು.

ಸಂಬಂಧಗಳ ಬಗ್ಗೆ ಪ್ರಾಮುಖ್ಯತೆ ಕೊಡಿ:– ಆಯಾ ಸಂಬಂಧಗಳಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಐಡೆಂಟಿಟಿ ಇದ್ದೆ ಇದೆ.ಅನ್ಯಥಾ ಆಲೋಚನೆಗಳಿಗೆ ಸ್ಥಳವನ್ನು ಕೋಡದೆ ಯಾರ 'ಐಡೆಂಟಿಟಿ' ಅವರಿಗೆ ಇದ್ದೇ ಇರುತ್ತದೆ.ಒಂದು ವೇಳೆ ಯಾರಾದರು ಐಡೆಂಟಿಟಿಗೆ ಧಕ್ಕೆ ಬರುವಂತೆ ಮಾಡಿದರೆ ಯಾರೊ ಮೂರನೆಯವರು ನಮ್ಮನ್ನು ಸರಿಯಾಗಿ ಉಪಚ–ರಿಸಿಲ್ಲವೆಂದರೆ ನಮ್ಮ ಐಡೆಂಟಿಟಿಗಾದ ಧಕ್ಕೆಯಲ್ಲ ಅದು ಅವರ ಯೋಗ್ಯತೆ

ಆಸಕ್ತಿಗಳನ್ನು ಹುಡುಕಿ ಮತ್ತು ಅದರಲ್ಲಿ ತೊಡಗಿಸಿಕೊಳ್ಳಿ:– ಆಸಕ್ತಿಗಳನ್ನು ಗುರುತಿಸಿಕೊಳ್ಳಿ ಅಂದರೆ ನಮ್ಮ ದಿನ ನಿತ್ಯದ ದಿನಚರಿಗೂ ವಿಭಿನ್ನವಾದ ಹವ್ಯಾಸವನ್ನು ರೋಢಿಸಿಕೊಳ್ಳಿ.ಈ ರೀತಿ ಒಂದಾದ ಮೇಲೆ ಒಂದರಂತೆ ಕೆಲಸಗಳಲ್ಲಿ ತೊಡಗಿಕೊಳ್ಳುವುದರಿಂದ ಅನ್ಯಥಾ ವಿಷಯಗಳಿಗೆ ಸ್ಥಳವಿರುವುದಿಲ್ಲ

ಸೋಲುಗಳಿಂದ ಪಾಠವನ್ನು ಕಲಿಯಿರಿ:– ಸೋಲುಗಳ ಬದುಕಿನ ಭಾಗ.ನಾವು ಸೋಲುತಿದ್ದೇವೆ ಎಂದರೆ ಪ್ರಯತ್ನಿಸುತಿದ್ದೇವೆ ಎಂದರ್ಥ ಅಂದರೆ ನಾವು ಇನ್ನೂ ಸ್ಪರ್ಧೆಯಲ್ಲಿ ಜೀವಂತವಾಗಿದ್ದೇವೆ ಎನ್ನವುದೆ ಹೆಮ್ಮೆ. ಸ್ಪರ್ಧೆಯಲ್ಲಿ ಜೀವಂತವಾಗಿದ್ದೇವೆ ಎಂದರೆ ಗೆದ್ದೇ ಗೆಲ್ಲುತ್ತೇವೆ ಎಂದು ಅರ್ಥ.ಸೋಲು ಕೊನೆಯಲ್ಲ ಅದೊಂದು ಗೆಲುವಿನ ಆರಂಭ.

ಯೋಗ ಮತ್ತು ಧ್ಯಾನ:– ಯೋಗ ಮತ್ತು ಧ್ಯಾನವನ್ನು ಪ್ರತಿ ದಿನವೂ ರೂಢಿಸಿಕೊಳ್ಳುವದರಿಂದ ನಮ್ಮ ಮನಸ್ಸಿನ ಮೇಲೆ ನಮಗೆ ಹತೋಟಿ ಬರುತ್ತದೆ,ಯಾವಗ ನಮ್ಮ ಮನಸ್ಸಿನ ಮೇಲೆ ಹತೋಟಿ ಬರುತ್ತದೆಯೋ ಆಗ ನಮ್ಮ ಮನಸ್ಸಿನಲ್ಲಿ ನಮಗೆ ಬೇಡಾದುದ್ದಕ್ಕೆ ಸ್ಥಳವಿರುವುದಿಲ್ಲ.

*ನೆನಪಿಡಿ, ಇದೊಂದು ಮನಃಶಾಸ್ತ್ರೀಯ ವಿಷಯ ತಜ್ಞ ವೈದ್ಯರನ್ನು ಸಂಪರ್ಕಿಸುವುದು ಅಗತ್ಯ.

## ಸಂಕಲ್ಪ ಮತ್ತು ಸಿದ್ಧಿ (Law of manifestation)

"ಸದಾಕಾಲ ಒಳ್ಳಯದನ್ನೆ ಯೋಚಿಸಿದರೆ ಒಳ್ಳಯದೇ ಆಗುತ್ತದೆ" – ಇದನ್ನು ಬಹುಶಃ ನಮ್ಮೆ ಮನೆಯಲ್ಲಿನ ಹಿರಿಯರು ಹೇಳುತ್ತಿರುತ್ತಾರೆ. ಇದನ್ನೆ ಇತ್ತೀಚಿನ ದಿನಗಳಲ್ಲಿ – Law of manifestation ಎಂದು ಹೇಳುತ್ತಾರೆ. ಇದನ್ನೆ ನಾವು ಕನ್ನಡದಲ್ಲಿ ಹೇಳುವುದಾದರೆ 'ಸಂಕಲ್ಪದಂತೆ ಸಿಧ್ಧಿ'.

Law of manifestation ಪ್ರಕಾರ ನಮ್ಮ ಆಲೊಚನೆಗಳು ಮತ್ತು ಭಾವನೆಗಳೆ ನಮ್ಮನ್ನು ನಿರೂಪಿಸುತ್ತವೆ.ಅಂದರೆ ನಾವು ಯಾವ ದಿಕ್ಕಿನಲ್ಲಿ ಅಲೋಚಿಸುತ್ತೇವೆ ಅದೇ ದಿಕ್ಕಿನಲ್ಲಿ ನಾವು ಕಾರ್ಯ ಪ್ರವೃತ್ತರಾಗುತ್ತೇವೆ. ಕೆಳಗಿನ ಉದಾಹರಣೆಗಳಿಂದ ಇದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ:

1. ನಾವು ಪರೀಕ್ಷಾ ಕೊಠಡಿಯಲ್ಲಿದ್ದೇವೆ ಮತ್ತು ನಮ್ಮ ಕೈಯಲ್ಲಿ ಪ್ರಶ್ನೆ ಪತ್ರಿಕೆ ಇದೆ. ಮೊದಲ ನೋಟಕ್ಕೆ ಯಾವ ಪ್ರಶ್ನೆಗೂ ಉತ್ತರಗಳು ಹೊಳೆದಿರುವುದಿಲ್ಲ.ಆದರೆ ನಿಧಾನವಾಗಿ ನಮಗೆ ಚೆನ್ನಾಗಿ ಕರಗತವಾಗಿರುವ ವಿಷಯದಿಂದ ಉತ್ತರಿಸಲು ಪ್ರಾರಂಭಸಿರುತ್ತೇವೆ. ನಂತರದಲ್ಲಿ ನಮಗಿರಿವಿಲ್ಲದಂತೆ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರುತ್ತೇವೆ. ಇಧೆ ಸಂಕಲ್ಪದಂತೆ ಸಿಧ್ಧಿ!!
2. ಕಛೇರಿ ಕೆಲಸಗಳಲ್ಲಿ ತಲೆದೂರವ ಜಟಿಲ ಸಮಸ್ಯೆ ಮೊದಲ ನೋಟಕ್ಕೆ ಬಗೆಹರಿಯದ ಸಮಸ್ಯೆ ಅನ್ನಿಸಿರುತ್ತೆ.ಆದರೆ ನಮ್ಮ ಮನಸ್ಥಿತಿಯನ್ನು ಬದಲಿಸಿ ನಿಧಾನಗತಿಯಲ್ಲಿ ನಿಭಾಯಿಸಲು ಅಣಿಯಾದಾಗ ಆ ಸಮಸ್ಯೆಯೇ ಇರುವುದಿಲ್ಲ.ಇದೇ ಸಂಕಲ್ಪದಂತೆ ಸಿಧ್ಧಿ!!

ಮೇಲಿನ ಎರಡೂ ಉದಾಹರಣೆಗಳಲ್ಲಿ ನಮ್ಮ ಸಂಕಲ್ಪವೇ ಕೆಲಸ ಮಾಡಿದ್ದು. ಈ Law of manifestation ಎನ್ನುವುದು ನಮ್ಮಲ್ಲಿರುವ Negative thoughts ಎನ್ನುವುದನ್ನು positive thoughts ನಿಂದ ಬದಲಾಯಿಸಿ ಅಲ್ಲಿಂದ ಮುಂದೆ ನಮ್ಮ ಸುಪ್ತ ಮನಸ್ಸು ನಾವು ಏನನ್ನು ಮಾಡಬೇಕು ಎನ್ನುವುದನ್ನು ನಿರ್ದೇಶಿಸಿ ಸಕಾರಾತ್ಮಕವಾಗಿ ಕಾರ್ಯ ಪ್ರವೃತ್ತರಾಗಲು ಪ್ರೇರೇಪಿಸುತ್ತದೆ.

ಇದಿಷ್ಟು Law of manifestation ಬಗ್ಗೆ ಸಂಕ್ಷಿಪ್ತವಾಗಿ.

# ಭಾರತೀಯ ಸಂವಿಧಾನಕ್ಕೆ 75ರ ಸಂಭ್ರಮ ಮಹಾನ್ ವೈಭವದ ಪಯಣ

– ಡಾ. ಅಶ್ವಿನಿ ಶಿವಾಲ್ ಚಿನ್ಮಯ್




ನಮ್ಮ ಭೂ ಗ್ರಹದ ಮೇಲಿರುವ ಪ್ರತಿ ಆರನೇ ವ್ಯಕ್ತಿಯು ಭಾರತೀಯನಾಗಿದ್ದು, ಆ ವ್ಯಕ್ತಿ ಪ್ರಾಚೀನ ಉತ್ಕೃಷ್ಟತೆ ಮತ್ತು ಆಧುನಿಕ ಸಾಂವಿಧಾನಿಕ ಗುರುತಿನ ಸಂಯೋಜಿತ ಸಾಂಸ್ಕೃತಿಕ ಉತ್ತರಾಧಿಕಾರಿ. ಹೀಗಾಗಿ ಪರಂಪರಾತಗ ಮೌಲ್ಯಗಳನ್ನು ಎತ್ತಿ ಹಿಡಿಯುವುದು ಪ್ರತಿಯೊಬ್ಬ ಭಾರತೀಯನ ಜವಾಬ್ದಾರಿಯಾಗಿದೆ.

– ನ್ಯಾಯಮೂರ್ತಿ ವಿ.ಆರ್.ಕೃಷ್ಣ ಅಯ್ಯರ್

ಸಂವಿಧಾನದ 75ನೇ ವಷಾಚರಣೆಯನ್ನು ಭಾರತ ಸಂಭ್ರಮಿಸುತ್ತಿರುವ ಈ ಹೊತ್ತಿನಲ್ಲಿ ಈ ಮೂಲಭೂತ ದಾಖಲೆಯ ಗಮನಾರ್ಯ ಪಯಣ ಮತ್ತು ಅದು ದೇಶವನ್ನು ಹೇಗೆ ರೂಪಿಸಿದ ಎಂಬ ಬಗ್ಗೆ ತಿಳಿಸಯುವುದು ಅತಿಮುಖ್ಯವಾಗಿದೆ. 1949ರ ನವೆಂಬರ್ 26 ರಂದು ಅಳವಡಿಸಿಕೊಳ್ಳಲಾದ ಭಾರತ ಸಂವಿಧಾನವು ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ತತ್ವಗಳೊಂದಿಗೆ ವೈವಿಧ್ಯಮಯ ಮತ್ತು ಚೈತನ್ಯಭರಿತ ಸಮಾಜದ ಆಕಾಂಕ್ಷೆಗಳಿಗೆ ಆಧಾರವಾಗಿ ನಿಂತಿದೆ. ಈ ಪಯಣವು ಕೇವಲ ಆಡಳಿತದ ಬಗ್ಗೆ ಅಲ್ಲ. ಪ್ರಜಾಪ್ರಭುತ್ವದ ಮೌಲ್ಯಗಳು, ಸ್ಥಿತಿಸ್ಥಾಪಕದ ಸವಾಲುಗಳು ಮತ್ತು ಒಳಗೊಂಡ ಪ್ರಗತಿಯಯ ನಿರಂತರ ಪರಿಶ್ರಮದ ಉದಯದ ಗಾಥೆಯೂ ಹೌದು.

ವಿಶ್ವದ ಅತ್ಯಂತ ಸುದೀರ್ಘ ಲಿಖಿತ ಸಂವಿಧಾನವು, ಸಾಮಾಜಿಕ–ರಾಜಕೀಯ ಸನ್ನಿವೇಶವು ಅಸ್ತವ್ಯಸ್ತವಾಗಿದ್ದ ಸಂದರ್ಭದಲ್ಲಿ ಅಸಂಖ್ಯಾತ ತಿರುವುಗಳು, ಹಠಾತ್ ಬದಲಾವಣೆಗಳು ಮತ್ತು ಅಡೆತಡೆಗಳನ್ನು ಎದುರಿಸುತ್ತಿದ್ದ ನಡುವೆಯೂ 1950ರಲ್ಲಿ ಜಾರಿಗೆ ಬಂದಿತು. ಇದು ಎಲ್ಲಾ ವಿರೋಧಾಭಾಸಗಳನ್ನು ನಿವಾರಿಸಿ ಮತ್ತು ಮಾತೃಭೂಮಿಯನ್ನು ಸಂಪೂರ್ಣ ವೈಭವದತ್ತ ಕೊಂಡೊಯ್ಯಲು ಶ್ರಮಿಸುತ್ತಾ ನಮ್ಮ ರಾಷ್ಟದ ಮೂಲಾಧಾರವಾಗಿ ನಿಂತಿದೆ. ದೇಶದ ಜನರಿಗೆ ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಖಾತರಿಪಡಿಸಲು ನಂತರದ ವರ್ಷಗಳಲ್ಲಿ ಸಾಂವಿಧಾನಿಕ ತತ್ವಗಳು ಮತ್ತು ಸಾಂವಿಧಾನಿಕ ಆಡಳಿತದ ಮುಖ್ಯ ಸಂಸ್ಥೆಗಳು ವಿಕಸವನ್ನು ಕಂಡಿವೆ. ನಮ್ಮ ಸಂವಿಧಾನದ ಅಧ್ಯಯನವನ್ನು ಸಾಗರದಾಳದಲ್ಲಿ ಧುಮುಕಿ ಮುತ್ತುಗಳನ್ನು ತಂದು ಸಂತಸ ಬೀರುವ ಉತ್ಸಾಹಿ ಸಾಹಸಿಗಳಿಗೆ ಹೋಲಿಸಬಹುದಾಗಿದ್ದು, ದಶಕಗಳಿಂದ ದಶಕಕ್ಕೆ ಪ್ರಾಜ್ಞತೆ ವ್ಯಕ್ತಗೊಳ್ಳುತ್ತುಲೇ ಸಾಗಿದೆ. ಈ ವಿವೇಕವು ಸಂವಿಧಾನದ ಮುನ್ನುಡಿಯಲ್ಲಿ ನಮ್ಮ ಪೂರ್ವಜರು ಪ್ರತಿಪಾದಿಸಿದ್ದ ಗುರಿಗಳನ್ನು ಸಾಧಿಸಲು ಪೂರಕವಾಗಿವೆ. ಭಾರತದ ಸಂವಿಧಾನದ ಉದಯದಿಂದ ಪ್ರಸ್ತುತದ ಕಾಲಘಟ್ಟದವರೆಗೆ ಭಾರತೀಯ ಸಂವಿಧಾನದ ಪಯಣದ ಬಗ್ಗೆ ಓದುಗರಿಗೆ ಪಕ್ಷಿನೋಟವನ್ನು ನೀಡುವುದು. ಈ ಲೇಖನದ ಉದ್ದೇಶವಾಗಿದೆ. ಭಾರತವು ತನ್ನ ಸಂವಿಧಾನದ ಪಯಣದ ಬಗ್ಗೆ ಓದುಗರಿಗೆ ಪಕ್ಷಿನೋಟವನ್ನು ನೀಡುವುದು ಈ ಲೇಖನದ ಉದ್ದೇಶವಾಗಿದೆ. ಭಾರತವು ತನ್ನ ಸಂವಿಧಾನದ 75 ವರ್ಷಗಳನ್ನು ಆಚರಿಸುತ್ತಿರುವ ಈ ಹೊಸ್ತಿಲಲ್ಲಿ, ಭಾರತೀಯ ಸಂವಿಧಾನದ ರಹಸ್ಯಗಳು ಮತ್ತು ಆಳದ ಬಗ್ಗೆ ಇನ್ನಷ್ಟು ತಿಳಿದುಕೊಳ್ಳುವ ಕುತೂಹಲವನ್ನು ಹುಟ್ಟುಹಾಕಲು ಮತ್ತು ಓದುಗರನ್ನು ಪ್ರೇರೇಪಿಸಲು ಗುರಿಯನ್ನು ಹೊಂದಿದೆ.

ಭಾರತೀಯ ಸಂವಿಧಾನವು ವಸಾಹತುಶಾಹಿ ಆಳ್ವಿಕೆ ಮತ್ತು ಭಾವನಾತ್ಮಕ ಸ್ವಾತಂತ್ರ್ಯ ಹೋರಾಟದಿಂದ ಹೊರಹೊಮ್ಮಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರಂತಹ ದಾರ್ಶನಿಕ ನಾಯಕರ ನೇತೃತ್ವದ ಕರಡು ಸಮಿತಿಯು ಭಾರತದ ವೈವಿಧ್ಯಮಯ ಸಾಂಸ್ಕೃತಿಕ, ಭಾಷಿಕ ಮತ್ತು ಧಾರ್ಮಿಕ ಚಿತ್ರಣವನ್ನು ಪ್ರತಿಬಿಂಬಿಸುವ ದಾಖಲೆಯನ್ನು ರಚಿಸಲು ಮುಂದಾಯಿತು. ಸಂವಿಧಾನ ನಿರೂಪಣೆ ಕರಡು ಸಮಿತಿ ನಿರೂಪಿಸಿದ ವ್ಯಾಪಕವಾದ ಚರ್ಚೆಗಳು, ಸಂವಾದಗಳು ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯಲು ಮತ್ತು ವೈಯಕ್ತಿಕ ಹಕ್ಕುಗಳನ್ನು ಸಂರಕ್ಷಿಸಲು ವಿನ್ಯಾಸಗೊಳಿಸಲಾದ ಸದೃಢ ಕಾನೂನು ಚೌಕಟ್ಟಿಗೆ ಅಡಿಪಾಯವನ್ನು ಹಾಕಿದವು. ಸಂವಿಧಾನದ ಪೀಠಿಕೆಯು ಅದರ ಚೈತನ್ಯವನ್ನು ಅಭಿವ್ಯಕ್ತಪಡಿಸುತ್ತದೆ. ಇದು ರಾಷ್ಟ್ರಕ್ಕೆ ಮಾರ್ಗದರ್ಶಿ ಬೆಳಕಾಗಿರುವ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಭ್ರಾತೃತ್ವದ ಬದ್ಧತೆಯನ್ನು ಒತ್ತಿಹೇಳುತ್ತದೆ ವರ್ಷಾನುವರ್ಷಗಳಲ್ಲಿ, ಈ ಮೌಲ್ಯಗಳನ್ನು ಪರೀಕ್ಷೆಗೆ ಒಳಪಡಿಸಲಾಗಿದೆ. ಸಂವಿಧಾನವು ತನ್ನ ಸ್ಥಿರತೆ/ಸ್ಥಿತಿಸ್ಥಾಪಕತ್ವವನ್ನು ಸಾಬೀತುಪಡಿಸಿದೆ. ಮೂಲಭೂತ ಹಕ್ಕುಗಳ ಸದೃಢ ರಕ್ಷಕವಾಗಿ ಉಳಿಯುವ ಜೊತೆಜೊತೆಗೇ ಅದು ಬದಲಾಗುತ್ತಿರುವ ಸಾಮಾಜಿಕ–ರಾಜಕೀಯ ಸನ್ನಿವೇಶಗಳಿಗೆ ಹೊಂದಿಕೊಂಡಿದೆ.

ಸಾಂವಿಧಾನಿಕ ಮೌಲ್ಯಗಳನ್ನು ಕಾಪಾಡುವಲ್ಲಿ ನಾಗರಿಕ ಸಮಾಜ

ಸಂಸ್ಥೆಗಳು ಪ್ರಮುಖ ಪಾತ್ರವಹಿಸಿವೆ. ಅವು ಮಾನವ ಹಕ್ಕುಗಳು, ಪರಿಸರ ಸುಸ್ಥಿರತೆ ಮತ್ತು ಸಾಮಾಜಿಕ ನ್ಯಾಯವನ್ನು ಪ್ರತಿಪಾದಿಸಿದ್ದು, ನಿರ್ಲಕ್ಷಿತರ ದನಿಯಾಗಿ ಮಾರ್ಗದರ್ಶನ ನೀಡುತ್ತಾ ನಿಗಾ ವಹಿಸಿವೆ. ಭಾರತದಲ್ಲಿನ ಚೈತನ್ಯಭರಿತ ನಾಗರಿಕ ಸಮಾಜವು ಸದಸ್ಯ ಪ್ರಜಾಪ್ರಭುತ್ವದ ಸ್ಫೂರ್ತಿಯನ್ನು ಪ್ರತಿಫಲಿಸುತ್ತಾ ಸಾಂವಿಧಾನಿಕ ಭರವಸೆಗಳನ್ನು ಸಾಕಾರಗೊಳಿಸುವಲ್ಲಿ ಸಂಘಟಿತ ಕ್ರಿಯೆಯ ಮಹತ್ವವನ್ನು ಒತ್ತಿ ಹೇಳುತ್ತದೆ. ಭಾರತದ ಶಕ್ತಿಯು ಅದರ ವೈವಿಧ್ಯತೆಯಲ್ಲಿದೆ. ಸಂವಿಧಾನವು ಸಾಂಸ್ಕೃತಿಕ ಮತ್ತು ಭಾಷಾ ಹಕ್ಕುಗಳನ್ನು ಒದಗಿಸುತ್ತಾ ಈ ವೈವಿಧ್ಯತೆಯನ್ನು ಗುರುತಿಸುತ್ತದೆ ಮತ್ತು ಸಂಭ್ರಮಿಸುತ್ತದೆ. ಕಳೆದ 75 ವರ್ಷಗಳಲ್ಲಿ, ಭಾರತವು ಭಾಷೆಗಳು, ಸಂಪ್ರದಾಯಗಳು ಮತ್ತು ಮತ್ತು ನಂಬಿಕೆಗಳ ಬಹುಹಂತದ ಸಂಕೀರ್ಣ ವ್ಯವಸ್ಥೆಯಾಗಿ ರಾಷ್ಟ್ರದ ರಚನೆಯನ್ನು ಸಂವಿಧಾನದ ವೈವಿಧ್ಯತೆಯು ಸಾಮಾಜಿಕ ಶ್ರೀಮಂತಗೊಳಿಸಿದೆ. ಸಂವಿಧಾನ ಶ್ರೀರಕ್ಷೆಯೊಂದಿಗೆ ಈ ವೈವಿಧ್ಯತೆಯು ಸಹಿಸಿಕೊಳ್ಳುವಿಕೆಯಲ್ಲ ಬದಲಾಗಿ ಸಂಭ್ರಮಾಚರಣೆಯಾಗಿದೆ.

ಈ ಪಯಣವು ಸವಾಲುಗಳಿಂದ ಹೊರತಾಗಿಲ್ಲ. ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸಿದ 1970ರ ದಶಕದ ತುರ್ತು ಪರಿಸ್ಥಿತಿಯ ಅವಧಿಯಿಂದ, ಪ್ರಸ್ತುತ - ನಡೆಯುತ್ತಿರುವ ಸಂಯುಕ್ತ ವ್ಯವಸ್ಥೆ ಮತ್ತು ಜಾತ್ಯತೀತತೆಯ ಬಗೆಗಿನ ಚರ್ಚೆಗಳವರೆಗೆ, ಸಂವಿಧಾನವು ಪ್ರಕ್ಷುಬ್ಧದ ಪರಿಸ್ಥಿತಿಗಳನ್ನು ನಿಭಾಯಿಸಿದೆ. ಭಾರತೀಯ ಪ್ರಜಾಪ್ರಭುತ್ವದ ಸ್ಥಿತಿಸ್ಥಾಪಕತ್ವ ಪ್ರಜ್ವಲಿಸಿದೆ. ನಾಗರಿಕರು ತಮ್ಮ ಹಕ್ಕುಗಳು ಮತ್ತು ಸ್ವಾತಂತ್ರ್ಯಗಳನ್ನು ರಕ್ಷಿಸಲು ಸತತವಾಗಿ ಎಚ್ಚರ ವಹಿಸಿದ್ದು ಆಗಾಗ್ಗೆ ಅನ್ಯಾಯದ ವಿರುದ್ಧ ಸಂವಿಧಾನವನ್ನು ಶ್ರೀರಕ್ಷೆಯಾಗಿ ಬಳಸಿದ್ದಾರೆ. 21 ಶತಮಾನವು ಆರ್ಥಿಕ ಅಸಮಾನತೆಗಳು, ಕೋಮು ಉದ್ವಿಗ್ನತೆ ಮತ್ತು ತಾಂತ್ರಿಕ ನಿಯಂತ್ರಕಗಳ ಅಗತ್ಯತೆ ಸೇರಿದಂತೆ ಹೊಸ ಸವಾಲುಗಳನ್ನು ತಂದಿದೆ. ಆದಾಗ್ಯೂ, ಆಡಳಿತಕ್ಕೆ ಪಾಲ್ಗೊಳ್ಳುವಿಕೆ ವಿಧಾನವನ್ನು ಪ್ರೋತ್ಸಾಹಿಸುತ್ತಾ ಸಂವಿಧಾನವು ಮಾತುಕತೆ ಮತ್ತು ಸುಧಾರಣೆಗೆ ಚೌಕಟ್ಟನ್ನು ಒದಗಿಸಿದೆ.

### ಭಾರತೀಯ ಸಂವಿಧಾನ ರಚನೆಯ ಹಾದಿಯಲ್ಲಿ ಮಹತ್ವದ ಘಟನೆಗಳು

ಭಾರತೀಯ ಸಂವಿಧಾನದ ರಚನೆಯು ಮಹತ್ವದ ಸರಣಿ ಘಟನೆಗಳ ಮೂಲಕ ಉದಯಿಸಿದ ಒಂದು ಪರಿವರ್ತಕನಾತ್ಮಕ ಪ್ರಕ್ರಿಯೆಯಾಗಿದ್ದು, ಪ್ರತಿಯೊಂದೂ ಘಟನೆ ನವ ಸ್ವತಂತ್ರ ರಾಷ್ಟ್ರ ನಿರ್ಮಾಣಕ್ಕೆ ದೃಢವಾದ ಪ್ರಜಾಪ್ರಭುತ್ವದ ಚೌಕಟ್ಟನ್ನು ಸ್ಥಾಪಿಸಲು ಕೊಡುಗೆ ನೀಡಿದವು. ಭಾರತದಲ್ಲಿ ಸಾಂವಿಧಾನಿಕ ಆಡಳಿತಕ್ಕೆ ಬುನಾದಿ ಹಾಕಿದ ಮತ್ತು ಗಣತಂತ್ರ ಸಂಯುಕ್ತ ಒಕ್ಕೂಟದ ರಚನೆಯನ್ನು ಪರಿಚಯಿಸಿದ ಭಾರತ ಸರ್ಕಾರದ ಕಾಯಿದೆ 1935ರೊಂದಿಗೆ ಈ ಪಯಣವು ಆರಂಭವಾಗಿ, ಸಂವಿಧಾನದ ಕುರಿತಾದ ನಂತರದ ಚರ್ಚೆಗಳ ಮೇಲೆ ಪ್ರಭಾವ ಬೀರುವ ನೀಲನಕ್ಷೆಯನ್ನು ಒದಗಿಸಿತು. ವಿಶ್ವ ಯುದ್ಧ II ಮತ್ತು ಸ್ವಾತಂತ್ರ್ಯಕ್ಕಾಗಿ ಬೇಡಿಕೆ ಹೆಚ್ಚಾದ ನಂತರ, ಬ್ರಿಟಿಷ್ ಸರ್ಕಾರವು 1946ರಲ್ಲಿ ಕ್ಯಾಬಿನೆಟ್ ಮಿಷನ್ ಯೋಜನೆಯನ್ನು ಪ್ರಾರಂಭಿಸಿದ್ದು, ಇದು ಸಂವಿಧಾನ ನಿರೂಪಣಾ ಸಭೆಯ ರಚನೆಗೆ ಕಾರಣವಾಯಿತು.

ಈ ಸಭೆಗೆ ಸಂವಿಧಾನದ ಕರಡು ರಚಿಸುವ ಕಾರ್ಯವನ್ನು ವಹಿಸಲಾಯಿತು ಮತ್ತು ಭಾರತದ ವೈವಿಧ್ಯಮಯ ಜನಸಂಖ್ಯೆಯನ್ನು ಪ್ರತಿನಿಧಿಸುವ ವಿವಿಧ ಪ್ರಾಂತ್ಯಗಳು ಮತ್ತು ರಾಜಪ್ರಭುತ್ವದ ರಾಜ್ಯಗಳ ಪ್ರತಿನಿಧಿಗಳನ್ನು ಈ ಸಭೆ ಒಳಗೊಂಡಿತ್ತು. ಇದರ ಮೊದಲ ಸಭೆಯು 1946ರ ಡಿಸೆಂಬರ್ 9 ರಂದು ನಡೆಯಿತು. ರಾಷ್ಟ್ರದ ಭವಿಷ್ಯದ ಆಡಳಿತದ ಬಗ್ಗೆ ಸಭೆಯಲ್ಲಿ ಮಹತ್ವದ ಚರ್ಚೆ ನಡೆಯಿತು.

1946ರ ಡಿಸೆಂಬರ್ 13ರಂದು ನಡೆದ ವಸ್ತುನಿಷ್ಠ ನಿರ್ಣಯದ ಅಂಗೀಕಾರವು ಒಂದು ಪ್ರಮುಖ ಸಂದರ್ಭವಾಗಿದ್ದು, ಈ ನಿರ್ಣಯವು ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಕ್ಕೆ ಆದ್ಯತೆ ನೀಡುತ್ತಾ, ಸಂವಿಧಾನದ ಮೂಲಭೂತ ಗುರಿಗಳನ್ನು ನಿರೂಪಿಸಿದ್ದು, ಇವು ಕರಡು ಪ್ರಕ್ರಿಯೆಯ ಉದ್ದಕ್ಕೂ ಮಾರ್ಗದರ್ಶಿ ತತ್ವಗಳಾಗಿವೆ. ಈ ಆದರ್ಶಗಳನ್ನು ಸಮಗ್ರ ಕಾನೂನು ಚೌಕಟ್ಟಿನಲ್ಲಿ ತರಲು 1947ರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಧ್ಯಕ್ಷತೆಯಲ್ಲಿ ಕರಡು ಸಮಿತಿಯನ್ನು ರಚಿಸಲಾಯಿತು. ಮುಂದಿನ ಎರಡು ವರ್ಷಗಳಲ್ಲಿ, ಸಮಿತಿ ಮತ್ತು ಸಂವಿಧಾನ ರಚನಾ ಸಭೆಯು ಆಡಳಿತ, ಹಕ್ಕುಗಳು ಮತ್ತು ಜವಾಬ್ದಾರಿಗಳ ವಿವಿಧ ಅಂಶಗಳ ಬಗ್ಗೆ ವ್ಯಾಪಕವಾದ ಚರ್ಚೆ ನಡೆಸಿದವು. ಸರ್ಕಾರದ ವಿನ್ಯಾಸ, ನ್ಯಾಯಾಂಗದ ಪಾತ್ರ ಮತ್ತು ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಯಂತಹ ವಿಷಯಗಳ ಬಗ್ಗೆ ತೀವ್ರ ಚರ್ಚೆ ನಡೆಯಿತು, ಇದು ಪ್ರಜಾಪ್ರಭುತ್ವದ ತತ್ವಗಳು ಮತ್ತು ಒಳಗೊಳ್ಳುವಿಕೆಗೆ ಸಭೆಯ ಬದ್ಧತೆಯನ್ನು ಪ್ರದರ್ಶಿಸಿತು. ವಿವಿಧ ಬಗೆಯ ಜನರ ಆಕಾಂಕ್ಷೆಗಳನ್ನು ಸಮತೋಲನಗೊಳಿಸುತ್ತಾ ವಸಾಹತುಶಾಹಿ ಆಳ್ವಿಕೆಯಿಂದ ಉಂಟಾದ ಐತಿಹಾಸಿಕ ಅನ್ಯಾಯಗಳನ್ನು ಪರಿಹರಿಸಲು ಸಂವಿಧಾನ ಸಭೆಯು ಸಂವಿಧಾನವನ್ನು ಸೂಕ್ಷ್ಮವಾಗಿ ರಚಿಸಿತು.

1949ರ ನವೆಂಬರ್ 26ರಂದು, ಸಂವಿಧಾನವನ್ನು ಅಂಗೀಕರಿಸಲಾಗಿದ್ದು, ಇದು ಭಾರತದ ಇತಿಹಾಸದಲ್ಲಿ ಮಹತ್ವದ ಕ್ಷಣವಾಗಿದೆ. ಭಾರತವನ್ನು ಸಾರ್ವಭೌಮ ರಾಷ್ಟ್ರವಾಗಿ ಸ್ಥಾಪಿಸುವಲ್ಲಿ ಈ ಘಟನೆಯ ಮಹತ್ವವನ್ನು ಪ್ರತಿಬಿಂಬಿಸಲು ಪ್ರತಿ ವರ್ಷ ಅಂದು 'ಸಂವಿಧಾನ ದಿನ' ಆಚರಿಸಲಾಗುತ್ತದೆ. ಸಂವಿಧಾನವು ಅಧಿಕೃತವಾಗಿ 1950 ಜನವರಿ 26 ರಂದು ಜಾರಿಗೆ ಬಂದಿತು. ಈ ದಿನವನ್ನು ಈಗ ಗಣರಾಜ್ಯ ದಿನ ಎಂದು ಆಚರಿಸಲಾಗುತ್ತದೆ. ಇದು ವಸಾಹತುಶಾಹಿ ಆಳ್ವಿಕೆಯಿಂದ ಸ್ವಯಂ ಆಡಳಿತಕ್ಕೆ ಮಾರ್ಪಟ್ಟ ಪರಿವರ್ತನೆಯ ಸಂಕೇತವಾಗಿದೆ.

ಸಂವಿಧಾನದ ಲಕ್ಷಣಗಳೆಂದರೆ ವೈಯಕ್ತಿಕ ಸ್ವಾತಂತ್ರ್ಯ ಪ್ರಮುಖ ಮತ್ತು ತಾರತಮ್ಯದ ವಿರುದ್ಧ ರಕ್ಷಣೆಯನ್ನು ಖಾತರಿಪಡಿಸುವ ಮೂಲಭೂತ ಹಕ್ಕು ಹಾಗೂ ಸಾಮಾಜಿಕ ಮತ್ತು ಆರ್ಥಿಕ ನ್ಯಾಯವನ್ನು ಸಾಧಿಸುವ ಗುರಿಯೆಡೆಗೆ ಸರ್ಕಾರಕ್ಕೆ ಮಾರ್ಗದರ್ಶನ ಮಾಡುವ ರಾಜ್ಯ ನೀತಿಯ ನಿರ್ದೇಶಕ ತತ್ವಗಳು. ಈ ಅಂಶಗಳು ರಾಜಕೀಯ ಪ್ರಜಾಪ್ರಭುತ್ವಕ್ಕೆ ಮಾತ್ರವಲ್ಲದೆ ಸಾಮಾಜಿಕ ಸಮಾನತೆಗೆ ಸಂವಿಧಾನದ ಬದ್ಧತೆಯನ್ನು ಒತ್ತಿಹೇಳಿವೆ. ವರ್ಷಗಳು ಸಂವಿಧಾನವು ನಿರಂತರ ಬದಲಾಗುತ್ತಿರುವ ಸಮಾಜ ರಾಜಕೀಯ ಪ್ರಕ್ರಿಯೆಗೆ ಹೊಂದಿಕೊಳ್ಳಬಲ್ಲದು ಎಂಬುದು ಸಾಬೀತಾಗಿದೆ.

1951ರಲ್ಲಿ ಮೊದಲ ಅಂಗೀಕರಿಸಲ್ಪಟ್ಟ ತಿದ್ದುಪಡಿಯು, ಸ್ವಾತಂತ್ರ್ಯ ಮತ್ತು ಅಲ್ಪಸಂಖ್ಯಾತ ಸಮುದಾಯಗಳ ಹಕ್ಕುಗಳ ಬಗ್ಗೆ ಹೆಚ್ಚಿನ ಸ್ಪಷ್ಟತೆಯ ಅಗತ್ಯಕ್ಕೆ ಪ್ರತಿಕ್ರಿಯೆಯಾಗಿದ್ದು, ಸಜೀವತೆ ಸಂವಿಧಾನದ ಪ್ರದರ್ಶಿಸಿದೆ. ದಶಕಗಳು ಕಳೆದಂತೆ, ಸಂವಿಧಾನವು ಹಲವಾರು ತಿದ್ದುಪಡಿಗಳಿಗೆ ಒಳಗಾಗಿದೆ. ಇದು ಭಾರತದ ವಿಕಸನಗೊಳ್ಳುತ್ತಿರುವ ಆಕಾಂಕ್ಷೆಗಳು ಮತ್ತು ಸವಾಲುಗಳನ್ನು ಪ್ರತಿಬಿಂಬಿಸುತ್ತದೆ. ಪ್ರತಿಯೊಂದು ತಿದ್ದುಪಡಿಯು ಲಿಂಗ ಸಮಾನತೆ, ಆರ್ಥಿಕ ಅಸಮಾನತೆಗಳು ಮತ್ತು ಪರಿಸರ ಕಾಳಜಿಗಳಂತಹ ಸಮಕಾಲೀನ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಂವಿಧಾನದ ಪ್ರಸ್ತುತತೆಯನ್ನು ಪುನರುಚ್ಚರಿಸಿದೆ.

ರಾಷ್ಟ್ರದ ವಿಭಿನ್ನ ಧ್ವನಿಗಳಿಗೆ ಅವಕಾಶ ಕಲ್ಪಿಸುವ ಜೊತೆಜೊತೆಗೇ ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾನತೆಯ ಮೌಲ್ಯಗಳನ್ನು ಎತ್ತಿಹಿಡಿಯುವ ದಾಖಲೆಯನ್ನು ರಚಿಸಬೇಕೆಂಬ ಸಂವಿಧಾನ ಕರ್ತೃಗಳ ದೂರದೃಷ್ಟಿ ಮತ್ತು ಸಮರ್ಪಣೆಗೆ ಭಾರತೀಯ ಸಂವಿಧಾನದ ರಚನೆಯು ಸಾಕ್ಷಿಯಾಗಿದೆ. ಇಂದು, ಭವಿಷ್ಯದ ಪೀಳಿಗೆಯ ಅಗತ್ಯಗಳಿಗೆ ಹೊಂದಿಕೊಳ್ಳುತ್ತಾ ಸಂವಿಧಾನವನ್ನು ಯಾವ ಆಶಯದೊಂದಿಗೆ ಸ್ಥಾಪಿಸಲಾಗಿತ್ತೋ ಆ ಆದರ್ಶಗಳನ್ನು ಆಚರಿಸುತ್ತಾ, ಹೆಚ್ಚು ಒಳಗೊಂಡ ಮತ್ತು ಸಮಸಮಾಜದ ಕಡೆಗೆ ಸಾಗಲು ಭಾರತಕ್ಕೆ ಮಾರ್ಗದರ್ಶನ ನೀಡುವುದನ್ನು ಮುಂದುವರಿಸಿದೆ.

### ಸಂವಿಧಾನದ ಮೌಲ್ಯಗಳ ವಿಕಸನ

ಸಂವಿಧಾನವನ್ನು ಜನರ ಜೀವನ ಮತ್ತು ಆಕಾಂಕ್ಷೆಗಳಿಂದ ರೂಪಿಸಬೇಕು ಮತ್ತು ಇತರರಿಂದ ಎರವಲು ಪಡೆಯಬಾರದು. ಸಂವಿಧಾನವು ಉಪಯುಕ್ತ ಮತ್ತು ಶಾಶ್ವತವಾಗಿರಲು ಅದರ ಮೂಲಭೂತ ತತ್ವಗಳು ಮತ್ತು ಮೌಲ್ಯಗಳು ನಿರ್ದಿಷ್ಟ ಸಂಸ್ಕೃತಿ ಮತ್ತು ಕಾಲಕ್ಕೆ ಅನುಗುಣವಾಗಿರಬೇಕು" ಎಂದು ಕಾನೂನು ವಿದ್ವಾಂಸ ಹಾರ್ವೆ ವಾಕರ್ ಹೇಳಿದ್ದಾರೆ. ಸಂವಿಧಾನದಿಂದ ಹೊರಹೊಮ್ಮುವ ಮೌಲ್ಯಗಳು ಮತ್ತು ಸಂಸ್ಥೆಗಳು ಕಾಲಕ್ಕೆ ತಕ್ಕಂತೆ ನಡೆಯುವುದು ಬಹಳ ಮುಖ್ಯ.

ಸಂವಿಧಾನವು ಕಾಲಕಾಲಕ್ಕೆ ತಿದ್ದುಪಡಿ ಮಾಡಬಹುದಾದ ಕಾನೂನಾತ್ಮಕ ದಾಖಲೆ ಎಂದು ಪರಿಗಣಿಸಲ್ಪಟ್ಟಿರುವುದರಿಂದ, ಕಾಲದೊಂದಿಗೆ ವಿಕಸನಗೊಳ್ಳುವ ಸಂಕೀರ್ಣ ಸಮಸ್ಯೆಗಳನ್ನು ಪರಿಹರಿಸಲು ಇದು ಅವಕಾಶ ನೀಡುತ್ತದೆ. ಸಂವಿಧಾನವನ್ನು ಹೊಂದಿಕೊಳ್ಳುವಂತೆ ಮಾಡುವ ವಿಷಯವನ್ನು ಸಹ ಭಾರತೀಯ ಸಾಂವಿಧಾನಿಕ ಚರ್ಚೆಗಳು ಪ್ರಬಲವಾಗಿ ವಿಶ್ಲೇಷಿಸಿವೆ. 'ಸಂವಿಧಾನದ ಬದಲಾವಣೆಗೆ ಒಗ್ಗಿಕೊಳ್ಳದ ಸ್ವಭಾವವು ಆಡಳಿತವನ್ನು ಅತ್ಯಂತ ಕೀಳಾಗಿ ಕಾಣಲು ಮೂಲವಾಗುತ್ತವೆ' ಎಂಬ ಎವಿಡೈಸಿಯವರ ಮಾತಿನ ಬಗ್ಗೆಯೂ ಭಾರಿ ಚರ್ಚೆ ನಡೆಯಿತು. ವರ್ಷಾನುಕ್ರಮದಲ್ಲಿ ಭಾರತೀಯ ಸಂವಿಧಾನದಲ್ಲಾಗಿರುವ ತಿದ್ದುಪಡಿಗಳು ಅದರ ಕರ್ತೃಗಳು ನೀಡಿದ ಮಾದರಿಗಳಂತೆಯೇ ಅನೇಕ ಮಹತ್ವದ ಬದಲಾವಣೆಗಳನ್ನು ತಂದಿವೆ.

ಮೂಲಭೂತ ಹಕ್ಕುಗಳು, ರಾಜ್ಯ ನೀತಿಯ ನಿರ್ದೇಶಕ ತತ್ವಗಳು, ಮೂಲಭೂತ ಕರ್ತವ್ಯಗಳು, ಏಳನೇ ಪರಿಚ್ಛೇದಲ್ಲಿನ ಪಟ್ಟಿಗಳು, ತುರ್ತು ಪರಿಸ್ಥಿತಿ ನಿಬಂಧನೆಗಳು, ರಾಜ್ಯಗಳ ಪುರ್ರಚನೆ ಹಾಗೂ ಭಾಷೆ, ಚುನಾವಣೆಗಳು ಮತ್ತು ಪೀಠಿಕೆಯಂತಹ ಇತರ ಪ್ರಮುಖ ವಿಷಯಗಳ ಮೇಲೆ ಈ ತಿದ್ದುಪಡಿಗಳ ಪ್ರಭಾವ ಬೀರಿತು.

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಅಮೇರಿಕದ ಸಂವಿಧಾನವು ಒಟ್ಟಾರೆಯಾಗಿ ಇಪ್ಪತ್ತೇಳು ಬಾರಿ ತಿದುಪಡಿಯಾಗಿದೆ. ಆಸ್ಟ್ರೇಲಿಯಾದ ಸಂವಿಧಾನದ ಎಂಟು ಬಾರಿ ತಿದ್ದುಪಡಿಯಾಗಿದೆ, ಅದರೆ ಭಾರತೀಯ ಸಂವಿಧಾನವು ಬೃಹತ್ ಗಾತ್ರದಲ್ಲಿದೆ ಮತ್ತು ಅಲ್ಪ ವರ್ಷಗಳಿಂದ ಅಸ್ತಿತ್ವದಲ್ಲಿದ್ದರೂ ಕೂಡ ನೂರಕ್ಕೋ ಹೆಚ್ಚು ಬಾರಿ ತಿದ್ದುಪಡಿಯಾಗಿದೆ. ಇದರಿಂದ ನಾವು ಏನು ತಿಳಿಯಬಹುದು? ನಮ್ಮ ಸಂವಿಧಾನವು ಹೊಂದಿಕೊಳ್ಳುವ ಸ್ವರೂಪದ್ದಾಗಿವೆ ಮತ್ತು ಕಾಲಕ್ಕೆ ತಕ್ಕಂತೆ ತಿದ್ದುಪಡಿಯಾಗಬಲ್ಲ ದಾಖಲೆಯಾಗಿದೆ. ನಮ್ಮ ಸಂವಿಧಾನವು ಅಪಾರ ಆಂತರಿಕ ಶಕ್ತಿಯಿಂದ ರೂಪಿಸಿದ ಮೂಲಭೂತ ಮೌಲ್ಯಗಳಿಗೆ ಧಕ್ಕೆಯಾಗದಂತೆ ಈ ವರ್ಷಗಳಲ್ಲಿ ಎಲ್ಲಾ ತಿದ್ದುಪಡಿಗಳನ್ನು ಒಳಗೊಂಡಿದೆ ಎಂಬುದನ್ನು ಗಮನಿಸುವುದು ಸೂಕ್ತವಾಗಿದೆ.

ಇದನ್ನು ಹೇಳಿದ ಮೇಲೆ ಉದ್ಭವಿಸುವ ಪ್ರಶ್ನೆ, "ನಾವು ನಮ್ಮ ಸಂವಿಧಾನವನ್ನು ಸಂಪೂರ್ಣವಾಗಿ ಬದಲಿಸಬಹುದೇ?" ಎಂಬುದು ಇದಕ್ಕೆ ಉತ್ತರ ಕೇಶವಾನಂದ ಭಾರತಿ ವರ್ಸಸ್ ಕೇರಳ ರಾಜ್ಯ (1973) ಪ್ರಕರಣದಲ್ಲಿನ ಮಹತ್ವದ ತೀರ್ಪಿನಲ್ಲಿದೆ.

ಈ ಹೆಗ್ಗುರುತಿನ ಪ್ರಕರಣವು ಸಂವಿಧಾನಕ್ಕೆ ಸಂಸತ್ತು ತಿದ್ದುಪಡಿ ಮಾಡಬಹುದಾದರೂ, ಅದರ ಮೂಲಭೂತ ಚೌಕಟ್ಟನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸುತ್ತಾ 'ಮೂಲ ರಚನೆ' ಸಿದ್ಧಾಂತವನ್ನು ಸ್ಥಾಪಿಸಿದೆ. ಆ ಮೂಲಭೂತ ಹಕ್ಕುಗಳು ಮತ್ತು ಪ್ರಜಾಪ್ರಭುತ್ವದ ತತ್ವಗಳು,

ಅಧಿಕಾರಗಳು ಪ್ರತ್ಯೇಕತೆ ಮತ್ತು ಸಂಯುಕ್ತ ವ್ಯವಸ್ಥೆಯ ಈ ಮೂಲಭೂತ ರಚನೆಯ ಭಾಗವಾಗಿದೆ ಎಂಬುದನ್ನು ಸುಪ್ರೀಂಕೋರ್ಟ್ ಅಧಿಕೃತವಾಗಿ ಹೇಳಿದೆ. ಮಿನರ್ವಾ ಮಿಲ್ಸ್ ಲಿಮಿಟೆಡ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ (1980) ಪ್ರಕರಣದಲ್ಲೂ ಮೂಲಭೂತ ಹಕ್ಕುಗಳು ಮತ್ತು ನಿರ್ದೇಶಕ ತತ್ವಗಳ ನಡುವಿನ ಸಮತೋಲನದ ಬಗ್ಗೆ ಒತ್ತಿ ಹೇಳುತ್ತಾ 'ಮೂಲ ರಚನೆ'ಯ ಸಿದ್ಧಾಂತವನ್ನು ಪುರನುಚ್ಚರಿಸಲಾಗಿದ. ಸಮತೋಲವನ್ನು ಉಲ್ಲಂಘಿಸುವ ತಿದ್ದುಪಡಿಗಳು ಅಸಂವಿಧಾನಿಕವಾಗಿದೆ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಮನೇಕಾ ಗಾಂಧಿ ವರ್ಸಸ್ ಯೂನಿಯನ್ ಆಫ್ ಇಂಡಿಯಾ (1978) ಪ್ರಕರಣದ ತೀರ್ಪುನಲ್ಲಿ ಉಲ್ಲೇಖಿಸಬಹುದಾದ ಮತ್ತೊಂದು ಮಹತ್ವದ ತೀರ್ಪಾಗಿದೆ. ಈ ಪ್ರಕರಣದಲ್ಲಿ, ಜೀವನ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕನ್ನು ಖಾತರಿಪಡಿಸುವ ಪರಿಚ್ಛೇದ 21ರ ವ್ಯಾಖ್ಯಾನವನ್ನು ಸುಪ್ರೀಂ ಕೋರ್ಟ್ ವಿಸ್ತರಿಸಿದೆ. ಬದುಕುವ ಹಕ್ಕು ಕೇವಲ ಅಸ್ತಿತ್ವದ ಬಗ್ಗೆ ಅಲ್ಲ, ಘನತೆಯಿಂದ ಬದುಕುವ ಹಕ್ಕನ್ನು ಒಳಗೊಳ್ಳುತ್ತದೆ ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಿದೆ. ಇದು ಜೀವನ ಮತ್ತು ಸ್ವಾತಂತ್ರ್ಯದ ಹಕ್ಕನ್ನು ಸಮಗ್ರ ಭಾಗವಾಗಿಸಿದ್ದು, ಮೂಲಭೂತ ಹಕ್ಕುಗಳ ಬಗ್ಗೆ ವಿಶಾಲವಾದ ಅರ್ಥೈಸುವಿಕೆ ಸಾಧ್ಯವಾಗಿಸಿದೆ.

ಕಾಲಕ್ರಮೇಣ, ಜೀವನ ಮತ್ತು ಸ್ವಾತಂತ್ರ್ಯದ ಹಕ್ಕುಗಳ ಕುರಿತಾದ ನ್ಯಾಯಶಾಸ್ತ್ರದ ವ್ಯಾಪ್ತಿಯ ಖಾಸಗಿತನದ ಹಕ್ಕು, ಆರೋಪಿಯ ತ್ವರಿತ ವಿಚಾರಣೆಯ ಹಕ್ಕು, ನ್ಯಾಯಯುತ ವಿಚಾರಣೆಯ ಹಕ್ಕು, ಉಚಿತ ಕಾನೂನು ನೆರವು, ಕಿರುಕುಳ ವಿರುದ್ಧದ ಹಕ್ಕುಗಳು, ಕೈಕೋಳ, ಅಕ್ರಮ ಬಂಧನ, ಮಾಲಿನ್ಯ ಮುಕ್ತ ಪರಿಸರದ ಹಕ್ಕು, ಶಿಕ್ಷಣ ಮತ್ತು ಆರೋಗ್ಯದ ಹಕ್ಕು., ಹೀಗೆ ವಿವಿಧ ಹಕ್ಕುಗಳು ಸೇರ್ಪಡೆ ಮೂಲಕ ಹೆಚ್ಚು ವಿಸ್ತಾರವಾಯಿತು.

ಸಂವಿಧಾನದ ಸುವರ್ಣ ತ್ರಿಕೋನ ಎಂದು ಸಾಮಾನ್ಯವಾಗಿ ಉಲ್ಲೇಖಿಸಲಾಗುವ ಸಂವಿಧಾನದ 14, 19 ಮತ್ತು 21ನೇ ವಿಧಿಗಳು ಭಾರತೀಯ ಸಮಾಜದ ಮಹತ್ವದ ಮತ್ತು ಪ್ರಮುಖ ವರ್ಗಗಳಿಗೆ ಪರಿಹಾರವನ್ನು ಒದಗಿಸುವ ಪೂರಕವಾಗಿದೆ. ವಿಶಾಖಾ ವರ್ಸಸ್ ರಾಜಾಸ್ತಾನ ಸರ್ಕರ (1997) ಪ್ರಕರಣದಲ್ಲಿ ಸುಪ್ರೀಂ ಕೋರ್ಟ್, ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ಮಾರ್ಗಸೂಚಿಗಳನ್ನು ನೀಡಿತ್ತು. ಅಂತಹ ಕಿರುಕುಳವು ಸಂವಿಧಾನ ವಿಧಿ 14, 19 ಮತ್ತು 21ರ ಅಡಿಯಲ್ಲಿ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂದು ಗುರುತಿಸಿತು. ಭಾರತದಲ್ಲಿ ಕಾರ್ಯ ಸ್ಥಳದಲ್ಲಿ ಮಹಿಳೆಯರ ಹಕ್ಕುಗಳು ಮತ್ತು ಕೆಲಸದ ಸ್ಥಳದ ಸುರಕ್ಷತೆಗೆ ಈ ತೀರ್ಪಿ ಮೂಲಾಧಾರವಾಯಿತು.

ಭಾರತೀಯ ಸಮಾಜದಲ್ಲಿ ಮಹಿಳೆಯರ ಹಕ್ಕುಗಳನ್ನು ಎತ್ತಿಹಿಡಿದಿರುವ ಮತ್ತೊಂದು ಪ್ರಮುಖ ತೀರ್ಪು ಶಯಾರಾ ಬಾನೋ ವರ್ಸಸ್ ಯೂನಿಯನ್ ಆಫ್ ಇಂಡಿಯಾ (2017) ಪ್ರಕರಣಕ್ಕೆ ಸಂಬಂಧಿತವಾಗಿದ್ದು, ತಕ್ಷಣದ ತ್ರಿವಳಿ ತಲಾಖ್ (ತಲಾಕ್–ಎ–ಬಿದ್ದಾ) ಪದ್ಧತಿಯು ಅಸಾಂವಿಧಾನಿಕ ಎಂದು ಸುಪ್ರೀಂ ಕೋರ್ಟ್ ಘೋಷಿಸುತ್ತಾ, ಇದು ಮುಸ್ಲಿಂ ಮಹಿಳೆಯರ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಮತ್ತು ಲಿಂಗ ನ್ಯಾಯದ ತತ್ವಗಳಿಗೆ ವಿರುದ್ಧವಾಗಿದೆ ಎಂಬುದನ್ನು ಸಾರಿತು.

ನಮ್ಮ ಸಮಾಜದ ವೈವಿಧ್ಯತೆಯನ್ನು ಗೌರವಿಸಲು ಹಾಗೂ ಒಳಗೊಂಡ ಮತ್ತು ಸಮಗ್ರ ಸಂಸ್ಕೃತಿಯ ಪ್ರಾಮುಖ್ಯತೆಯನ್ನು ಒತ್ತಿ ಹೇಳಲು, ದೀರ್ಘಾವಧಿಯಿಂದ ದುರ್ಬಲ ಸಮುದಾಯಕ್ಕೆ ಸೇರಿರುವ ವ್ಯಕ್ತಿಗಳ ಘನತೆಯನ್ನು ಎತ್ತಿಹಿಡಿಯಲು ಸಾಂವಿಧಾನಿಕ ತತ್ವಗಳನ್ನು ನಿಯಮಿತವಾಗಿ ಸಾಧನಗಳಾಗಿ ಬಳಸಲಾಗುತ್ತದೆ. ನವತೇಜ್ ಸಿಂಗ್ ಜೋಹರ್ ವರ್ಸಸ್ ಯೂನಿಯನ್ ಆಫ್ ಇಂಡಿಯಾ (2018) ಪ್ರಕರಣದ ತೀರ್ಪುಗಳಲ್ಲಿ, ಭಾರತೀಯ ದಂಡ ಸಂಹಿತೆಯ ನಿಯಮ 377 ಅನ್ನು ಉಲ್ಲೇಖಿಸುವ ಮೂಲಕ ಸರ್ವೋಚ್ಚ ನ್ಯಾಯಾಲಯವು ಸಮ್ಮತದ ಸಲಿಂಗಕಾಮಿ ಕ್ರಿಯೆಗಳು ಅಪರಾಧವಲ್ಲ ಎಂದು ಹೇಳಿದೆ.

ಸಮಾನತೆ ಮತ್ತು ತಾರತಮ್ಯ ಮಾಡದಿರುವ ಹಕ್ಕನ್ನು ಎತ್ತಿಹಿಡಿಯುತ್ತಾ, ಲೈಂಗಿಕ ದೃಷ್ಟಿಕೋನವು ಮಾನವನ ಆಂತರಿಕ ಅಂಶವಾಗಿದೆ ಎಂದು ತೀರ್ಪು ಒತ್ತಿ ಹೇಳಿದೆ. ಈ ತೀರ್ಪನ್ನು ಸಮಜದ ಬಹುತೇಕರು ಸ್ವಾಗತಿಸಿದ್ದು, ಎಲ್‌ಜಿಬಿಟಿಕ್ಯು + ಜನರ ಹಕ್ಕುಗಳ ಬಗ್ಗೆ ಜನಸಾಮಾನ್ಯರ ಕಲ್ಪನೆಗಳನ್ನು ಈ ತೀರ್ಪು ಆಮೂಲಾಗ್ರವಾಗಿ ಬದಲಿಸಿತು.

ಜ್ಞಾನದ ಆರ್ಥಿಕತೆ ಮತ್ತು ಇಂದಿನ ಮಾಹಿತಿಯ ಯುಗದಲ್ಲಿ ಸಾಂವಿಧಾನಿಕ ತತ್ವಗಳ ಪರಿಕರಗಳಿಂದ ವಿಕಸನಗೊಂಡ ಗೌಪ್ಯತೆಗೆ ಸಂಬಂಧಿಸಿದ ಕಾನೂನು, ಸಮಕಾಲೀನ ಕಾನೂನುಗಳ ಮೇಲೆ ರೂಪಿಸಲ್ಪಟ್ಟ ಒಂದು ತಾರ್ಕಿಕ ಅಡಿಪಾಯವಾಗಿದೆ, ನ್ಯಾಯಮೂರ್ತಿ ಕೆ.ಎಸ್. ಪುಟ್ಟಸ್ವಾಮಿ ವರ್ಸಸ್ ಯೂನಿಯನ್ ಆಫ್ ಇಂಡಿಯಾ (2017) ರಲ್ಲಿ ಸುಪ್ರೀಂ ಕೋರ್ಟ್ ಸಂವಿಧಾನದ ವಿಧಿ 21ರ ಅಡಿಯಲ್ಲಿ ಖಾಸಗಿತನದ ಹಕ್ಕನ್ನು ಮೂಲಭೂತ ಹಕ್ಕು ಎಂದು ಗುರುತಿಸಿದೆ.

370ನೇ ವಿಧಿಯ ರದ್ದತಿಯು ಸಾಂವಿಧಾನದ ಮಾನದಂಡವನ್ನು ಮಾರ್ಪಡಿಸುವ ಶಕ್ತಿ ಹೊಂದಿದ ಮತ್ತೊಂದು ಪೂರ್ವಕಾಲದ ಕ್ಷಣವಾಗಿದೆ. ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ಭಾರತೀಯ ಸಂವಿಧಾನದ 370ನೇ ವಿಧಿಯನ್ನು ಹಿಂತೆಗೆದುಕೊಳ್ಳುವ ಭಾರತದ ರಾಷ್ಟ್ರಪತಿಯವರ ಅಧಿಕಾರವನ್ನು ಸರ್ವಾನುಮತದಿಂದ ದೃಢಪಡಿಸಿತು.

ಆಗಸ್ಟ್ 2019ರಲ್ಲಿ ಘೋಷಿಸಲ್ಪಟ್ಟ ಈ ರದ್ಧತಿಯ ಬಳಿಕ ಹಿಂದಿನ

ಸ್ವಾಭಿಮಾನಿ ಸಹಕಾರಿ

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 34
Licensed to post without Prepayment License No. PMG BG/WPP-384/2023-2025.

ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಜೆ&ಕೆ ಮತ್ತು ಲಡಾಖ್ ಎಂಬ ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಲಾಯಿತು ಮತ್ತು ರದ್ದತಿಯಿಂದಾಗಿ ರಾಜ್ಯವು ತನ್ನ ವಿಶೇಷ ಸ್ಥಾನಮಾನವನ್ನು ಕಳೆದುಕೊಂಡಿತು. ಆಂತರಿಕ ಪ್ರಕ್ಷುಬ್ಧತೆ ಮತ್ತು ಬಹ್ಯಾ ಬೆದರಿಕೆಗಳಿದ್ದ ಅವಧಿಯಲ್ಲಿ ಹಿಂದಿನ ರಾಜಪ್ರಭುತ್ವದ ಸಾಮ್ರಾಜ್ಯಗಳಿಗೆ ಭಾರತದ ಒಕ್ಕೂಟ ವ್ಯವಸ್ಥೆ ಪ್ರವೇಶಕ್ಕೆ ಅನುವು ಮಾಡಿಕೊಡಲು ಜಾರಿಗೆ ತರಲಾಗಿದ್ದ ಸಂವಿಧಾನ ವಿಧಿ 370 ಕೇವಲ ತಾತ್ಕಾಲಿಕ ಕ್ರಮವಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಭಾರತಕ್ಕೆ ಸೇರ್ಪಡೆಯಾದ ಮೇಲೆ ಜಮ್ಮು ಮತ್ತು ಕಾಶ್ಮೀರವು ಸಾರ್ವಭೌಮತ್ವದ ಯಾವುದೇ ಅಂಶವನ್ನು ಉಳಿಸಿಕೊಂಡಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಈ ಮೇಲೆ ತಿಳಿಸಿದಂತೆ, ಕಳೆದ 75 ವರ್ಷಗಳಲ್ಲಿ ಸಂವಿಧಾನವನ್ನು ಅರ್ಥೈಸುವಲ್ಲಿ ಮತ್ತು ಅದರ ವ್ಯಾಪ್ತಿಯನ್ನು ವಿಸ್ತರಿಸುವಲ್ಲಿ ನ್ಯಾಯಾಂಗವು ನಿರ್ಣಾಯಕ ಪಾತ್ರವನ್ನು ವಹಿಸಿದೆ. ಮಹತ್ವದ ತೀರ್ಪುಗಳು ದುರ್ಬಲ ಸಮುದಾಯಗಳ ಹಕ್ಕುಗಳನ್ನು ಎತ್ತಿ ಹಿಡಿದಿವೆ, ಲಿಂಗ ಸಮಾನತೆಯನ್ನು ಬಲಪಡಿಸಿವೆ ಮತ್ತು ವರ್ಷಾನುವರ್ಷಗಳಲ್ಲಿ ಪರಿಸರ ಸಂರಕ್ಷಣೆಯನ್ನು ಖಾತರಿಪಡಿಸಿವೆ. ಸಂವಿಧಾನದ ಕ್ರಿಯಾತ್ಮಕತೆಯ ಸ್ವರೂಪವು ಅದು ಸಾಮಾಜಿಕ ಅಗತ್ಯಗಳೊಂದಿಗೆ ಹೊರಹೊಮ್ಮಲು ಅನುವು ಮಾಡಿದ್ದು ಅದನ್ನು ಸಮಕಾಲೀನ ಮೌಲ್ಯಗಳು ಅನುಕರಣಿಸುವ ಜೀವಂತ ದಾಖಲೆಯನ್ನಾಗಿಸಿದೆ.

ಈ ಮೇಲೆ ಚರ್ಚಿಸಿದ ತೀರ್ಪುಗಳ ಭಾರತೀಯ ಸಂವಿಧಾನದ ಕ್ರಿಯಾಶೀಲ ರೂಪವನ್ನು ಮತ್ತು ಅದರ ಸಾಮರ್ಥ್ಯವನ್ನು ಪ್ರತಿಫಲಿಸುವ ಜೊತೆಗೆ ವೈವಿಧ್ಯಮಯ ಸಮಾಜದಲ್ಲಿ ಮೂಲಭೂತ ಹಕ್ಕುಗಳ ರಕ್ಷಣೆ ಮತ್ತು ವಿಸ್ತರಣೆಯಂತಹ ಸಮಕಾಲೀನ ಸಮಸ್ಯೆಗಳಿಗೆ ಹೊಂದಿಕೊಳ್ಳುವ ಸಾಮರ್ಥ್ಯ ಪ್ರತಿಬಿಂಬಿಸುತ್ತದೆ.

**ಉಪಸಂಹಾರ :**

ಭಾರತದ ಸಂವಿಧಾನವು ಪರೀಕ್ಷೆಯ ಸಂದರ್ಭಗಳಲ್ಲಿ ಜೊತೆಜೊತೆಗೆ ವಿಜಯದ ವೇಳೆಯಲ್ಲೂ ದೇಶಕ್ಕೆ ಮಾರ್ಗದರ್ಶನ ನೀಡುವ ಆಶಾಕಿರಣವಾಗಿದೆ. ಅದರ 75 ವರ್ಷಗಳ ಪಯಣವು ಪ್ರಜಾಪ್ರಭುತ್ವದ ಅಮಿತ ಉತ್ಸಾಹ ಮತ್ತು ನ್ಯಾಯದ ನಿರಂತ ಅನ್ವೇಷಣೆಗೆ ಸಾಕ್ಷಿಯಾಗಿದೆ. ಈ 75ನೇ ವಾರ್ಷಿಕೋತ್ಸವವು ಕೇವಲ ಸಂಭ್ರಮಾಚರಣೆಯ ಕ್ಷಣವಲ್ಲ ಇದು ಕಾರ್ಯಪ್ರವೃತ್ತರಾಗುವ ಕರೆಯೂ ಆಗಿದೆ.

ನಾಗರಿಕರು, ನೀತಿ ನಿರೂಪಕರು ಮತ್ತು ನಾಗರಿಕ ಸಮಾಜವು ಸಾಂವಿಧಾನಿಕ ಮೌಲ್ಯಗಳನ್ನು ಎತ್ತಿಹಿಡಿಯಲು ಮತ್ತು ಅಸಮಾನತೆಗಳನ್ನು ಪರಿಹರಿಸಲು ಪರಸ್ಪರ ಸಹಕಾರದಿಂದ ಕೆಲಸ ಮಾಡಬೇಕು. ವ್ಯಕ್ತಿಗಳು ಮತ್ತು ಸಮುದಾಯಗಳು ತಮ್ಮ ಹಕ್ಕುಗಳನ್ನು ಪಡೆಯಲು ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳಲಿ ಅರ್ಥಪೂರ್ಣವಾಗಿ ಭಾಗವಹಿಸುವಂತಾಗಲು ಅವರನ್ನು ಸಬಲಗೊಳಿಸಲು ಸಾಂವಿಧಾನಿಕ ಹಕ್ಕುಗಳ ಬಗ್ಗೆ ಶಿಕ್ಷಣ ಮತ್ತು ಅರಿವು ನೀಡುವುದು ಅತ್ಯಗತ್ಯ. ಭಾರತವು ಈ ಮಹತ್ವದ ಘಟ್ಟದಲ್ಲಿರುವಾಗ, ಸಂವಿಧಾನದ ಕೊಡುಗೆಗಳು ನಾಗರಿಕರ ಹಿನ್ನಲೆ ಏನೇ ಇರಲಿ, ಅವರನ್ನು ಮೇಲಕ್ಕೆತ್ತುವುದನ್ನು ಪ್ರೇರೇಪಿಸುತ್ತದೆ ಎಂಬುದನ್ನು ಖಾತರಿಪಡಿಸುತ್ತಾ, ಸಂವಿಧಾನದಲ್ಲಿ ಪ್ರತಿಪಾದಿಸಲಾದ ತತ್ವಗಳಿಗೆ ನಮ್ಮ ಬದ್ಧತೆಯನ್ನು ಪುನರುಚ್ಚರಿಸುವುದು ಅತ್ಯಗತ್ಯವಾಗಿದೆ. ಈ ಪಯಣ ನಿರಂತರವಾಗಿದ್ದು ಸಂವಿಧಾನದಲ್ಲಿರುವ ತತ್ವಗಳನ್ನು ಭವಿಷ್ಯದ ಪೀಳಿಗೆಗಳಗೆ ಪ್ರೇರಣೆ ನೀಡುವುದನ್ನು ಮುಂದುವರಿಸಬೇಕಿದೆ.

ಹವಾಮಾನ ಬದಲಾವಣೆ, ಡಿಜಿಟಲ್ ಹಕ್ಕುಗಳು ಮತ್ತು ಸಾಮಾಜಿಕ ಸಮಾನತೆಯಂತಹ ಹೊರಹೊಮ್ಮುತ್ತಿರುವ ಸವಾಲುಗಳನ್ನು ಪರಿಣಾಮಕಾರಿಯಾಗಿ ಎದುರಿಸಲು ಸಂವಿಧಾನದ ಒಳಗೊಳ್ಳುವಿಕೆ ಮತ್ತು ಸುಧಾರಣೆಯ ತುರ್ತು ಅಗತ್ಯವಿದೆ. ಸಂಪೂರ್ಣ ವೈಭವದತ್ತ ಪಯಣವು ಬದ್ಧತೆ, ಸ್ಥಿತಿಸ್ಥಾಪಕತ್ವ ಹಾಗೂ ನ್ಯಾಯ ಮತ್ತು ಸಮಸಮಾಜದ ಭರವಸೆಯಲ್ಲಿನ ಅಚಲ ನಂಬಿಕೆಯ ಸಮಗ್ರ ಪ್ರಯತ್ನವಾಗಿದೆ.

**ಕೇಂದ್ರ ಕಛೇರಿ :** "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ : 080–23378375–80, 23474408, 23573291

**ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು ದೂ: 080–23449933/34

**ಇ–ಸ್ಟಾಂಪಿಂಗ್ ವಿಭಾಗ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055

**ಬೆಂಗಳೂರು ಪ್ರಾಂತೀಯ ಕಛೇರಿ :** "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560055 ದೂ: 080–23525546.

**ಮೈಸೂರು ಪ್ರಾಂತೀಯ ಕಛೇರಿ :** ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299

**ಬೆಳಗಾವಿ ಪ್ರಾಂತೀಯ ಕಛೇರಿ :** #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.

**ಕಲಬುರಗಿ ಪಾಂತೀಯ ಕಛೇರಿ :** # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003